
ಸಂಪುಟ 23 ಸಂಚಿಕೆ 15
ಏಪ್ರಿಲ್ 15, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಷ್ಯಾರಗ



ಅಲ್ಲಿ ಮಕ್ಕಳಾ ಮಾರ್ಯಾರೋ

ಬೆನ್ನು ಹತ್ತಿರುವ ಭಸ್ಮಾಸುರ: ಎನ್ರಾನ್



KSFC: ವಿಜಾಪುರದ ಬಕಾಸುರರು

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 62

ಪ್ರಜಾಪ್ರಭುತ್ವವನ್ನು ಹೊಸಕಿ ಹಾಕಿದ ತುರ್ತುಪರಿಸ್ಥಿತಿ

ಐಎಲ್‌ಓ ದ ಸಂಘಟನೆ ಸ್ವಾತಂತ್ರ್ಯದ ಸಮಿತಿ (Committee of Freedom of Association) ಭಾರತ ಸರ್ಕಾರವನ್ನು ಭೇಟಿಯಾಗಿ ನಮ್ಮ ದೂರಿನ ಕುರಿತು ಚರ್ಚಿಸಿತು. ಪಶ್ಚಿಮ ಬಂಗಾಳದಲ್ಲಿನ ಪರಿಸ್ಥಿತಿ ಬಗ್ಗೆ ಐಎಲ್‌ಓ ತೀವ್ರಕಳವಳ ವ್ಯಕ್ತಪಡಿಸಿತು. ಸಮಿತಿಯ ವರದಿ 1973 ರ ಫೆಬ್ರವರಿ 19 ರಂದು ಪ್ರಕಟವಾಯಿತು. ವರದಿ ಹೀಗೆ ಹೇಳಿತ್ತು -

"ಟ್ರೇಡ್ ಯೂನಿಯನ್ ನಾಯಕರು ಹಾಗೂ ಕಾರ್ಯಕರ್ತರ ಮೇಲಿನ ದಾಳಿ ಅಷ್ಟಕ್ಕೇ ಸೀಮಿತವಾಗಿಲ್ಲ. ಆಂದೋಲನದ ಮೇಲೆ ದಾಳಿ ಮಾಡುವ ಪ್ರಯತ್ನ ನಡೆದಿದೆ ಎಂಬುದು ಸಮಿತಿಯ ಅಭಿಪ್ರಾಯ. ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಗಳ ಮೇಲೆ ದಾಳಿ ನಡೆಯುತ್ತಿರುವುದು ಸರ್ಕಾರಕ್ಕೆ ಗೊತ್ತಿದ್ದರೂ ಅವನ್ನು ನಿವಾರಿಸಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂಬುದು ದೂರುಗಳಿಂದ ಸ್ಪಷ್ಟವಾಗುತ್ತದೆ"

ಹಿಂಸೆ ಮತ್ತು ಅಧಿಕಾರದ ಬಲಿಪೀಠದಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಯುತ್ತಿರುವ ದಿನಗಳಲ್ಲಿ ಇನ್ನೂ ಒಂದು ಪ್ರಹಸನ ನಡೆಯಿತು. ಕಾಂಗ್ರೆಸ್ ಪಕ್ಷ ಪಾಟ್ನಾದಲ್ಲಿ 2000 'ಫ್ಯಾಸಿಸ್ಟ್ ವಿರೋಧಿ ರ್‍ಯಾಲಿ' ಯನ್ನು ನಡೆಸಿತು! ಆಕ್ರಮಣಕಾರರೇ ರಕ್ಷಕರಾದರೆಂದರೆ ಅದರಲ್ಲಿ ಏನೋ ಉದ್ದೇಶವಿರಲೇಬೇಕು.

(ಜಯಪ್ರಕಾಶ್ ನಾರಾಯಣರ ಹೆಚ್ಚುತ್ತಿರುವ ಪ್ರಭಾವದ ವಿರುದ್ಧ ಒಂದು ರೀತಿಯ ಚಳುವಳಿಯನ್ನು ಕಟ್ಟುವುದು ಕಾಂಗ್ರೆಸ್‌ನ ಮುಖ್ಯ ಉದ್ದೇಶವಾಗಿತ್ತು)

ಆ ಸಂದರ್ಭದಲ್ಲೇ ರೈಲ್ವೆ ಕಾರ್ಮಿಕರ ಐತಿಹಾಸಿಕ ರಾಷ್ಟ್ರವ್ಯಾಪಿ ಮುಷ್ಕರ ನಡೆಯಿತು. ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ 1974 ರ ಮೇ 8 ರಂದು 20 ಲಕ್ಷಕ್ಕೂ ಹೆಚ್ಚು ರೈಲ್ವೆ ನೌಕರರು ಅನಿರ್ದಿಷ್ಟ ಅವಧಿಯ ಮುಷ್ಕರವನ್ನು ಆರಂಭಿಸಿದರು. ಅಧಿಕಾರಿಗಳ ಎಲ್ಲ ಎಚ್ಚರಿಕೆಗಳನ್ನು ಅವರು ಕಡೆಗಣಿಸಿದರು. ಎನ್‌ಸಿಸಿಆರ್‌ಎಸ್ ಈ ಹೋರಾಟಕ್ಕೆ ಕರೆ ನೀಡಿತ್ತು.

ರೈಲ್ವೆಗೆ ಕೈಗಾರಿಕೆಯ ಸ್ಥಾನಮಾನ, ನ್ಯಾಯ ಸಮ್ಮತ ಡಿಎ ಮತ್ತು ಬೋನಸ್, ಹಂಗಾಮಿ ಕಾರ್ಮಿಕರನ್ನು ನೇಮಿಸುವ ಪದ್ಧತಿ ರದ್ದು ಮತ್ತು ಗರಿಷ್ಠ 8 ಗಂಟೆ ಕೆಲಸ ಇವು ಪ್ರಮುಖ ಬೇಡಿಕೆಗಳಾಗಿದ್ದವು.

ಸರ್ಕಾರ ಈ ಮುಷ್ಕರ ನಡೆಯುವುದನ್ನು ತಡೆಯಬಹುದಿತ್ತು. ಯಾಕೆಂದರೆ ಕಾರ್ಮಿಕರ ಮನೋಸ್ಥಿತಿ ಅದಕ್ಕೆ ಗೊತ್ತಿತ್ತು. ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಸಂಸದರು ಅನೇಕ ಬಾರಿ ಈ ಬಗ್ಗೆ ಎಚ್ಚರಿಕೆ ನೀಡಿದ್ದರು. ಚರ್ಚೆ ನಡೆಯಬೇಕೆಂದು ಸಲಹೆ ಮಾಡಿದ್ದರು.

ಕೇವಲ ಆರು ತಿಂಗಳ ಹಿಂದೆ 'ಮುಷ್ಕರ ಮತದಾನ' ನಡೆಸಲಾಗಿತ್ತು. ಬೇಡಿಕೆಗಳನ್ನು ಈಡೇರಿಸದಿದ್ದರೆ ಶೇಕಡ 93 ಕಾರ್ಮಿಕರು ಮುಷ್ಕರ ನಡೆಸುವರು ಎಂದು ಆದರಿಂದ ತಿಳಿದುಬಂದಿತ್ತು. ಆದರೆ ಸರ್ಕಾರ ಸಂಘರ್ಷ ಬಯಸಿತ್ತು. ಹೀಗಾಗಿ ಮುಷ್ಕರ ಅನಿವಾರ್ಯವಾಯಿತು.

ರಾಷ್ಟ್ರದ ರೈಲು ಹಳಿಗಳ ಮೇಲಿನ ಗಾಲಿಗಳು ಉರುಳುವುದು ಸ್ಥಗಿತವಾಗುವುದಕ್ಕೂ ಮುನ್ನ ಸರಿಸುಮಾರು 6000 ರೈಲ್ವೆ ಕಾರ್ಮಿಕರನ್ನು ಬಂಧಿಸಲಾಯಿತು.

ಇಂದಿರಾಗಾಂಧಿ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲಾಯಿತು. ರೈಲ್ವೆ ಕಾರ್ಮಿಕರಿಗೆ ಬೆಂಬಲ ಸೂಚಿಸಲು ಮೇ 15 ರಂದು ಯಶಸ್ವಿಯಾಗಿ ರಾಷ್ಟ್ರವ್ಯಾಪಿ ಮುಷ್ಕರ ನಡೆಯಿತು. ಆದರೆ ಕಾಂಗ್ರೆಸ್ ಇದನ್ನು ಎಚ್ಚರಿಕೆಯ ಗಂಟೆಯಾಗಿ ಪರಿಗಣಿಸಲಿಲ್ಲ. ಬದಲು ಜನರ ಮೇಲೆ ಒತ್ತಡವನ್ನು ಹೆಚ್ಚಿಸಿತು. ಅನೇಕ ಕಡೆ ಗೋಲಿಬಾರ್ ನಡೆಯಿತು. ಕಾರ್ಮಿಕರ ಅಮಾನತು, ವಜಾ ಮುಂದುವರಿದೇ ಇತ್ತು. 50,000 ಕ್ಕೂ ಹೆಚ್ಚು ರೈಲ್ವೆ ಕಾರ್ಮಿಕರನ್ನು ಬಂಧಿಸಲಾಯಿತು. 20,000 ನೌಕರರನ್ನು ವಜಾ ಮಾಡಲಾಯಿತು. ಕನಿಷ್ಟ 40 ಸಾವಿರ ಜನರು ಮನೆ ಮಾರು ಕಳಕೊಂಡರು. ಇಷ್ಟೆಲ್ಲಾ ಆದರೂ ಮುಷ್ಕರ ನಿರತರ ಒಗ್ಗಟ್ಟಿಗೆ ಏನೂ ಬಾಧಕ ಬರಲಿಲ್ಲ. 20 ದಿನ ಮುಷ್ಕರ ನಡೆದರೂ ಬೇಡಿಕೆಗಳು ಈಡೇರಲಿಲ್ಲ. ಮತ್ತೊಮ್ಮೆ ವಿಶ್ವಾಸದ್ರೋಹ ಕಾಂಗ್ರೆಸ್ಸಿನ ನೆರವಿಗೆ ಬಂತು. ಮುಷ್ಕರ ಹಿಂದೆ ಪಡೆಯಲಾಯಿತು.

ಮುಷ್ಕರವನ್ನು ಮುಂದುವರಿಸಲು ಸಾಕಷ್ಟು ಅವಕಾಶಗಳಿವೆ. ಹಾಗೆ ಮಾಡಿದರೆ ಸರ್ಕಾರವನ್ನು ಸಂಧಾನಕ್ಕೆ ಒಪ್ಪಿಸಬಹುದಾಗಿದೆ ಎಂದು ಲೋಕಸಭೆಯಲ್ಲಿ ಸಿಪಿಐ(ಎಂ)ನ ಉಪನಾಯಕರಾಗಿದ್ದ ಸಮರ್ ಮುಖರ್ಜಿ ಹೇಳಿಕೆಯೊಂದರಲ್ಲಿ ಅಭಿಪ್ರಾಯ ಪಟ್ಟರು.

ರೈಲ್ವೆ ಮುಷ್ಕರ 20 ದಿನ ನಡೆದದ್ದು ಅದರ ದೀರ್ಘತೆಯ ದೃಷ್ಟಿಯಿಂದ ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ಅಭೂತಪೂರ್ವ ವಿದ್ಯಮಾನವಾಗಿತ್ತು. ಅಷ್ಟೇ ಅಲ್ಲದೆ, ಜನರು ಒಗ್ಗಟ್ಟಿನಿಂದ ಇದ್ದರೆ ಸರಕಾರ ನಡೆಸುವುದು ಹಾಗೂ ಆಳುವ ವರ್ಗಗಳು ಬಿಕ್ಕಟ್ಟಿಗೆ ಸಿಲುಕುತ್ತದೆ ಮತ್ತು ಇನ್ನಷ್ಟು ಹತಾಶೆಗೆ ಒಳಗಾಗುತ್ತವೆ ಎಂಬುದನ್ನು ಅದು



ಸಾಬೀತು ಪಡಿಸಿತು.

ಬೇಡಿಕೆಗಳ ಅಂಗೀಕಾರಕ್ಕೆ ಸಂಬಂಧಿಸಿದಂತೆ ಮುಷ್ಕರ ಯಾವುದೇ ಫಲ ನೀಡದಿದ್ದರೂ ಅದು ದೇಶದ ಮೇಲೆ ಭಾರೀ ಪ್ರಭಾವ ಬೀರಿತು. ಹಾಗೂ ನಮಗೆ ಹೊಸ ಚೈತನ್ಯ ನೀಡಿತು. ಬಿಹಾರ ಮತ್ತು ಇತರ ಪ್ರದೇಶಗಳಲ್ಲಿ ಜೆಪಿ ಚಳುವಳಿಗೆ ಸಿಕ್ಕಿದ ಸ್ವಯಂಸ್ಫೂರ್ತಿಯ ಬೆಂಬಲದಲ್ಲಿ ಅದು ಪ್ರತಿಫಲನಗೊಂಡಿತು.

ಸುಳ್ಳು ಆಶ್ವಾಸನೆಗಳು ಮತ್ತು 'ಗರೀಬಿ ಹಠಾವೋ' ದಂಥ ಘೋಷಣೆಗಳಿಂದ ತನ್ನ ಬೇಳೆ ಬೇಯುವುದಿಲ್ಲ ಎನ್ನುವುದನ್ನು ಇಂದಿರಾ ಗಾಂಧಿ ಅರಿತರು. ಜನರಿಗೆ ತನ್ನ ಆಟ ಏನೆಂಬುದು ಗೊತ್ತಾಗುತ್ತಿದೆ ಎಂಬುದು ಇಂದಿರಾಗೆ ತಿಳಿಯಿತು. ವಾಸ್ತವವಾಗಿ, ಕಾಂಗ್ರೆಸ್‌ನ ಒಳಗೂ ಅಸಮಾಧಾನದ ಅಲೆ ಎದ್ದಿತ್ತು. ಅನೇಕ ಉನ್ನತ ಮುಖಂಡರೂ ಸರ್ಕಾರದ ನೀತಿಗಳನ್ನು ಬಹಿರಂಗವಾಗಿ ಟೀಕಿಸಿದ್ದರು. ಹಾಗೂ ಇಂದಿರಾಗಾಂಧಿಗೆ ಬೆಂಬಲವನ್ನು ಇನ್ನು ಮುಂದುವರಿಸಿದರೆ ಜನರನ್ನು ಎದುರಿಸುವುದು ತಮಗೆ ಕಷ್ಟವಾಗುತ್ತದೆ ಎನ್ನುವುದೂ ಈ ನಾಯಕರಿಗೆ ಗೊತ್ತಾಯಿತು. ಪಶ್ಚಿಮ ಬಂಗಾಳದಲ್ಲಿ ಕೂಡ ಇದು ಗಮನಕ್ಕೆ ಬಂತು. ಕೆಲವು ಕಾಂಗ್ರೆಸ್ಸಿಗರು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯನ್ನು ಟೀಕಿಸಿದರು. ಅವರಲ್ಲಿ ಅನೇಕರು ತಮ್ಮದೇ ಸ್ವಂತ ಅಂಗರಕ್ಷಕರನ್ನು ಇಟ್ಟುಕೊಂಡರು.

ಜನತಂತ್ರದ ಕತ್ತು ಕತ್ತರಿಸಿದ ತುರ್ತು ಪರಿಸ್ಥಿತಿ

ಇಂತಹ ಸ್ಫೋಟಕ ಪರಿಸ್ಥಿತಿಯಲ್ಲಿ, 1975 ರ ಜೂನ್ 12 ರಂದು ಅಲಹಾಬಾದ್ ಹೈಕೋರ್ಟ್‌ನ ಸುವಿಖ್ಯಾತ ತೀರ್ಪು ಹೊರಬಿತ್ತು. ಇಂದಿರಾಗಾಂಧಿ ರಾಯ್‌ಬರೇಲಿ ಲೋಕಸಭೆ ಕ್ಷೇತ್ರದಿಂದ ಆಯ್ಕೆಯಾಗಿದ್ದನ್ನು ನ್ಯಾಯಮೂರ್ತಿ ಜಗಮೋಹನ್ ಸಿಂಗ್ ಅಸಿಂಧುಗೊಳಿಸಿದರು. ಅಷ್ಟೇ ಅಲ್ಲದೆ, ಆಕೆ ಆರು ವರ್ಷ ಕಾಲ ಯಾವುದೇ ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿದರು. ಆಕೆ ರಾಜೀನಾಮೆ ನೀಡಬೇಕೆಂಬುದು ಇಡೀ ದೇಶದ ಬಯಕೆಯಾಗಿತ್ತು. ಹೈಕೋರ್ಟಿನ ತೀರ್ಪು ಬಹಿರಂಗವಾದ ದಿನವೇ ಪ್ರಕಟವಾದ ಗುಜರಾತ್ ವಿಧಾನಸಭೆ ಚುನಾವಣೆಗಳ ಫಲಿತಾಂಶದಲ್ಲಿ ಕಾಂಗ್ರೆಸ್ ಮಣ್ಣು ಮುಕ್ಕಿತ್ತು.

ಇಂದಿರಾಗಾಂಧಿ ಗಾಬರಿಯಿಂದ ಚಡಪಡಿಸಿದರು. ಆಕೆಯ ಸರ್ವಾಧಿಕಾರಿ ಪ್ರವೃತ್ತಿಗೆ ಈಗ ಮಿತಿಯೇ ಇಲ್ಲವಾಯಿತು. ಸಂಕಷ್ಟದ ಪರಿಸ್ಥಿತಿ ಜತೆಗೆ ಅಧಿಕಾರವನ್ನು ಕಳೆದುಕೊಳ್ಳುವ ಭೀತಿಯಿಂದ ಜಗತ್ತಿನ ಯಾವುದೇ ಭಾಗದಲ್ಲಾದರೂ ಸರ್ವಾಧಿಕಾರಿಗಳು ಏನು ಮಾಡುತ್ತಾರೋ ಅದನ್ನೇ ಇಂದಿರಾಗಾಂಧಿಯೂ ಆಯ್ಕೆ ಮಾಡಿಕೊಂಡರು.

ಜನತೆಯ ಎಲ್ಲಾ ಹಕ್ಕುಗಳನ್ನು ಕಸಿದುಕೊಳ್ಳಲು ಆಕೆ ಮುಂದಾದರು. 1975 ಜೂನ್ 26 ರಂದು ದೇಶದ ಮೇಲೆ ಕರಾಳ ತುರ್ತುಪರಿಸ್ಥಿತಿ ಹೇರಿಕೆಯಾಯಿತು. ಸರ್ವಾಧಿಕಾರಿ ಆಡಳಿತವನ್ನು ಭಾರತದಲ್ಲಿ ಸಾಂಸ್ಥೀಕರಿಸಲಾಯಿತು.

ಎಲ್ಲ ರಾಜಕೀಯ ಚಟುವಟಿಕೆಗಳನ್ನು ಸರಕಾರ ನಿಷೇಧಿಸಿತು. ಇಂದಿರಾಗಾಂಧಿ ಮಾತ್ರವೇ ಹೇಳಿಕೆಗಳನ್ನು ನೀಡಬಹುದಿತ್ತು. ಆಕೆಯ ಪಕ್ಷದ ಮುಖಂಡರಿಗೆ ಕೂಡ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ಇರಲಿಲ್ಲ. ಬೇರೆ ಪಕ್ಷಗಳ ಹಕ್ಕುಗಳ ಜತೆ ಜತೆಯಲ್ಲೇ ಇಂದಿರಾಗಾಂಧಿ ಸ್ವತಃ ತನ್ನ ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ಗೋರಿ ತೋಡಲು ಆರಂಭಿಸಿದರು. ಎಲ್ಲ ಮೂಲಭೂತ ಹಕ್ಕುಗಳನ್ನು ಕಸಿಯಲಾಯಿತು. ಬಂಧಿಸಲಿಕ್ಕಾಗಿ ಎಲ್ಲ ಪ್ರತಿಪಕ್ಷಗಳ ನಾಯಕರ ಪಟ್ಟಿಯನ್ನು ಸಿದ್ಧಪಡಿಸಲಾಯಿತು. ಮೀಸಾ ಮತ್ತು ಡಿಐಆರ್‌ನಂಥ ಕರಾಳ ಕಾನೂನುಗಳನ್ನು ಯಾವುದೇ ದಯ-ದಾಕ್ಷಿಣ್ಯಗಳಿಲ್ಲದೆ ಅನುಷ್ಠಾನಕ್ಕೆ ತರಲಾಯಿತು.

ಇಡೀ ಪ್ರತಿಪಕ್ಷ ದಾಳಿಗೆ ತುತ್ತಾಯಿತು. ಅಷ್ಟೊಂದು ಸಂಖ್ಯೆಯ ಪ್ರತಿಪಕ್ಷ ನಾಯಕರು ಯಾವತ್ತೂ ಏಕಕಾಲಕ್ಕೆ ಬಂಧನದಲ್ಲಿ ಇರಲಿಲ್ಲ. ಸಂಸದೀಯ ಕಾರ್ಯನಿರ್ವಹಣೆ ಅಣಕದ ಮಟ್ಟಕ್ಕೆ ಇಳಿಯಿತು. ಸದನದಲ್ಲಿ ತನಗಿದ್ದ ಭಾರಿ ಬಹುಮತವನ್ನು ಬಳಸಿಕೊಂಡ ಇಂದಿರಾಗಾಂಧಿ ಇನ್ನೂ ಇತರ ಹಲವು ಕರಾಳ ಕಾನೂನುಗಳನ್ನು ಅಂಗೀಕಾರವಾಗುವಂತೆ ನೋಡಿಕೊಂಡರು. ಸಂಸತ್ತಿನ ಕಲಾಪಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದನ್ನು ನಿಷೇಧಿಸುವುದು ಹಾಗೂ ಬೋನಸನ್ನು ತೆಗೆದುಹಾಕುವುದು ಇವೇ ಮೊದಲಾದ ಕಾನೂನುಗಳು ಅವುಗಳಲ್ಲಿ ಸೇರಿದ್ದವು.

ಹಿಂಸೆ ಪರ್ವ

ಬಂಧಿತ ನಾಯಕರಿಗೆ ಸೆರೆಮನೆಗಳಲ್ಲಿ ಅಪಾರ ಹಿಂಸೆ ನೀಡಲಾಯಿತು. ಸಿಗರೇಟುಗಳಿಂದ ಸುಡಲಾಯಿತು, ಐಸ್‌ಮೇಲೆ ಮಲಗಿಸಲಾಯಿತು. ವಿದ್ಯುತ್ ತಂತಿಗಳನ್ನು ಕಟ್ಟಿ ಶಾಕ್ ಕೂಡ ನೀಡಲಾಯಿತು. ಬಹುತೇಕ ಮುಖಂಡರನ್ನು ದೂರದೂರದ ಜೈಲುಗಳಲ್ಲಿ ಇಡಲಾಯಿತು. ಅವರನ್ನು ಯಾರೂ ಭೇಟಿ ಮಾಡುವಂತಿರಲಿಲ್ಲ. ಆಂಧ್ರಪ್ರದೇಶ, ತ್ರಿಪುರಾ, ಅಸ್ಸಾಂ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಮಧ್ಯ ಪ್ರದೇಶಗಳಲ್ಲಿ ನಮ್ಮ ಪಕ್ಷದ ಉನ್ನತ ಮುಖಂಡರನ್ನು ಸೆರೆಮನೆಗೆ ತಳ್ಳಲಾಯಿತು.

1975 ರ ಅಕ್ಟೋಬರ್ ವರೆಗೆ ಪಶ್ಚಿಮ ಬಂಗಾಳದಲ್ಲಿ 367 ನೇತಾರರು, ಕೇರಳದಲ್ಲಿ ನೂರಕ್ಕೂ ಹೆಚ್ಚು, ರಾಜಸ್ಥಾನದಲ್ಲಿ 160, ಅಸ್ಸಾಂನಲ್ಲಿ 87, ತ್ರಿಪುರಾದಲ್ಲಿ 57, ಒರಿಸ್ಸಾದಲ್ಲಿ 43, ಉತ್ತರ ಪ್ರದೇಶದಲ್ಲಿ 57, ಪಂಜಾಬ್‌ನಲ್ಲಿ 34, ಬಿಹಾರದಲ್ಲಿ 2, ಆಂಧ್ರಪ್ರದೇಶದಲ್ಲಿ 15 ಮತ್ತು ಹರ್ಯಾಣದಲ್ಲಿ ನಮ್ಮ ಪಕ್ಷದ 11 ಮುಖಂಡರನ್ನು ಬಂಧಿಸಲಾಯಿತು.

ತುರ್ತುಪರಿಸ್ಥಿತಿ ಹೇರಿದ ಒಂದು ತಿಂಗಳಲ್ಲಿ 23 ಸಂಸತ್ ಸದಸ್ಯರ ಸಹಿತ ಒಂದು ಸಾವಿರಕ್ಕೂ ಹೆಚ್ಚು ಜನರು ಬಂಧಿತರಾದರು. ನಮ್ಮ ಪಾಲಿಟ್‌ಬ್ಯೂರೋ ಸದಸ್ಯರಾದ ಇ.ಎಂ.ಎಸ್., ಎ.ಕೆ.ಜಿ., ಎಂ.ಬಸವಪೊನ್ನಯ್ಯ ಸೆರೆಮನೆ ಸೇರಿದರು.

1976 ರ ಜನವರಿ 16 ರಂದು ನಡೆಯಬೇಕಿದ್ದ ಚೀನಿ ನೇತಾರ ಚೌಎನ್ ಲೈ ಶ್ರದ್ಧಾಂಜಲಿ ಸಭೆಯನ್ನು ರಾಜ್ಯಪಾಲರಿಂದ ಬಂದ ಪತ್ರದ ಮೇರೆಗೆ ರದ್ದುಪಡಿಸಲಾಯಿತು. ಆಡಳಿತಗಾರರು ಯಾವ ಮಟ್ಟ ಮುಟ್ಟಿದ್ದರು ಎನ್ನುವುದಕ್ಕೆ ಅದು ಸಾಕ್ಷಿಯಾಗಿದೆ. ಸಭೆಯ ವೇಳೆ ಹಿಂಸೆಯಾಗಬಹುದು ಎಂಬ ಭೀತಿ ಇದೆ. 1971 ರ ರಕ್ಷಣೆ ಮತ್ತು ಆಂತರಿಕ ಭದ್ರತೆ ಕಾನೂನಿನ 69ನೇ ಸೆಕ್ಷನ್ ಅನ್ವಯ ಸಭೆ ನಡೆಸಲು ಅವಕಾಶ ನೀಡುವುದಿಲ್ಲ ಎಂದು ರಾಜ್ಯಪಾಲರು ಹೇಳಿದರು. ಇದನ್ನು ಸರ್ಕಾರದ ಗೆಜೆಟ್‌ನಲ್ಲಿ ಕೂಡ ಪ್ರಕಟಿಸಲಾಯಿತು.

ಇನ್ನೂ ಒಂದು ಉದಾಹರಣೆ. ಸುಪ್ರೀಂ ಕೋರ್ಟ್‌ನಲ್ಲಿ ಒಂದು ಮೊಕದ್ದಮೆ ನಡೆಯುತ್ತಿತ್ತು. ಅಟಾರ್ನಿ ಜನರಲ್ ನಿರೇನ್ ಡೇ ಸರ್ಕಾರದ ಪರವಾಗಿ ವಾದಿಸುತ್ತಿದ್ದರು. ಕಲಾಪದ ವೇಳೆ ನ್ಯಾಯಾಧೀಶರು ಕೇಳಿದರು "ಈ ಆಡಳಿತದಲ್ಲಿ ಜನರು ಬದುಕುವ ಹಕ್ಕನ್ನು ಕಳೆದುಕೊಂಡಿದ್ದಾರೆಯೇ?" ಅಟಾರ್ನಿ ಜನರಲ್ ತಕ್ಷಣವೇ ನೀಡಿದ ಉತ್ತರ "ನಿಜಕ್ಕೂ ಹೌದು ಮಹಾಸ್ವಾಮಿ"(Preciily that, your honour)

ಪರಂಗಿಯವರನ್ನು ಮೀರಿಸಿದರು.....

(ಮುಂದುವರಿಯುವುದು)

ಓದುಗರ ಪತ್ರ

ಸಂಪಾದಕರೆ,
ಬಾಲ್ಕೊ ಬಗೆಗಿನ ಲೇಖನವನ್ನು ನಲವತ್ತು ಪ್ರತಿ ಜೆರಾಕ್ಸ್ ಮಾಡಿ ನಮ್ಮ ಫ್ಯಾಕ್ಟರಿಯ ಎಲ್ಲಾ ವಿಭಾಗಗಳ ನೋಟೀಸ್ ಬೋರ್ಡ್‌ನಲ್ಲಿ ಅಂಟಿಸಿದೆವು. ಕಾರ್ಮಿಕರು ಮೆಚ್ಚಿಕೊಂಡರು.

ಸುಂದರರಾಜನ್
ಬಿಹೆಚ್‌ಇಎಲ್, ಬೆಂಗಳೂರು

★★★

ಎಡರಂಗ ಸರ್ಕಾರವನ್ನು ಉರುಳಿಸಲು ಹೂಡಿದ ಸಂಚುಗಳನ್ನು ಓದಿ ಕೋಪ ಕುದಿಯಿತು. ಈ ಬಾರಿಯೂ ಜನ ತಕ್ಕ ಉತ್ತರ ಹೇಳಬೇಕು

- ನಾರಾಯಣ ಸ್ವಾಮಿ,
ಬಂಗಾರುಪೇಟೆ

★★★

ಮಾರ್ಚ್ 25 ರ ಸಂಚಿಕೆಯ ಕಥೆ 'ಮನಸ್ಸಿನಲ್ಲಿ ಮನೆ ಮಾಡಿದ ಆ ಕೂಸು' ಅರ್ಥವಾಗಲಿಲ್ಲ.

ಸಹಿ,
ತೊಕ್ಕೊಟ್ಟು, ಮಂಗಳೂರು

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ.ಗುರುಶಾಂತ್

ಕೌಜಲಗಿ ಟೇಪ್ ಹಗರಣ : ಕೊನೆಗೂ ರಾಜೀನಾಮೆ

ಕರ್ನಾಟಕದಲ್ಲೊಂದು ಲಂಚ ಹಗರಣ ಸ್ಫೋಟಗೊಂಡಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷ ಪಿ.ಎಸ್.ಕೌಜಲಗಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಯಥಾರೀತಿ ಎಸ.ಎಂ.ಕೃಷ್ಣ, ಸ್ವತಃ ಕೌಜಲಗಿ ಈ ರಾಜೀನಾಮೆ ನೈತಿಕತೆಯದ್ದು, ಕಾಂಗ್ರೆಸನ ಉನ್ನತ ಪರಂಪರೆಯದ್ದು ಎಂದು ವ್ಯಾಖ್ಯಾನಿಸಿದ್ದಾರೆ. ಕೌಜಲಗಿಯುವರು ಈ ಆರೋಪದ ತನಿಖೆ ಶೀಘ್ರ ಆಗಲೆಂದು ಲೋಕಾಯುಕ್ತಕ್ಕೆ ಪತ್ರ ಬೇರೆ ಬರೆದಿದ್ದಾರೆ. ನಿರ್ದೋಷಿಯೆಂದು ಸಾಬೀತಾಗುವುದಾಗಿ ಹೇಳಿದ್ದಾರೆ. ಆದರೆ ಇದೇ ಕೌಜಲಗಿ ಸಾಹೇಬರು,"ಮುಖ್ಯಮಂತ್ರಿಗಳು ಈ ಹಗರಣ ಹೊರ ಬಂದ ನಂತರ ರಾಜೀನಾಮೆ ಅಗತ್ಯವಿಲ್ಲವೆಂದು ಹಲವು ಬಾರಿ ನಿರಾಕರಿಸಿ ಸಾರಿ ಸಾರಿ ಹೇಳಿದ್ದರು. ಆದರೆ ಉಂಟಾದ ಒತ್ತಡಗಳಿಂದ, ನಿರಾಕರಿಸಲೂ ಆಗದೆ ರಾಜೀನಾಮೆ ನೀಡಿದ ಬಳಿಕ ಕೌಜಲಗಿಯವರು ತಮ್ಮ ಪಕ್ಷದವರ ಪಿತೂರಿಯಿದು, ತಮ್ಮ ಏಳಿಗೆ (ಎಂತಹದ್ದೋ?) ಸಹಿಸದ ಸಚಿವ ಹೆಚ್.ಕೆ.ಪಾಟೀಲರು ಹೊಸದ ಸಂಚು ಎಂದು ನೇರವಾಗಿ ಖಾರವಾಗಿ ಹೇಳಿ ಹಲ್ಲು ಮಸೆಯುತ್ತಿದ್ದಾರೆ. ಈ ಮೂಲಕ ಕಾಂಗ್ರೆಸ್ ಒಳಗಿನ ಕಚ್ಚಾಟವೂ ಬಹಿರಂಗಗೊಂಡು ಕೇಕೆ ಹಾಕುತ್ತಿದೆ.

ಕೌಜಲಗಿಯವರ ಈ ಟೇಪ್ ಹಗರಣ ನಡೆದು ವರ್ಷಗಳೆರಡಾದವು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯ ನಿರುದ್ಯೋಗಿ ಯುವಕ ಅನಿಲ್ ಕದಂ ಜಿಲ್ಲಾಪಂಚಾಯತಿಗೆ ಮೆಟಿರಿಯರ್ಸ್ ಪೂರೈಸುವ ಕಂಟ್ರಾಕ್ಟ್ ಕೊಡಿಸಬೇಕೆಂದು ಶಾಸಕ ಕೌಜಲಗಿಯವರನ್ನು ಕೇಳಿದ. ಆಸ್ವಾಸನೆ ಇತ್ತ



ಕೌಜಲಗಿ ಪ್ರತಿ ತಿಂಗಲೂ ಎರಡು ಲಕ್ಷದ ಕಂಟ್ರಾಕ್ಟ್ ಕೊಡಿಸುವುದಾಗಿಯೂ ಅದರಲ್ಲಿ ಶೇ 10 ತನ್ನ ಕಮಿಷನ್ ಎಂದೂ ತಿಳಿಸಿ, ಎರಡು ತಿಂಗಳ ಅಡ್ವಾನ್ಸ್ ನೀಡಲು ಸೂಚಿಸಿದ್ದರಂತೆ. ಅಡ್ವಾನ್ಸ್ ಹಣ ಕಂತುವಾರು ನೀಡಿದರೂ ಕಂಟ್ರಾಕ್ಟ್ ಸಿಗದೇ ಸತಾಯಿಸಿದನೆಂಬುದು ಒಂದು ಕಡೆ. ಹೀಗೆ ರೋಸಿ ಎಂ.ಎಲ್.ಸಿ. ಸುರೇಶ್ ಜಾರಕಿಹೊಳಿಯ ಸೂಚನೆಯಂತೆ ಹಂತಹಂತವಾಗಿ ನೀಡಿದ ನೋಟಿನ ಕಂತೆಗಳ ವಿಡಿಯೋ ತೆಗೆದದ್ದು, ಕೊನೆಗೆ ಲಂಚಾವಾತಾರದ ಕ್ಯಾಸೆಟ್ಸ್ ಜೊತೆಗೆ ಲೋಕಾಯುಕ್ತಕ್ಕೆ ದೂರು ನೀಡಿದ್ದಾಗಿದೆ. ದೂರು ಸಂಖ್ಯೆ LOK.BGM./2/99-2000 AR 2/U74 ಅದರ ಟೇಪ್‌ನ ಕೆಲವು ಫೋಟೋಗಳೆಂಬುದು ಪ್ರಕಟವೂ ಆಗಿದೆ.

ಈ ದೂರು ದಾಖಲಾಗಿ ವರ್ಷಗಳುರುಳಿದ್ದರೂ ತನಿಖೆ ಕೊನೆ ಘಟ್ಟ ಕಾಣಲಿಲ್ಲ. ಅಧಿಕಾರ ನಡೆಸುತ್ತಿರುವ ಆಳುವ ಪಕ್ಷದ ಅಧ್ಯಕ್ಷರ ಮೇಲಿನದೆ ಕೇಸ್ ಎಂಬುದು ಪರಿಣಾಮ ಬೇರಿಲ್ಲ ಎಂದು ಹೇಗೆ ಹೇಳುವುದು?

ಕೌಜಲಗಿ ರಾಜೀನಾಮೆ ಪ್ರಕರಣ, ಕೃಷ್ಣರವರ ಹೈಟೆಕ್ ಆಡಳಿತ, ಪ್ರಾಮಾಣಿಕ ಹಾಗೂ ಪಾರದರ್ಶಕವೆಂಬ ಬೊಗಳೆ ಸಾಮ್ರಾಜ್ಯದ ಬಯಲಾಗಿ ಕಾಂಗ್ರೆಸ್‌ನ ಮುಖ್ಯ ಕಿರೀಟವೊಂದು ಉರುಳಿದೆ. ಕಾಂಗ್ರೆಸ್ ಸರ್ಕಾರ, ನಾಯಕರು ಇದರಿಂದ ಎಳ್ಳಷ್ಟು ನಾಚಿಕೆ ಪಟ್ಟಂತೆ ಕಾಣುತ್ತಿಲ್ಲ. ಭ್ರಷ್ಟತೆಯನ್ನೇ ಮೌಲ್ಯವಾಗಿ ಸರ್ಕಾರ, ಸಚಿವ, ಶಾಸಕರುಗಳು ಅಧಿಕಾರಿಗಳ ಕೆಲಸವೇ ಎಂಬಂತೆ ಒಗ್ಗಿಸಿಕೊಂಡಿರುವುದು ವ್ಯವಸ್ಥೆ ತಲುಪಿರುವ ಅವನತಿಯನ್ನು ಸೂಚಿಸು ತ್ತದೆ. ಇದು ಒಂದು ಅನಿಲನ ಕಥೆ. ನಿರುದ್ಯೋಗಿಗಳು, ಅಸಹಾಯಕರು, ಸಹಾಯ ಅರಸಿ ಬಂದ ಅದೆಷ್ಟು ಜನ ಇಂತಹ ರಾಕ್ಷಸರ ಕೈಯಲ್ಲಿ ಸಿಕ್ಕು ನರಳಿ, ನಾಶವಾಗಿದ್ದಾರೆ ಎಂದು ಯೋಚಿಸಿದರೆ ಲೆಕ್ಕಕ್ಕೆ ಸಿಗದಷ್ಟು. ಬಹುತೇಕ ಅನಾಮಧೇಯರು, ಮುಖ ಹಾಗೂ ಬಲವಿಲ್ಲದವರು. ಇಂತಹ ಪ್ರಕರಣಗಳು ಅದೆಷ್ಟು ಲಕ್ಷ ಟೇಪ್‌ಗಳು ಹೊರಬಹುದು ಕಾಣೆಯೂ ಆಗಬಹುದು.

ಈ ಕೌಜಲಗಿ ಟೇಪ್ ಪ್ರಕರಣವನ್ನು ಹಿಂಜಿ ಹಿಂಜಿ ಬಳಸಿಕೊಳ್ಳಲು ಯತ್ನಿಸಿದವರಲ್ಲಿ ಬಿಜೆಪಿಯವರದ್ದು ಪ್ರಧಾನ ಪಾಲಿದೆ. ಕೌಜಲಗಿ ರಾಜಿನಾಮೆಯಿಂದ ಬಿಜೆಪಿ ಪಾಲಗಳು ಸಂತೋಷಗೊಂಡಿದ್ದಾರೆ. ದೇಶದ ಮಹಾನ್ ರಕ್ಷಣಾ ಹಗರಣದ ಭ್ರಷ್ಟಾಚಾರದಲ್ಲಿ ಮುಖಕ್ಕೆ ಉಗಿಸಿಕೊಂಡು ಊನವಾಗಿದ್ದ, ಕೊಚ್ಚೆಗುಂಡಿಯಲ್ಲಿ ನಿತ್ಯವೂ ಮುಳುಗೇಳುತ್ತಿರುವ ಬಿಜೆಪಿ ಗ್ಯಾಂಗ್ ನಾವಷ್ಟೇ ಕಳ್ಳರಲ್ಲ, ಕಾಂಗ್ರೆಸ್‌ನವರೂ ಕಳ್ಳರು ಎಂದು ಹೇಳಿಕೊಂಡು ಹಿಗ್ಗುತ್ತಿದ್ದಾರೆ. ವಿರೋಧ ಪಕ್ಷದ ಸೀಟಿನಲ್ಲಿ ಕೂಡುವ ಜಗದೀಶ್ ಶೆಟ್ಟರ್ 'ಕಾಂಗ್ರೆಸ್ ತಟ್ಟೆಯಲ್ಲಿರುವುದು ಕತ್ತೆ [illegible]ವೂ, ತಮ್ಮದು ನೊಣವೆಂದು ಹೇಳಿಕೊಂಡಿರುವುದು ಈ ನಾಯಕ ಗಣ ತಲುಪಿರುವ ಪಾತಕದ ಪರಮಾವಧಿಯನ್ನು ತೋರಿಸುತ್ತದೆ. ಮತ್ತು ಹಣ ನುಂಗಲು ಕಂಟ್ರಾಕ್ಟಾದರೂ ಸರಿ, ಕಂಟ್ರಿಯಾದರೂ ಸರಿಯೇ ಎಂಬ ನೀಚ ವಾದ ವಿಜೃಂಭಿಸುತ್ತಿದೆ. ಹೇಳಿಕೇಳಿ ಇವರದ್ದು ಬನಿಯಾ (ವ್ಯಾಪಾರಿ) ಜನರ ಪಕ್ಷವಲ್ಲವೇ? ಮಾರಾಟದ ಸರಕು ಯಾವುದಾದರೇನು? ಕೊನೆಗೆ ತಾಯಿಯೂ ಆಗಬಹುದಲ್ಲ ಇವರಿಗೆ.

ಕೃಷ್ಣರವರು ಈಗಲಾದರೂ ಈ ಪ್ರಕರಣದ ಎಲ್ಲಾ ವಿವರಗಳನ್ನು ಜನರೆದುರು ತೆರೆದಿಡಬೇಕು. ಈ ಮೊಕದ್ದಮೆಯನ್ನು ಇನ್ನೂ ವಿಳಂಬಿಸದೇ ಲೋಕಾಯುಕ್ತವು ಕೂಡಲೇ ಇತ್ಯರ್ಥಪಡಿಸಿ, ಶಿಕ್ಷೆ ವಿಧಿಸಬೇಕು.

ನೀರಾ : ಸರ್ಕಾರ ಏಕಿಷ್ಟು ಕ್ರೂರ

ಹಾಸನ, ಮಂಡ್ಯ, ಪ್ರದೇಶಗಳ ರೈತರು ಮತ್ತೆ ಬೀದಿಗಿಳಿದು ಹೋರಾಡುತ್ತಿದ್ದಾರೆ. ಪೊಲೀಸರ ಕ್ರೂರ ಧಾಳಿಯನ್ನು ಮಹಿಳೆಯರು, ಮಕ್ಕಳು ಅನುಭವಿಸಿದ್ದಾರೆ. ಇಷ್ಟರಿಂದಲೇ ಎಲ್ಲವನ್ನೂ ತಣ್ಣಗಾಗಿಸಿಬಿಡಬಹುದೆಂಬ ಸರ್ಕಾರದ ಲೆಕ್ಕಾಚಾರ ತಪ್ಪಿದೆ: ಹೊಸ ಹೊಸ ಪ್ರದೇಶಗಳಲ್ಲಿಯೂ ಚಳುವಳಿ ಹಬ್ಬಿ ಇತರೆ ಸಂಘಟನೆಗಳೂ ಸೇರಿಕೊಳ್ಳುತ್ತಿವೆ. ಒಂದೆಡೆ ತೆಂಗಿನ ಬೆಲೆ ಕುಸಿತ, ಇನ್ನೊಂದೆಡೆ ತೆಂಗಿನ ಮರಗಳಿಗೆ 'ನುಸಿ' ಪೀಡೆ ರೋಗದಿಂದಾಗಿ ತೆಂಗಿನ ಬೆಳೆ ಸರ್ವನಾಶವಾದ ಹಿನ್ನೆಲೆಯಲ್ಲಿ ಅಪಾರ ಹಾನಿ ಅನುಭವಿಸಿ ಆತ್ಮಹತ್ಯೆಗೂ ಮೊರೆ ಹೋದ ದಾರುಣ ಸ್ಥಿತಿ ನಾಮ್ಮೆದುರು ಇದೆ. ಈ ರೋಗ ಪೀಡಿತ ಮರಗಳಿಂದ ಹೊಂಬಾಳೆ ಕತ್ತರಿಸಿದರೆ ಬೆಳೆ ಬೆಳೆಸಿಗುತ್ತದೆ ಎಂಬುದು ಒಂದು ಹಾಸನಜಿಲ್ಲೆ ರೈತರ ಅನುಭವ.

> **ಆದ್ಯಾತ್ಮ**
>
> ಆದ್ಯಾತ್ಮ ನಿಮಗಿರಲಿ ಏನಿಲ್ಲ ಅಡ್ಡಿ
> ವಿಜ್ಞಾನ ವಿಷಯದೊಳು ಹಾಕದಿರಿ ಕಡ್ಡಿ
> ಜಗದುಗುಡ ಹರಿಸುವುದು ಅಧ್ಯಾತ್ಮವೊಂದೆ
> ಅನ್ನುತ ಸುಳ್ಳನ್ನು ಬಿತ್ತದಿರಿ ಮುಂದೆ
>
> **ವಿಡಂಬಾರಿ**

ಇದೇ ಹೊಂಬಾಳೆಯಿಂದ 'ನೀರಾ' ಸಂಗ್ರಹಿಸಿ ಮಾರಿದರೆ (ಹೆಂಡಕ್ಕೂ ನೀರಕ್ಕೂ ಭಿನ್ನತೆ ಇದೆ ಎಂಬುದು ಗಮನಿಸಬೇಕು) ಕೊಂಚ ಹಣ ಕೈಗೆ ಸಿಕ್ಕಂತಾಗುತ್ತದೆ. ಫಸಲಿಗೆ ಬೆಲೆಯಿಲ್ಲದೇ ಕಂಗಾಲಾದ ಸ್ಥಿತಿಯಲ್ಲಿ ಸ್ವಲ್ಪ ಚೇತರಿಕೆ ಸಿಗುತ್ತದೆ ಎಂಬ ರೈತರ ಆಸೆ ಸಹಜವೇ ಆಗಿದೆ. ಈ ನುಸಿ ಪೀಡಿತ ಮರಗಳು ರಾಜ್ಯದ 9 ಜಿಲ್ಲೆಗಳಲ್ಲಿ ಈ ಕನಿಷ್ಠ 2 ಕೋಟಿಗೂ ಅಧಿಕ ಎಂಬುದು ಅಂದಾಜು. ಅಂದರೆ ಬಹುತೇಕ ಕುಟುಂಬಗಳು ಕೃಷಿಯನ್ನೇ ಆಧರಿಸಿದೆ.

ಈ ನೀರಾ ಅನಾರೋಗ್ಯಕಾರಿ ಎನ್ನುತ್ತದೆ ಸರ್ಕಾರ. ಇದರಿಂದ ಹೆಂಡ ತಯಾರಿಸಿ ಮಾರಬಹುದಲ್ಲ ಎಂದು ಪ್ರಶ್ನಿಸುತ್ತದೆ. ಆದರೆ 'ನೀರಾ' ಎಂಬುದು ತೆಂಗಿನ ಎಳೆನೀರು ಮತ್ತು ಹೆಂಡಕ್ಕಿಂತಲೂ ಭಿನ್ನ. ನೀರಾ ಸೇವನೆ ಆರೋಗ್ಯಕಾರಿ ಎಂಬುದೇ ಜನಜನಿತ. ಅದು ಮತ್ತು ತರಿಸುವುದಿಲ್ಲ. ದ.ಕನ್ನಡ, ಕರಾವಳಿ ಮತ್ತಿತರೆಡೆ ತಿಂಡಿ-ಅಡುಗೆಗೆ ಬಳಸಿ ರುಚಿ ಹೆಚ್ಚಿಸುತ್ತಾರೆ. ರಾಜ್ಯ ಸರ್ಕಾರದ ಕೊಡುವ ಕಾರಣ ಅಸಮರ್ಥನೀಯ. ಈಗ ಎಲ್ಲೆಡೆ ಇರುವಂತೆ ರೈತ ಯಾವ ಬೆಳೆ ಬೆಳೆಯಬೇಕು, ಏನನ್ನು ಮಾಡಬೇಕು ಎಂಬುದು ಆ ರೈತನೇ ನಿರ್ಧರಿಸತಕ್ಕದ್ದು. ಅದಕ್ಕೆ ಅವಕಾಶವಿದೆ. ಅದನ್ನೇ ನೀರಾಕ್ಕೂ ಅನ್ವಯಿಸ ಬೇಕು. ಅದು ಹೆಂಡ ಬಾರದಂತೆ ಸರ್ಕಾರ ನಿಯಂತ್ರಣ ಮಾಡಲು ಸಾಧ್ಯವಿದೆ. ವೈನ್ ತಯಾರಿಕೆಗೆ ದ್ರಾಕ್ಷಿ ಇತರೆ ಹಣ್ಣು ಬಳಸುತ್ತಾರೆಂದು ದ್ರಾಕ್ಷಿ ಬೆಳೆ ನಿಷೇಧಿಸಲಾಗುವುದೇ? ಒಂದಾದರೂ ನಿಜ. ಸರ್ಕಾರಕ್ಕೆ ಹೆಂಡದ ದೊರೆಗಳು, ಕಂಪನಿ ಮಾಲಿಕರು ಒತ್ತಡಹಾಕತೊಡಗಿದ್ದಾರೆ. ನೀರಾದಂತಹ ಪೇಯ ಎಲ್ಲೆಡೆ ಸಿಗುವಂತಾದರೆ ತಮ್ಮ ಬೀರ್‌ನಂತಹ ಸಾಫ್ಟ್ ಡ್ರಿಂಕ್‌ಗಳ ಗತಿಯೇನು? (ಬೀರಿಗಿದೆ .... ನೀರಾಗಿಲ್ಲ...) ಆದ್ದರಿಂದ ಇದನ್ನು ಮುಚ್ಚುಹಾಕಬೇಕು. ಇದು ಕಲಬೆರಕೆಯಲ್ಲ ಕೋಟ್ಯಾಧಿಪತಿಗಳಾಗಿ ಮೆರೆಯುತ್ತಿರುವ ಹೆಂಡದ ದೊರೆಗಳು ತಾವೇನು ಸರ್ಕಾರಕ್ಕೆ ಅದನ್ನು ಅನುಸರಿಸಿ ಸರ್ಕಾರ ಪೊಲೀಸ್ ಗೂಂಡಾಗಳನ್ನು ಬಿಟ್ಟು ದಬ್ಬಾಳಿಕೆ ನಡೆಸಿದೆ. ಹಾಸನಜಿಲ್ಲೆಯಲ್ಲಂತೂ ಪೊಲೀಸರು ಮಕ್ಕಳು - ಮಹಿಳೆಯರೆನ್ನದೆ ಎಲ್ಲರನ್ನೂ ಎಳೆದು ಹಾಕಿದ್ದಾರೆ. ಈ ಭಯೋತ್ಪಾದನೆಯಿಂದ ಗಂಡಸರು ಏಕೆ ಬಿದ್ದಿದ್ದಾರೆ ಹಿಂದೆ ಬಾಗೂರು ನವಿಲೆ ರೈತ ಹೋರಾಟದಲ್ಲಿ ಪೊಲೀಸರ ದೌರ್ಜನ್ಯ ಖಂಡಿಸಿ ಹುಯಿಲೆಬ್ಬಿಸಿದ್ದ ಕಾಂಗ್ರೆಸ್ ಮತ್ತದೇ ಕ್ರಮಕ್ಕೆ ಇಳಿದಿದೆ.

ಇಂತಹ ದಮನ ಒತ್ತಡಗಳು ನಡುವೆಯೂ ಚಳುವಳಿ ವಿಸ್ತಾರಗೊಳಿಸಲು ಹಲವು ರೈತ ಸಂಘಟನೆಯು ನಿರ್ಧರಿಸಿವೆ. ಬೀದಿಬೀದಿಗಳಲ್ಲಿ ಬೀರ್ ಮಾರಲು 'ಅನುಕೂಲ' ಕಲ್ಪಿಸುವ ಕೃಷ್ಣರ ಮಣ್ಣಿನ ಮಕ್ಕಳ ಮಕಳಿ ಸಂಕಟಗಳಿಗೆ ಕಿವಿಗೊಟ್ಟಿತೇ? ಇದು ಕಾನೂನು ಬಾಹಿರ ಎನ್ನುವುದಾದರೆ ಅದಕ್ಕೆ ತಿದ್ದುಪಡಿ ತರಬಾರದೇಕೆ? ಅಂತೂ ಈ ಸಂಘರ್ಷ ಮುಂದುವರಿಯಲಿದೆ.

ತೆಹೆಲ್ಕಾ: ಮುಖತೊಳೆದುಕೊಳ್ಳಲು ತಿರುಗುತ್ತಿರುವ ಬಿಜೆಪಿ

ತೆಹಲ್ಕಾ-ರಕ್ಷಣಾ ಹಗರಣದಲ್ಲಿ ತಿಂದು ಮಿಂದ ವಾಜಪೇಯಿ, ಜಾರ್ಜ್, ಶ್ರೀನಿವಾಸ ಪ್ರಸಾದ್‌ರವರೂ ಬಾಯಿಗೆ ಸಾವರಿಸಿಕೊಂಡ ಡಿಎಂಕೆಯ ವೈಕೋ ಬೆಂಗಳೂರಿಗೂ ಬಂದು ತಾವು ಅಪರಾಧಿಗಳು ಅಲ್ಲವೆಂದೂ, ಪರಿಪರಿಯಾಗಿ ವಿವರಿಸಿಕೊಂಡಿದ್ದು ಬಹಳ ಮೋಜಿನ ಪ್ರಸಂಗ. ತಾವು ಅಪ್ಪಟ ದೇಶಪ್ರೇಮಿಗಳು, ಈಗೋ ಬೇಕಾದರೆ ನೋಡಿ ಎಂದು ಹನುಮಂತನಂತೆ ಎದೆ ತೋರಿಸುವಾಗ ಕಂಡ 'ಕಾಪಿ' ಚಿಹ್ನೆಯಿಂದ ರೋಮಾಂಚಿತರಾಗಿ ತಲೆದೂಗಿದ್ದು ಕೇವಲ ಸಂಘ ಪರಿವಾರದ ಚಿಡ್ಡಿಗಳಂತೆ. ಜಾರ್ಜ್ ಫರ್ನಾಂಡೀಸ್ ಕಿರುಚಾಟ, ಸಮರ್ಥಿಸಿಕೊಳ್ಳಲು ಹೋಗುತ್ತಿದ್ದ ಅಟಲ್‌ಜಿಯವರ ಪರದಾಟಗಳ ನಡುವೆ ಜನ ಎದ್ದು ಹೋಗುತ್ತಿದ್ದುದು ವಿಶೇಷ. ವಾಜಪೇಯಿ 'ಕೈ' ಬಲಪಡಿಸಲೆಂದೇ ಈ ಸಮರ್ಥನಾ ರ್‍ಯಾಲಿ ನಡೆಸಲಾಗಿದ್ದ. "ಎಲ್ಲರೂ ತಿಂತಾರೆ, ನಮ್ಮವರೂ ತಿಂದರೆ ತಪ್ಪೇನು' ಎಂದು ಮೆಲುದನಿ ಉಸಿರಲ್ಲಿ ಪಿಸುಗುಟ್ಟುವ ಧೈರ್ಯವನ್ನು ಸಂಘಗಳಿಗೆ ತಂದಿದೆ ನಿಜ. ಎಲ್ಲಾ ನಾಯಕರ ಮಾತುಗಳೂ 'ತಪ್ಪೊಪ್ಪಿಗೆ' ಯಂತಿದ್ದು, ಬೇಕಾದರೆ ಜನಾದೇಶ ಪಡೆಯಲು ಸಿದ್ಧರೆಂದದ್ದು ಗಮನಾರ್ಹ. "ತೆಹಲ್ಕಾದವರು ಹೆಂಡ ಕುಡಿಸಿ ಮಾತನಾಡಿದ್ದಾರೆ" "ನಮ್ಮ ಸಮರ್ಥ ಸರ್ಕಾರ ಉರುಳಿಸಲು ವಿದೇಶಿ ಶಕ್ತಿಗಳ ಸಂಚು, ಐಎಸ್‌ಐ ಪಿತೂರಿ' ಎಂದೆಲ್ಲಾ ಮಾತನಾಡಿ, ಸೋನಿಯಾಗಾಂಧಿ ಮನಸೋ ಇಚ್ಚೆ ಬೈದಾದರೂ ತೆಹಲ್ಕಾ ಎತ್ತಿರುವ ಪ್ರಶ್ನೆಗಳಿಗೆ ನೇರ ಉತ್ತರ ನೀಡದೇ ಹುತ್ತದ ಸುತ್ತ ಬಡಿದಾಡಿ ದಣಿಸಿದ್ದು ಕಂಡಿತು.

ಈ ಕೈ ಬಲಪಡಿಸುವ ಕಾರ್ಯಕ್ರಮಕ್ಕೆ ಇಡೀ ಬೆಂಗಳೂರೇ ಬೆರಗಾಗು ವಂತೆ ಪ್ರಚಾರಿಸಲಾಗಿತ್ತು. ಈ ಪ್ರಚಾರ, ಜನರನ್ನು ತರಲು ಏನಿಲ್ಲವೆಂದರೂ ಕೋಟಿ ಗಟ್ಟಲೆ ಹಣವನ್ನು ನೀರಿನಂತೆ ಖರ್ಚು ಮಾಡಲಾಗಿತ್ತು. ಲಕ್ಷಗಳನ್ನು ತಿಂದಿದ್ದು ತೊಳೆದುಕೊಳ್ಳಲು ಕೋಟಿ ಖರ್ಚು ಮಾಡುತ್ತಿರುವುದೇ ಸಾಕಲ್ಲವೇ ಪುರಾವೆ ಎಂದು ಜನ ಆಡಿಕೊಳ್ಳುತ್ತಿದ್ದರು. ಅಂತೂ-ಇಂತು ಬಿಜೆಪಿ ಬಣ ಪೀಪಲ್ಸ್ ಫ್ರಂಟ್ ಹಾಗೂ ವಿರೋಧ ಪಕ್ಷಗಳ



ದೇಶದ ರಕ್ಷಣೆಯನ್ನು ಹೇಗೆ ಮಾಡ್ತಾರೋ ಗೊತ್ತಿಲ್ಲ!...... ಆದರಂತೂ ತಮ್ಮ ಸರ್ಕಾರದ ರಕ್ಷಣೆ ಮಾತ್ರ ಅದ್ಭುತವಾಗಿ ಮಾಡ್ತಾರೆ

ಪ್ರತಿಭಟನೆಗೆ ನಡುಗಿರುವುದು ಎದ್ದು ಕಂಡಿತು.

ಈ ರ್‍ಯಾಲಿಯನ್ನು ಎನ್‌ಡಿಎ ಕರ್ನಾಟಕ ವ್ಯವಸ್ಥೆಗೊಳಿಸಿದೆಯೆಂದು ಪ್ರಚಾರಿಸಿದ್ದರೂ ಇದ್ದದ್ದು ಮಾತ್ರ ಬಿಜೆಪಿಯೇ. ಈ ರ್‍ಯಾಲಿಗೆ ಕರ್ನಾಟಕದಲ್ಲಿ ಬಲಿಷ್ಟವಿರುವ ಎನ್‌ಡಿಎ ಭಾಗೀದಾರ ಜನತಾದಳ(ಯು) ಬಹಿಷ್ಕರಿಸಿ, ಆ ವೇದಿಕೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ ಎಂದದ್ದು ಮುಖಕ್ಕೆ ಹೊಡೆದಂತಿತ್ತು. ಆಂಧ್ರದಲ್ಲಿ ತೆಲುಗುದೇಶಂ, ತಮಿಳುನಾಡಿನಲ್ಲಿ ಡಿಎಂಕೆ ಸಹ ಭಾಗಿಯಾಗುವುದಿಲ್ಲವೆಂದು ಘೋಷಿಸಿದ್ದು ಬಿಜೆಪಿ ವಾದಗಳನ್ನು ಹುರುಳಿಲ್ಲದಿರುವುದನ್ನು ತೋರಿಸುತ್ತದೆ. ಕರ್ನಾಟಕದ ಜೆಡಿ(ಯು) ಒಳಗೂ ಎನ್‌ಡಿಎ ತೊರೆಯುವ ಬಗ್ಗೆ ಗಂಭೀರ ಹೋರಾಟ ನಡೆದಿದೆ. ಅದಷ್ಟು ಬೇಗ ಅದರಿಂದ ಹೊರಬರುವುದು ಅಗತ್ಯವಿದೆ. ಇದು ಜನತಾದಳಗಳ ವಿಲೀನದ ಪ್ರಕ್ರಿಯೆಯನ್ನು ತೀವ್ರಗೊಳಿಸಲಿದೆ.

'ತನ್ನ ನೆಚ್ಚಿನ ಸ್ನೇಹಿತ ಜಾರ್ಜ್ ಹೀಗೆಂದುಕೊಂಡಿರಲಿಲ್ಲ, ನನಗೆ ಆಘಾತವಾಗಿದೆ ಎಂದು ಹೇಳಿದ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ|| ಯು.ಆರ್.ಅನಂತಮೂರ್ತಿಯು ನಾಡಿನ ಜನ-ಮನ ಸೆಳೆದರು.



ಕಿತ್ತು ತಿನ್ನುವ ಬಡತನ, ಹೆಣ್ಣು ಎಂಬ ತಾರತಮ್ಯ, ಉದಾರೀಕರಣದ ಕರಿನೆರಳಿನಲ್ಲಿ ರೈತರ ಆತ್ಮಹತ್ಯೆಗಳ ಸರಮಾಲೆ. ಇಲ್ಲಿ ಹೆಣ್ಣು ಕೂಸುಗಳ ಮಾರಾಟ ಸರ್ಕಾರದ ಕಡು ನಿರ್ಲಕ್ಷ್ಯ..... ಗುಲ್ಬರ್ಗಾದ ಲಂಬಾಣಿ ತಾಂಡಾಗಳಲ್ಲಿ ಹೆತ್ತ ಕರುಳಿನ ಕುಡಿಗಳನ್ನೇ ಮಾರಿಕೊಳ್ಳುವ ಧಾರುಣ ಘಟನೆಗಳ ವರದಿ ಇಲ್ಲಿದೆ

— ನೀಲಾ ಕೆ.

ಇಲ್ಲಿ ಮಕ್ಕಳಾ ಮಾರ್‍ಯಾರೋ.....

ಕರ್ನಾಟಕದ ಭೂಪಟದ ಪಕ್ಕದಲ್ಲಿ ನಿಂತು ಕತ್ತೆತ್ತಿ ನೋಡಿ. ಮೇಲಕ್ಕೆ ನಿಮಗೆ ಕಾಣುವುದೇ ಬೀದರ್ ತರುವಾಯ ಕಲ್ಬುರ್ಗಿ ಜಿಲ್ಲೆ. ಈ ಜಿಲ್ಲೆಯ ಒಡಲೊಳಗೆ 25 ಲಕ್ಷಕ್ಕೂ ಅಧಿಕ ಜನ ವಾಸ ಮಾಡುತ್ತಾರೆ. ಎಲ್ಲ ಜನಾಂಗಗಳ ಜನ ಈ ನಾಡಿನಗಲಕ್ಕೂ ಹರಡಿಕೊಂಡಿದ್ದಾರೆ.

ಭೂಪಟದ ಮೇಲಿನ ನಿಮ್ಮ ದೃಷ್ಟಿಯು ಆಂಧ್ರ-ಕರ್ನಾಟಕದ ಗಡಿ ಭಾಗಕ್ಕೆ ಹೊರಳಿಸಿ. ಅಲ್ಲಿ ಚಿಂಚೋಳಿ ಎಂಬುದೊಂದು ತಾಲ್ಲೂಕು ಇದೆ. ನೀವು ಆ ತಾಲ್ಲೂಕು ಕೇಂದ್ರದ ಒಳಹೊಕ್ಕು ನೋಡಿದಲ್ಲಿ, ಅದೊಂದು ಥೇಟ್ ಕುಗ್ರಾಮ ಸ್ವರೂಪದಲ್ಲಿ ಕಂಡು ಬರುತ್ತದೆ. ಈ ತಾಲ್ಲೂಕಿಗೆ 'ಅಭಿವೃದ್ಧಿ' ಶಬ್ದದ ನೆರಳಾದರೂ ಸೋಂಕಿದೆಯೇ? ಎಂಬ ಪ್ರಶ್ನೆ ಏಳುತ್ತದೆ. ಕರ್ನಾಟಕ ರಾಜ್ಯಕ್ಕೆ ಒಬ್ಬ ಮುಖ್ಯ ಮಂತ್ರಿಯನ್ನು ಕೊಟ್ಟಿದೆ ಈ ತಾಲ್ಲೂಕು. ದಿ. ವೀರೇಂದ್ರ ಪಾಟೀಲರೇ ಅವರು. (ಅವರು ಬದುಕಿದ್ದಾಗೊಮ್ಮೆ ತಮ್ಮ ಸ್ವಂತ ಗ್ರಾಮಕ್ಕೆ ಮತ ಚಲಾಯಿಸಲು ಹೋಗಿದ್ದರು. ಆದರೆ ನಡೆದು ಹೋಗಲು ಸಹ ಯೋಗ್ಯವಾದ ರಸ್ತೆ ಇಲ್ಲದ ಕಾರಣ ಮತ ಚಲಾಯಿಸದೇ ವಾಪಸ್ಸಾಗಿದ್ದರು) ತಾವೀಗ ಈ ತಾಲ್ಲೂಕಿನ ಹಣೆಬರಹ ಚೆನ್ನಾಗಿ ಊಹಿಸಬಹುದು. ಇತ್ತೀಚೆಗೆ ದೇವೇಗೌಡರ ದರ್ಬಾರಿನಲ್ಲಿ ವೈಜನಾಥ ಪಾಟೀಲರು ನಗರಾಭಿವೃದ್ಧಿ ಮಂತ್ರಿಯಾಗಿದ್ದರು. (ಅವರ ತಾಲ್ಲೂಕು ಇದೇ ಚಿಂಚೊಳ್ಳಿಯೇ) ಆಗಲೂ ಯಾರ ಅಭಿವೃದ್ಧಿ ಆಯ್ತು ಎಂಬುದನ್ನು ನಿಮಗೆ ಬಿಡಿಸಿ ಹೇಳಬೇಕಿಲ್ಲ.

ತಾಂಡಾಗಳು: ಕಿತ್ತು ತಿನ್ನುವ ಬಡತನ

ಈಗ ನಿಮ್ಮ ದೃಷ್ಟಿಯನ್ನು ಕರ್ನಾಟಕ ಆಂಧ್ರದ ಗಡಿಭಾಗದತ್ತ ಹೊರಳಿಸಿ. ಚಿಂಚೋಳಿಯ ಬೇಲಿಗೆ ಅಂಟಿಕೊಂಡಂತೆ ಅನೇಕ ತಾಂಡಾಗಳು ನಿಮಗೆ ಕಾಣಸುತ್ತವೆ. ಅವು ಹೆಸರಿಗೆ ಮಾತ್ರ ತಾಂಡಾಗಳು. ಊರೆಂಬ ಲಕ್ಷಣಕ್ಕಾಗಿಯಾದರೂ ಅಲ್ಲಿ ಕುಡಿವ ನೀರಿನ ಬೋರ್‌ವೆಲ್ ಇಲ್ಲ. ಉತ್ತಮ ಕಟ್ಟಡದ ಶಾಲೆಯಿಲ್ಲ. ಸರಿಯಾದ ರಸ್ತೆಯಿಲ್ಲ. ಕಲ್ಲು ಮಣ್ಣಿನ ಮಾಡು -ಗೋಡೆಗಳ ಸಾಲುಗಳಿಗೆ ಅಲ್ಲಿ ಮನೆ ಎನ್ನುತ್ತಾರೆ ಇಲ್ಲಿ ಬಂಜಾರಾ (ಲಂಬಾಣಿ) ಜನಾಂಗ ವಾಸಿಸುತ್ತಾರೆ. ಈ ಥಾಂಡಾಗಳಿಗೆ ಧರ್ಮಸಾಗರ, ಒಂಟಿ ಚಿಂತಾ, ಶಾದಿಪುರ, ಕೊಂಚಾವರಂ ತಾಂಡಾಗಳೆಂಬ ಇತ್ಯಾದಿ ಹೆಸರುಗಳಿವೆ. ಕೂಲಿ ಮಾಡಿ ಬದುಕಿನ ಬಂಡಿಯನ್ನು ಎಳೆಯೋದಾ ಇಲ್ಲಿ ದುಸ್ತರವಾಗಿದೆ. ಕಿತ್ತು ತಿನ್ನುವ ಕಡುಬಡತನ ಗಾಳಿಯೋಪಾದಿಯಲ್ಲಿ ಹರಡಿ ಕೊಂಡಿದೆ. ಅನೇಕ ಮನೆಗಳಲ್ಲಿನ ಗಂಡಸರು ಗೇಣುದ್ದ ಹೊಟ್ಟೆ ತುಂಬಿಕೊಳ್ಳಲು ಬೊಂಬಾಯಿ ಪೂನಾಕ್ಕೆ ವಲಸೆ ಹೋಗಿದ್ದಾರೆ. ಹಿಂದೊಮ್ಮೆ ನಕ್ಸಲೈಟರ ಅಟಾಟೋಪದ ತಾಣವಾಗಿತ್ತು ಈ ಪ್ರದೇಶ.

ಬ್ರೋಕರ್ ಕೈಯಿಂದ ಬೆಥನಿ ಹೋಂ

ಈಗ ನೋಡಿ, ಇದೇ ಪ್ರದೇಶದಲ್ಲಿ ಎಲ್ಲರ ಕರುಳಲ್ಲಿ ಕತ್ತರಿಯಾಡಿಸಿದಂತಹ ಹೃದಯ ಛಿದ್ರಾವಕ ಘಟನೆಗಳು ನಡೆಯುತ್ತಿವೆ. ಹೆತ್ತ ಕರುಳಿನ ಕುಡಿಯನ್ನೇ ದುಡ್ಡಿಗಾಗಿ ಮಾರಿಕೊಳ್ಳುವ ದಾರುಣ ಪ್ರಕರಣ ಇಲ್ಲಿ ಹೆಡೆ ಎತ್ತಿದೆ. ಅದರಲ್ಲೂ ಹೆಣ್ಣು ಶಿಶುಗಳನ್ನೇ ಮಾರಲಾಗುತ್ತಿದೆ. ಹುಟ್ಟಿದ ಎರಡು ತಿಂಗಳೊಳಗೆ ಮಾರಾಟ ಸಾಗಾಟ ಎಲ್ಲವೂ ನಡೆದು ಹೋಗುತ್ತದೆ. ಹೆತ್ತವರ ಕೈಯಿಂದ ಬ್ರೋಕರ್ ಕೈಗೆ ಬ್ರೋಕರ್ ಕೈಯಿಂದ ಬೆಥನಿ ಹೋಂಗೆ? ಅಲ್ಲಿಂದ ಎಲ್ಲಿಗೆ? ಮುಂದಿನ ಪ್ರಶ್ನೆ ನಿಗೂಢವಾಗಿದೆ.

ಹೌದು. ಕಳೆದ 5-6 ವರ್ಷಗಳಿಂದ ಈ ಥಾಂಡಾಗಳಲ್ಲಿ ಹೆಣ್ಣು ಶಿಶುಗಳ ಮಾರಾಟ ನಡೆಯುತ್ತಿದೆ ಎಂಬುದು ಈಗ ರುಜುವಾಗಿದೆ. ಸುಮಾರು 200ಕ್ಕೂ ಹೆಚ್ಚು ಹೆಣ್ಣು ಕೂಸುಗಳನ್ನು ಮಾರಲಾಗಿದೆ. ಎಷ್ಟು ಹಣಕ್ಕೆ ? ಕೇವಲ ರೂ. 500 ರೂ ನಿಂದ 2000ಕ್ಕೆ ಸೂಲಗಿತ್ತಿ ಪಾರ್ವತಿ ಬಾಯಿ ಇಲ್ಲಿ ಬ್ರೋಕರ್ ಇವಳ ಮೂಲಕ ದಂಧೆ ನಡೆದು ಕ್ರಿಸ್ಟೋಫರ ಹಾಗೂ ಪೀಟರ್ ಸುಬ್ಬಯ್ಯ ಎಂಬ ದಲ್ಲಾಳಿಗಳಿಗೆ ಅಲ್ಲಿಂದ ಸರಸ್ವತಿ (ಬೆಥನಿ) ಅನಾಥಾಶ್ರಮಕ್ಕೆ ಈ ಅಮಾಯಕ ಕಂದಮ್ಮಗಳು ರವಾನೆಯಾಗುತ್ತಿವೆ.

ಬ್ರೋಕರ್ ಪಾರ್ವತಿ ಸೂಲಗಿತ್ತಿ ಕೆಲಸ ಮಾಡುತ್ತಾಳೆ ಇವಳ ಕುಟುಂಬಕ್ಕೆ 2-3 ಎಕರೆ



ಹೊಲವಿದೆ. ಗಂಡ-ಮಕ್ಕಳು ಇರುವರು. ಬಿಲ್ವರಶಾ ತಾಂಡಾ. ಬಿಕೂ ಸೌಂಡಾ, ತಟ್ಟೆಪಲ್ಲ ತಾಂಡಾ, ಚಂದೂ ನಾಯಕ ತಾಂಡಾಗಳಲ್ಲೆಲ್ಲ ಇವಳೇ ಸೂಲಗಿತ್ತಿ. ಹೀಗಾಗಿ ಇವಳಿಗೆ ಪ್ರತಿ ಮನೆಯ ಸಂಪರ್ಕವೂ ಇದೆ. ಇವಳಿಗೆ ಸರಸ್ವತಿ ಅನಾಥಾಶ್ರಮದ ಸಂಪರ್ಕ ಬಂದ ಮೇಲೆ ಬ್ರೋಕರ್ ಕಾರ್ಯವೂ ಶುರು ಮಾಡಿದಳು.

ಹೆಣ್ಣು ಕೂಸುಗಳ ಮಾರಾಟ ಏಕೆ?

ಬ್ರೋಕರ್ ಪಾರ್ವತಿಬಾಯಿಯು ಪಕ್ಕದ ತಾಂಡೂರಿನ ಜಾನ್ ಅಬ್ರಹಾಂ ಮೆಮೋರಿಯಲ್ ಬೆಥನಿ ಹೋಂ' ಗೆ ಸಾಗಿಸಿದ್ದು ಹೆಣ್ಣು ಕೂಸುಗಳನ್ನೇ ಇದಕ್ಕೆ ಕಾರಣಗಳು ಸ್ಪಷ್ಟವಾಗಿವೆ.

ಹೈದರಾಬಾದ್ ಕರ್ನಾಟಕವು ಹೇಗೆ ಜಮೀನ್ದಾರರ-ಪಾಳೇಗಾರರ ಕರಿನೆರಳಲ್ಲಿ ನಲುಗುತ್ತಿದೆಯೋ ಅದೇ ರೀತಿ ಚಿಂಚೊಳಿ ತಾಲ್ಲೂಕು ಸಹ ಬಡತನದ ಬೇಗೆಯಲ್ಲಿ ಬಸವಳಿದು ಹೋಗಿದೆ. ಅದರಲ್ಲೂ ಗಡಿ ಭಾಗವಾದ ಈ ಥಾಂಡಾಗಳ ಜನತೆಯ ಆರ್ಥಿಕ ಮಟ್ಟವನ್ನು ನೀವು ಗಮನಿಸಿದರೆ ಭಯ ಬೀಳಬೇಕಾಗುತ್ತದೆ. ದಿನವೆಲ್ಲ ದುಡಿದರೂ 8 ರೂ 10ರೂ ಸಹ ಕೂಲಿ ಸಿಗುವುದಿಲ್ಲ. ಕನಿಷ್ಟ ಪಕ್ಷ ಕುಡಿವ ನೀರಿನ ವ್ಯವಸ್ಥೆಯೂ ಕಲ್ಪಿಸಿಲ್ಲ. ಒಂದು ಕೊಡ ನೀರಿಗಾಗಿ ಎರಡು ಮೂರು-ನಾಲ್ಕು ಎಂಟು ಕಿಲೋಮೀಟರ್ ನಡೆದು ಹೋಗಬೇಕು. ಪ್ರಾಥಮಿಕ ಸಾಲೆಯ ಕಟ್ಟಡಗಳು ಕುಸಿದು ಬೀಳುವ ಹಂತದಲ್ಲಿವೆ.

ದುರ್ಗಮ ಅರಣ್ಯಗಳ ನಡುವೆ ಇರುವ ಈ ತಾಂಡಾಗಳಿಗೆ 5 ವರ್ಷಕ್ಕೊಮ್ಮೆ ಓಟು ಕೇಳಲು ಮಾತ್ರ ಎಲ್ಲ ಪಕ್ಷದವರು ಹೋಗುವುದು ಬಿಟ್ಟರೆ ಬೇರೆ ಯಾವ ದಿನಗಳಲ್ಲೂ ಈ ತಾಂಡಾಗಳ ಕಡೆ ಅಧಿಕಾರಿಗಳಾಗಲಿ ಜನಪ್ರತಿನಿಧಿಗಳಾಗಲಿ ಸುಳಿಯುವುದಿಲ್ಲ. ನಾಗರೀಕ ಸೌಲಭ್ಯಗಳಿಂದ ಸರಕಾರಿ ಸವಲತ್ತುಗಳಿಂದ ಈ ಲಂಬಾಣಿಗರು ಸಂಪೂರ್ಣ ವಂಚಿತರು. ತುಂಡು ಭೂಮಿಯಲ್ಲಿ ಬಿತ್ತುವಾಗಲೂ ಬೆಳೆಯುವಾಗಲೂ ಅರಣ್ಯ ಇಲಾಖೆಯ ಅಧಿಕಾರಿಗಳು ಆ ಭೂಮಿ ತಮ್ಮ ಅರಣ್ಯದೆಂದು ಬೆತ್ತ ಹಿಡಿದು ಬೆನ್ನಟ್ಟುತ್ತಾರೆ. ಒಂದೆಡೆ ಅರಣ್ಯದವರ ಕಾಟ **ಇನ್ನೊಂದೆಡೆ ಜಮೀನ್ದಾರರ ಕ್ರೌರ್ಯ, ಮತ್ತೊಂದೆಡೆ ಸಿಗದ ಕೂಲಿ ಹೀಗೆ ಇವೆಲ್ಲವುಗಳ ಪರಿಣಾಮವಾಗಿ ಥಾಂಡಾಗಳ ಜನತೆಗೆ ಹಸಿದ ಹೊಟ್ಟೆಗೆ ಅನ್ನ ದಕ್ಕಿಸಿಕೊಳ್ಳುವುದೇ ಕಷ್ಟವಾಗಿದೆ.** ಇವುಗಳಿಗೆಲ್ಲ ಕಿರೀಟವಿಟ್ಟಂತೆ ಮರೀಚಿಕೆಯಾದ ಸರಕಾರಿ ಯೋಜನೆಗಳು ಆ ಥಾಂಡಾಗಳ ಭೂ ಪ್ರದೇಶದುದ್ದಕ್ಕೂ ಗಸ್ತು ಹೊಡೆಯುತ್ತಿರುವ ಬಡತನ ಬಿಟ್ಟರೇ ನಮಗೇನೂ ಸಿಗದು. ಆದ್ದರಿಂದಲೇ ಅಲ್ಲಿನ ತಾಂಡಾದ ನಾಯಕ "ನಮ್ಮ ಹೆಣ್ಣು ಮಕ್ಕಳನ್ನು ಮಾರಿಕೊಂಡರೆ ಏನು ತಪ್ಪು ಆದರೆ ನಿಮಗೆ ಬದುಕಲು ಒಂದು ಕೆಲಸವೂ ಕೊಡದ ಸರಕಾರದ ತಪ್ಪಲ್ಲವೇ? ಎಂದು ಕೇಳಿದ ಪ್ರಶ್ನೆಗೆ ಸರಕಾರದ ಹತ್ತಿರ ಉತ್ತರವಿದೆಯಾ?

'ಮನ್ ದುಸ್ರಾ ವಾಟಚೇ ಜನಾ ಆನಕಿದಿಚೋ... (ಬೇರೆ ದಾರಿಯಿಲ್ಲದೇ ಹೀಗೆ ಮಾಡಿದೆ) ಎಂದು ಹೇಳುವ ಲಂಬಾಣಿ ತಾಯಿಯ ಎದೆಯೊಳಗಿನ ಜ್ವಾಲೆ ಭುಗಿಲ್ಲೆನ್ನುತ್ತಿರುವುದಕ್ಕೆ ಕಾಣುವ ಕಣ್ಣು ಬೇಕು. ಅರಿಯುವ ಮನಸ್ಸಿರಬೇಕು.

ಹೀಗೆ ಬಡತನವೆಂಬ ಭೀಕರ ರಕ್ಕಸ ಹೆತ್ತ ತಾಯಿಯರ ಎದೆಯ ಮಮತೆಗಳನ್ನು ಕಸಿಯುತ್ತಿದ್ದಾನೆ. ಒಂಬತ್ತು ತಿಂಗಳು ಒಡಲೊಳಗೆ ಸುರಕ್ಷಿತವಾಗಿಟ್ಟುಕೊಂಡು, ಹೊರ ಜಗತ್ತಿಗೆ ಬಂದ ಕೂಡಲೇ ಅದನ್ನು ಮಾರುವಂತಹ ಒತ್ತಡಕ್ಕೆ ಒಳಗಾಗುವ ಪರಿಯನ್ನು ಹೇಗೆ ಹೇಳುವುದು?

ಲಿಂಗಬೇಧ

ಹೆಣ್ಣು ಕೂಸುಗಳ ಮಾರಾಟವೇ ಏಕೆ ಎಂಬ ಪ್ರಶ್ನೆ ಖಂಡಿತ ಏಳುತ್ತದೆ. ಕೂಸುಗಳನ್ನು ಮಾರಲ ಬಡತನ ಕಾರಣವಾದರೆ ಹೆಣ್ಣುಕೂಸುಗಳನ ಮಾರಲು ಲಿಂಗಭೇದ ನೀತಿಯೂ ಪ್ರಮುಖ ಕಾರಣವಾಗಿದೆ. ಜಮೀನ್ದಾರಿ - ಪಾಳೇಗಾ ಸಮಾಜದ ವ್ಯವಸ್ಥೆಯಲ್ಲಿ ಬೇರು ಬಿಟ್ಟಿರುವ ಹೆಣ್ಣ ಕೀಳಾಗಿ ಸರಕಾಗಿ, ಯಂತ್ರವಾಗಿ ಕಾಣು ನಂಬಿಕೆಯೂ ಈ ಮಾರಾಟದ ಹಿಂದಿ ಮನೋಭಾವನೆಯಾಗಿದೆ. (ಕೆಲವು ಬುಡಕಟ್ಟುಗಳ ಹೆಣ್ಣುಕೂಸು ಹುಟ್ಟಿದ ಕೂಡಲೇ ಆ ಮಗುವಿ ಕಾಲನ್ನು ಹಿಡಿದು ತಿರುಗಿಸಿ ಬಂಡೆಗೆ ತಲೆಯನ ಅಪ್ಪಳಿಸಿ ಸಾಯಿಸುವಂತಹ ಕ್ರೂರ ಸಂಪ್ರದಾಯ ಕಾಣುತ್ತೇವೆ) ಆದ್ದರಿಂದಲೇ ಹೆಣ್ಣಾ ಹುಟ್ಟುವುದಕ್ಕಿಂತ ಮಣ್ಣಾಗಿ ಹುಟ್ಟಿದರೆ, ಮಣ್ಣಿ ಮೇಲೊಂದು ಮರವಾಗಿ ಹುಟ್ಟಿ ಪುಣ್ಯವಂತರಿ ನೆರಳಾಗಬಹುದು' ಎಂಬ ಜಾನಪದ ಗೀತೆಯ

ಮಕ್ಕಳ ಮಾರ್‍ಯಾರ ಮಳೆರಾಜ

ಬಣ್ಣದ ಗುಬ್ಯಾರು ಮಳಿರಾಜ ಅವರು
ಮಣ್ಣಾಗಿ ಹೋದಾರು ಮಳಿರಾಜ
ಬಣ್ಣದ ಗುಬ್ಯಾರು ಮಣ್ಣಾಗಿ ಹೋದಾರು
ಅನ್ನದದಿನ ಬಂದು ಮಳಿರಾಜಾ

ಒಕ್ಕಲಗೇರ್‍ಯಾಗ ಮಳಿರಾಜ ಅವರು
ಮಕ್ಕಳ ಮಾರ್‍ಯಾರ ಮಳಿರಾಜಾ
ಮಕ್ಕಳ ಮಾರೀ ರೊಕ್ಕಾ ಹಿಡಕೊಂಡು
ಭತ್ತಂತ ತಿರುಗ್ಯಾರು ಮಳಿರಾಜಾ

ಸೂಲಗಿ ಹಿಟ್ಟನಾಗ ಮಳಿರಾಜಾ ಅವರು
ಸುಣ್ಣನ್ನು ಕೊಡಿಸ್ಯಾರು ಮಳಿರಾಜಾ
ಹಸ್ದು ಬಂದ್ ಕ್ಯಾರಿ ಗಪಗಪ ತಿಂದು
ಒದ್ದಾಡಿ ಸತ್ತಾರ ಮಳಿರಾಜಾ

ಗಿದ್ದನ ಅಕ್ಕ್ಯಾಗ ಮಳಿರಾಜಾ ಅವರು
ಅಫುವನ್ನು ಕೂಡಿಸ್ಯಾರು ಮಳಿರಾಜಾ
ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ
ಕಣ್ಣನ್ನೇ ಮುಚ್ಚ್ಯಾರು ಮಳಿರಾಜಾ

ಗಂಡುಳ್ಳ ಬಾಲ್ಯಾರು ಮಳಿರಾಜಾ ಅವರು
ಭಿಕ್ಷಾಕ ಹೊರಟಾರ ಮಳಿರಾಜಾ
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದಾರು
ಅನ್ನದ ದಿನ ಬಂದು ಮಳಿರಾಜಾ

ಸ್ವಾತೀಯ ಮಳಿ ಬಂತು ಮಳಿರಾಜಾ ಸುತ್ತ
ದೇಶಾಕ ಅಗ್ಯಾದ ಮಳಿರಾಜಾ
ಹಳ್ಳಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪಾ ಮಳಿರಾಜಾ

ಜನಪದ ಕಾವ್ಯ
ಕನ್ನಡ ಪ್ರತಿಭಟನೆ ಕಾವ್ಯದಿಂದ

ಹೆಣ್ಣಿನ ನೋವಿನಾಳವನ್ನೇ ಧ್ವನಿಸುತ್ತದೆ. ಹೆಣ ಹುಟ್ಟಿತೆಂದರೆ ಹೆತ್ತವರು ಹುಣ್ಣು ಹುಟ್ಟಿದಂ ಭಯಗೊಳ್ಳುತ್ತಾರೆ. ಬಂಡವಾಳಶಾಹಿಯ ಒಡಲಿನಿಂದ ಮೇಲೆದ್ದು ತನ್ನ ಕಬಂಧ ಬಾಹುಗಳನ ಚಾಚುತ್ತಿರುವ ವರದಕ್ಷಿಣೆಯು ಹೆತ್ತವರಿ

ಪುಟ 11



ಐದು ರಾಜ್ಯಗಳ ಚುನಾವಣೆ: ಒಂದು ಪ್ರಚಂಡ ಸಮರ



ಐದು ರಾಜ್ಯಗಳಲ್ಲಿ ಮುಂಬರುವ ವಿಧಾನ ಸಭಾ ಚುನಾವಣೆಗಳ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್

ಚುನಾವಣಾ ಆಯೋಗ ಅಧಿಕೃತ ಅಧಿಸೂಚನೆ ಪ್ರಕಟಿಸುವುದರೊಂದಿಗೆ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ ಮತ್ತು ಪಾಂಡಿಚೇರಿ ಯಲ್ಲಿಯೂ ವಿಧಾನಸಭಾ ಚುನಾವಣಾ ಪ್ರಕ್ರಿಯೆ ಆರಂಭವಾಗಿದೆ. ಚುನಾವಣಾ ಪ್ರಚಾರ ಕಾರ್ಯ ಈ ಮೊದಲೇ ಆರಂಭವಾಗಿತ್ತು.

ಈ ಚುನಾವಣೆಗಳು ಬಹಳ ಮಹತ್ವದ್ದು ಎಂದು ಬೇರೆ ಹೇಳಬೇಕಾಗಿಲ್ಲ. **ಸಿಪಿಐ(ಎಂ) ಮತ್ತು ಎಡಶಕ್ತಿಗಳಿಗೆ ಪಶ್ಚಿಮ ಬಂಗಾಳ ಮತ್ತು ಕೇರಳಾದ ಚುನಾವಣೆಗಳು ಬಹಳ ಮಹತ್ವದ್ದು. ಇಲ್ಲಿಯ ಫಲಿತಾಂಶಗಳು ರಾಷ್ಟ್ರೀಯ ಮಟ್ಟದಲ್ಲಿ ಎಡಶಕ್ತಿಗಳು ಮಹತ್ವದ ಪಾತ್ರವಹಿಸುತ್ತವೆ ಎಂಬುದನ್ನು ಸಾಧಿಸುತ್ತವೆ. ಅದೇ ರೀತಿ ಇತರ ರಾಜ್ಯಗಳ ವಿಶೇಷವಾಗಿ ತಮಿಳುನಾಡು ಫಲಿಂತಾಂಶ ಕೂಡಾ ರಾಷ್ಟ್ರೀಯ ಸನ್ನಿವೇಶದ ಮೇಲೆ ಪ್ರಭಾವ ಬೀರುತ್ತದೆ.**

ಈ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ಕೇಂದ್ರದಲ್ಲಿ ಬಿಜೆಪಿ ಆಳ್ವಿಕೆಯುಡಿ ಅಂದರೆ ಬಲಪಂಥೀಯ ಶಕ್ತಿಗಳು ಹೊಸ ಹುಮ್ಮಸ್ಸಿನಿಂದ, ಆಕ್ರಮಣಕಾರಿ ರೀತಿಯಲ್ಲಿ ತಮ್ಮ ಅಜೆಂಡಾವನ್ನು ಅನುಸರಿಸುತ್ತಿರುವ ಬದಲಾದ ಸನ್ನಿವೇಶದಲ್ಲಿ ಮೊದಲಬಾರಿ ನಡೆಯುತ್ತಿರುವ ಚುನಾವಣೆಗಳು.

ಪಾತಾಳಕ್ಕಿಳಿದಿರುವ ಅನೈತಿಕತೆ

ಆರ್.ಎಸ್.ಎಸ್. ಮತ್ತು ಅಂಗ ಸಂಘಟನೆಗಳು ಹೆಚ್ಚೆಚ್ಚು ಆಕ್ರಮಣಕಾರಿಯಾಗಿ ವರ್ತಿಸುತ್ತಿರುವ ಹಿನ್ನೆಲೆಯಲ್ಲಿ ಈ ಚುನಾವಣೆಗಳು ನಡೆಯುತ್ತಿವೆ. ಮುಂಬರುವ ದಿನಗಳಲ್ಲಿ ವಾತಾವರಣವನ್ನು ಕೋಮುಗ್ರಸ್ತಗೊಳಿಸಲು ಪ್ರಯತ್ನಗಳು ಹೆಚ್ಚೆಚ್ಚು ತೀವ್ರಗೊಳ್ಳಲಿವೆ. ಅತ್ತ ಆರ್ಥಿಕ ವಲಯದಲ್ಲಿ ಲಂಗುಲಗಾಮಿಲ್ಲದ ಉದಾರೀಕರಣ, ಜಾಗತೀಕರಣವನ್ನು ವಾಜಪೇಯಿ ಸರಕಾರ ಅನುಸರಿಸುತ್ತಿದೆ. ಡಬ್ಲ್ಯುಟಿಒ ಹೇಳಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅವರಿಗೆ ಇದ್ದ ಅಡೆ-ತಡೆಗಳನ್ನೆಲ್ಲಾ ತೆಗೆದು ಹಾಕಿ ಮುಕ್ತ ಆಮದು ವ್ಯವಸ್ಥೆ ತರಲು ಈ ಸರಕಾರ ಉತ್ಸುಕತೆ ತೋರುತ್ತಿದೆ. ಈ ನೀತಿಗಳು ಜನಗಳನ್ನು ಇನ್ನಷ್ಟು ಸಂಕಷ್ಟಗಳಿಗೆ ಈಡುಮಾಡುತ್ತಿವೆ. ರೈತರು ತಮ್ಮ ಬೆಳೆಗಳಿಗೆ ಬೆಲೆ ಸಿಗದೆ ಅದನ್ನು ರಸ್ತೆಗೆಸೆಯಬೇಕಾಗಿ ಬಂದಿದೆ. ಇನ್ನೊಂದೆಡೆ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಈ ಮುಕ್ತ ಆಮದು ನೀತಿ ಕೈಗಾರಿಕಾ ರಂಗವನ್ನು ತಟ್ಟಿದೆ. ಮುಖ್ಯವಾಗಿ ಸಣ್ಣ ಪ್ರಮಾಣದ ಉದ್ದಿಮೆಗಳನ್ನು.

ಖಾಸಗೀಕರಣದ ಭರದಲ್ಲಿರುವ ಈ ಸರಕಾರ ಆಹಾರ ಧಾನ್ಯಗಳ ಖರೀದಿ ದಾಸ್ತನು ಮತ್ತು ವಿತರಣೆಯನ್ನು ಕೂಡಾ ಖಾಸಗಿಯವರಿಗೆ ವಹಿಸಿಕೊಡಬೇಕೆಂದು ಹೇಳುತ್ತಿದೆ. ಎಫ್.ಸಿ.ಐ. ಗೋದಾಮುಗಳಲ್ಲಿ ತುಂಬಿ ತುಳುಕುತ್ತಿರುವ ಧಾನ್ಯಗಳನ್ನು ಜನಗಳಿಗೆ ಸಬ್ಸಿಡಿ ದರಗಳಲ್ಲಿ ಕೊಡಲು ಬಯಸದೆ ಈ ಸರಕಾರ ಅದನ್ನು ವಿದೇಶಕ್ಕೆ ಸಬ್ಸಿಡಿ ದರಗಳಲ್ಲಿ ರಫ್ತ ಮಾಡಲು ಮುಂದಾಗುತ್ತಿದೆ. ಹೀಗೆ ಸ್ವದೇಶಿಗಳು ವಿದೇಶಗಳಿಗೆ ತಿನ್ನಿಸುತ್ತಿದ್ದಾರೆ ನೋಡಿ.

ಬಾಲ್ಕೊ ಖಾಸಗೀಕರಣದಲ್ಲಿ 5000 ಕೋಟಿರೂಗಳ ಆಸ್ತಿಯನ್ನು 551 ಕೋಟಿ ರೂಗಳಿಗೆ ಹೇಗೆ, ಏಕೆ ಮಾರಾಟ ಮಾಡಲಾಯಿತು ಎಂಬ ಸಂದೇಶದ ಹಿನ್ನೆಲೆಯಲ್ಲಿ ತೆಹಲ್ಕಾ ಬಯಲುಮಾಡಿದ ಸಂಗತಿಗಳು ಈ ಸರ್ಕಾರದ ಅನೈತಿಕತೆ ಎಂತಹ ಪಾತಾಳಕ್ಕಿಳಿದಿದೆ ಎಂಬುದನ್ನು ತೋರಿಸಿಕೊಟ್ಟಿವೆ. ಭಾರತದ ಆಳುವ ಪಕ್ಷದ ಅಧ್ಯಕ್ಷ ಒಬ್ಬ ನಕಲಿ ಶಸ್ತ್ರಾಸ್ತ್ರ ವ್ಯಾಪಾರಿಯಿಂದ ಹಣ ಪಡೆಯುತ್ತಿರುವುದನ್ನು ಇಡೀ ದೇಶ ನೋಡಿದೆ. ಈ ರೋಗ ಪ್ರಧಾನ ಮಂತ್ರಿಗಳ ಕಛೇರಿಗೂ ತಗುಲಿದೆ ಎಂಬುದು ಬಂಗಾರು ಲಕ್ಷ್ಮಣ್ ಬಾಯಿಂದಲೇ ತಿಳಿದು ಬಂದಿದೆ.

ಈ ಬಗ್ಗೆ ತನಿಖಾ ಆಯೋಗ ನೇಮಕ ಕೇವಲ ವಿಳಂಬ ತಂತ್ರವಷ್ಟೆ. ಎನ್.ಡಿ.ಎ ಸಂಯೋಜಕರಾಗಿ ಜಾರ್ಜ್ ಫರ್ನಾಂಡೀಸ್ ಮುಂದುವರೆದಿರುವುದು, ತನಿಖೆಯ ನಂತರ ಅದನ್ನು ಮತ್ತೆ ರಕ್ಷಣಾ ಮಂತ್ರಿಯಾಗಿ ತೆಗೆದು ಕೊಳ್ಳುವ ಘೋಷಣೆ ನೋಡಿದಾಗ ಈ ತನಿಖೆಯ ಫಲಿತಾಂಶ ಆಗಲೇ ನಿರ್ಧಾರಿತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಈ ಹಿನ್ನೆಲೆಯಲ್ಲಿ ಐದು ವಿಧಾನ ಸಭೆಗಳಿಗೆ ಚುನಾವಣೆಗಳು ನಡೆಯುತ್ತಿವೆ.

ಪಶ್ಚಿಮ ಬಂಗಾಳ

ಇಲ್ಲಿ ಎಡರಂಗ 24 ವರ್ಷಗಳಿಂದ ಅಧಿಕಾರ ದಲ್ಲಿದೆ. ಎಡರಂಗ ಭೂಸುಧಾರಣಗಳ ಜ್ಯಾರಿ, ಎಲ್ಲಾ ನಾಗರಿಕ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ ಮತ್ತು ಕೋಮುಸೌಹಾರ್ದ ರಕ್ಷಣೆಯ ನೀತಿಗಳಿಂದಾಗಿ ಜನತೆಯ ಭಾರೀ ಬೆಂಬಲಗಳಿಸಿದೆ. ಇದರಿಂದಾಗಿ ಈ ಹಿಂದೆ ತೃಣಮೂಲ ಕಾಂಗ್ರೆಸ್-ಬಿಜೆಪಿ ಕೂಟದ ನೇತೃತ್ವದಲ್ಲಿನ ಬಲ ಪಂಥೀಯ ಶಕ್ತಿಗಳ ಧಾಳಿಯನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದೆ. 356ನೇ ಕಲಮನ್ನು ಹೇರುವ ಪ್ರಯತ್ನದಿಂದ ಎನ್‌ಡಿಎ ಸರ್ಕಾರ ಹಿಂಜರಿಯುವಂತೆ ಮಾಡಿದೆ.

ಈ ಲೇಖನ ಬರೆಯುತ್ತಿದ್ದಂತೆ ತೃಣಮೂಲ ಮತ್ತು ಕಾಂಗ್ರೆಸ್ ನಡುವೆ ಒಂದು ಸ್ಥೂಲ ಒಪ್ಪಂದ ಆಗಿದೆ. ತೃಣಮೂಲ ಎನ್‌ಡಿಎ ದಿಂದ ಹೊರ ಹೋದರೂ ಬಿಜೆಪಿಗೆ ಬಾಗಿಲು ತೆರೆದಿಟ್ಟಿದೆ. ತೃಣಮೂಲ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಸರ್ಕಾರ ಮತ್ತು ಎನ್‌ಡಿಎ ಯನ್ನು ಬಿಟ್ಟರೂ ಬಿಜೆಪಿ ಬಗ್ಗೆ ಒಂದು ದೃಢ ನಿಲುವು ತಳೆದಿಲ್ಲ. ಮಮತಾ ಬ್ಯಾನರ್ಜಿಯವರ ಈ ಹೇಳಿಕೆಯನ್ನು ನೋಡಿ - "ಸದ್ಯಕ್ಕೆ ಕೇಂದ್ರದಲ್ಲಿ ಎನ್‌ಡಿಎ ಮತ್ತು ಬಿಜೆಪಿ ಜತೆಗೆ ಹೋಗುವುದಿಲ್ಲ. ಆದರೆ ಮುಂದೇನಾಗಬಹುದು ಎಂದು ಹೇಳಲಾಗದು. ರಾಜಕೀಯದಲ್ಲಿ ಯಾವುದೂ ಸ್ಥಿರವಲ್ಲ. ಆದರೆ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ವಿರುದ್ಧ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಜೊತೆಗೂಡಿದ್ದರೆ ನನಗೆಸಂತೋಷವಾಗುತ್ತಿತ್ತು"

ತೃಣಮೂಲ ಬಿಜೆಪಿಯೊಂದಿಗೆ ಪ್ರತ್ಯೇಕ ಒಪ್ಪಂದಕ್ಕೆ ಬರುವ ಸಾಧ್ಯತೆಯೂ ಇದೆ.

ಕೇರಳ:

ಹಿಂದಿನಂತೆ ಇಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಜನತೆಯ ಬೆಂಬಲ ಪಡೆಯಲು ಸ್ಪರ್ಧಿಸುತ್ತಿವೆ. ಎಲ್‌ಡಿಎಫ್ ನ ಸಾಧನೆಗಳು ಗಮನಾರ್ಹ. ಜನತಾ ಯೋಜನೆ' ಯ ಮೂಲಕ ಯೋಜನಾ ಪ್ರಕ್ರಿಯೆಯನ್ನು ಬುಡಮಟ್ಟದವರೆಗೆ ವಿಕೇಂದ್ರೀಕರಿಸಿದ, ಹಿಂದಿನ ಯುಡಿಎಫ್ ಸರಕಾರದಂತಲ್ಲದೆ ಭ್ರಷ್ಟಾಚಾರ ಮುಕ್ತ ಆಡಳಿತ ನೀಡಿದ, ಧರ್ಮನಿರಪೇಕ್ಷ ಮೌಲ್ಯಗಳನ್ನು ದೃಢವಾಗಿ ರಕ್ಷಿಸಿ ಪ್ರತಿಷ್ಠೆ ಗಳಿಸಿದ ಸರ್ಕಾರ ಎಲ್‌ಡಿಎಫ್ ನದ್ದು.

ಚುನಾವಣಾ ಪ್ರಕ್ರಿಯೆ ಆರಂಭವಾಗುವ ಮೊದಲೇ ಕಳೆದ ಕೆಲವು ತಿಂಗಳಿಂದ ಸಿಪಿಐ(ಎಂ) ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ಕಣ್ಣೂರಿನಲ್ಲಿ ಮರಣಾಂತಿಕ ಆರ್.ಎಸ್.ಎಸ್. ಹಲ್ಲೆಗಳು ಹೆಚ್ಚಿವೆ. **ಹಿಂದಿನ ಚುನಾವಣೆಗಳಲ್ಲಾದಂತೆ ಬಿಜೆಪಿಯು ಎಲ್‌ಡಿಎಫ್ ನ್ನು ಸೋಲಿಸಲು ಯುಡಿಎಫ್ ನೊಂದಿಗೆ ಕೈಮಿಲಾಯಿಸುವ ಪ್ರಯತ್ನಗಳನ್ನು ನಡೆಸಲಿದೆ.**

ತಮಿಳುನಾಡು

ಕೋಮು ಶಕ್ತಿಗಳ ಪ್ರಭಾವಗಳಿಂದ ಮುಕ್ತವಾಗಿದ್ದ ಈ ರಾಜ್ಯದಲ್ಲಿ ಡಿಎಂಕೆಯು ಬಿಜೆಪಿಯೊಂದಿಗೆ ಮಾಡಿಕೊಂಡ ಮೈತ್ರಿಯಿಂದಾಗಿ ಕೋಮುಶಕ್ತಿಗಳು ಇಲ್ಲಿಯೂ ಒಳನುಗ್ಗಲು ಅವಕಾಶವಾಗಿದೆ. ಡಿಎಂಕೆ ಸರಕಾರ ವಾಜಪೇಯಿ ಸರ್ಕಾರದ ಆರ್ಥಿಕ ನೀತಿಗಳನ್ನು ಅತ್ಯಂತ ತತ್ಪರತೆಯಿಂದ ಅನುಸರಿಸುತ್ತಿದೆ. ಈ ಕೂಟವನ್ನು ಸೋಲಿಸಲೇಬೇಕು. **ಎನ್‌ಡಿಎಯೇತರ ಪಕ್ಷಗಳೊಂದಿಗೆ, ಎಡ ಪಕ್ಷಗಳೊಂದಿಗೆ ಎಐಎಡಿಎಂಕೆ ಮಾಡಿಕೊಂಡ ಸ್ಥಾನ ಹೊಂದಾಣಿಕೆಯಿಂದ ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಕೂಟ ಸೋಲುವಂತೆ ಮಾಡಬಹುದು.**

ಅಸ್ಸಾಂನಲ್ಲಿ ಬಿಜೆಪಿ ತನ್ನ ಕೋಮುವಾದಿ ರಾಜಕೀಯವನ್ನು ಹಂಚಲು ನಿರಂತರ ಪ್ರಯತ್ನ ನಡೆಸಿದೆ. ಇದು ಹಲವು ಧಾರ್ಮಿಕ ಮತ್ತು ಜನಾಂಗೀಯ ಅಲ್ಪಸಂಖ್ಯಾತರನ್ನು ಹೊಂದಿರುವ ಈ ರಾಜ್ಯದ ಮೇಲೆ ವಿನಾಶಕಾರಿ ಪ್ರಭಾವ ಬೀರಲಿದೆ. ಎಜಿಪಿ ಯೊಂದಿಗೆ ಗಳಿಸಿರುವ ಒಪ್ಪಂದ ರಾಜ್ಯದಲ್ಲಿ ತನ್ನ ತೆರೆ ಹರಡಲು ಅದಕ್ಕೆ ಅವಕಾಶ ಒದಗಿಸುತ್ತಿದೆ.

ದೊಡ್ಡ ಸವಾಲು

ಈ ಚುನಾವಣೆಗಳು ಎಡ, ಪ್ರಜಾಸತ್ತಾತ್ಮಕ ಮತ್ತು ಧರ್ಮನಿರಪೇಕ್ಷ ಶಕ್ತಿಗಳಿಗೆ ಒಂದು ದೊಡ್ಡ ಸವಾಲು. ಪಶ್ಚಿಮ ಬಂಗಾಳದಲ್ಲಿ ತೃಣಮೂಲ-ಕಾಂಗ್ರೆಸ್ ಕೂಟ ದುಷ್ಟ ಕಮ್ಯುನಿಸ್ಟ್-ವಿರೋಧಿ ಪ್ರಚಾರ ನಡೆಸಲಿದೆ. ಎಂದಿನಂತೆ ತೃಣಮೂಲದ ಪ್ರಚಾರ ರಾಜಕೀಯ ವಲಯಕ್ಕೇ ಸೀಮಿತವಾಗಿರದೆ ಹಿಂಸಾಚಾರವೂ ಸೇರಿದಂತೆ ಎಲ್ಲಾ ಪ್ರಜಾಪ್ರಭುತ್ವ ವಿರೋಧಿ ಮತ್ತು ಕಾನೂನುಬಾಹಿರ ವಿಧಾನಗಳನ್ನು ಒಳಗೊಳ್ಳಲಿದೆ. ಮಿಡ್ನಾಪುರದ ಕೆಲವು ಸ್ಥಳಗಳಲ್ಲಿನ ಘಟನೆಗಳು ಇದರ ಮುನ್ಸೂಚನೆಗಳನ್ನು ಆಗಲೇ ನೀಡಿವೆ. ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಈ ಸಮಯಸಾಧಕ ಕೂಟವನ್ನು ಬಯಲಿಗೆಳೆಯುವು ದರೊಂದಿಗೆ ರಾಜ್ಯದ ದುಡಿಯುವ ಜನತೆ ಕಳೆದ ಎರಡು ದಶಕದಲ್ಲಿ ಎಡರಂಗ ಸರ್ಕಾರದ ನೀತಿಗಳು ಮತ್ತು ಹೋರಾಟಗಳಿಂದ ಗಳಿಸಿದ್ದನ್ನು ಈ ಕೂಟ ಅಧಿಕಾರಕ್ಕೆ ಬಂದರೆ ಅಳಿಸಿಬಿಡುತ್ತದೆ ಎಂದು ಜನರಿಗೆ ಮನವರಿಕೆ ಮಾಡಲು ಪ್ರಯತ್ನಿಸಲಿವೆ.

ವಾಜಪೇಯಿ ಸರ್ಕಾರದ ನೀತಿಗಳಿಂದಾಗಿ ಕೇರಳದ ಆರ್ಥಿಕ, ಆರ್ಥಿಕವಲಯ ಎದುರಿಸಬೇಕಾಗುವ ಬಿಕ್ಕಟ್ಟನ್ನು ಜನತೆಗೆ ವಿವರಿಸಲಾಗುವುದು. ಹಿಂದೆ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ಈ ನೀತಿಗಳನ್ನು ಆರಂಭಿಸಿದ್ದು 1994-95 ರ ಕಾಂಗ್ರೆಸ್ ಸರ್ಕಾರ ಡಬ್ಲ್ಯುಟಿಒ ಶರತ್ತುಗಳನ್ನು ಒಪ್ಪಿದ್ದರ ಫಲವಾಗಿ ಕೃಷಿ ಸರಕುಗಳ ಬೆಲೆ ಕುಸಿದಿದೆ ಎಂದೂ ವಿವರಿಸ ಲಾಗುವುದು. ತಮಿಳುನಾಡಿನಲ್ಲಿ ಡಿಎಂಕೆ ಮೈತ್ರಿಕೂಟ ವನ್ನು, ಅಸ್ಸಾಂನಲ್ಲಿ ಎಜಿಪಿ - ಬಿಜೆಪಿ ಮೈತ್ರಿಕೂಟ ವನ್ನು ಸೋಲಿಸುವತ್ತ ಪ್ರಯತ್ನ ನಡೆಸಲಾಗುವುದು.

ಈ ಮೇಲೆ ಹೇಳಿದಂತೆ ಈ ಚುನಾವಣೆಗಳ ಫಲಿತಾಂಶ ರಾಷ್ಟ್ರೀಯ ರಾಜಕೀಯದ ಮೇಲೆ ಗಮನಾರ್ಹ ಪ್ರಭಾವ ಬೀರಲಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಎಡಕೋಟೆಗಳನ್ನು ರಕ್ಷಿಸಲು ತಮ್ಮ ಶಕ್ತಿಯನ್ನು ಕೇಂದ್ರೀಕರಿಸುವುದ ರೊಂದಿಗೆ ಬಿಜೆಪಿ ಮತ್ತಷ್ಟು ಮುನ್ನಡೆ ಸಾಧಿಸಲು ನೆರವಾಗುವ ಪಕ್ಷಗಳನ್ನು, ಶಕ್ತಿಗಳನ್ನು ಸೋಲಿಸಲು ಇತರ ಎಲ್ಲಾ ಧರ್ಮನಿರಪೇಕ್ಷ ಶಕ್ತಿಗಳನ್ನು ಅಣಿನೆರೆಸಲು ಪ್ರಯತ್ನಿಸುತ್ತವೆ. ಈ ಸವಾಲುಗಳನ್ನು ಎದುರಿಸಲು, ಪಶ್ಚಿಮ ಬಂಗಾಳ ಕೇರಳಗಳಲ್ಲಿ ಭಾರೀ ಜನಾದೇಶ ಪಡೆಯಲು ಹಾಗೂ ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದ ಕೂಟಕ್ಕೂ ಅಸ್ಸಾಂನಲ್ಲಿ ಎಜಿಪಿ ಕೂಡಕ್ಕೆ ಭಾರೀ ಸೋಲುಣಿಸಲು ಸನ್ನದ್ಧವಾಗಬೇಕು.

ಭ್ರಷ್ಟಾಚಾರಿ ಬಿಜೆಪಿ ಕೇಂದ್ರ ಸರ್ಕಾರದ 'ಶವಯಾತ್ರೆ'

ಕೇಂದ್ರದಲ್ಲಿರುವ ಬಿಜೆಪಿ ಎನ್‌ಡಿಎ ಸರ್ಕಾರ ಭ್ರಷ್ಟಾಚಾರದ ಪಾಪಸ್‌ಕಳ್ಳಿಯಾಗಿರುವುದು ಬೆಳಕಿಗೆ ಬಂದಿದೆ. ತೆಹಲ್ಕಾ ಡಾಟ್ ಕಾಂ ಸಂಸ್ಥೆ ಬಯಲಿಗೆಳೆದಿರುವ ಕ್ಯಾಸೆಟ್‌ಗಳು ಸಾಕ್ಷಿ ಚಿತ್ರಗಳು - ಧ್ವನಿ ಸುರಳಿ ಭಾರತೀಯರ ಎದೆ ನಡುಗುವಂತೆ ಮಾಡಿದೆ. ನಾವೇ ಪರಮ ದೇಶ ಭಕ್ತರೆಂದು ಹೇಳಿಕೊಂಡ ಈ ಕಾಕಿ ಚೆಡ್ಡಿ ವಾಜಪೇಯಿ ಸರ್ಕಾರ ಲಂಚದ ಮಂಚದಲ್ಲಿ ಮಲಗಿದೆ. ರಕ್ಷಣಾ ಇಲಾಖೆ ಭ್ರಷ್ಟರ ಕೈಯಲ್ಲಿ ಸಿಕ್ಕಿ ನಲುಗುತ್ತಿದೆ. ದೇಶ ದ್ರೋಹದ ಕೊಚ್ಚೆಯಲ್ಲಿ ಮುಳುಗುತ್ತಿದೆ.

ಬಿಜೆಪಿ ಕೇಂದ್ರ ಸರ್ಕಾರ ಜನರ ಪಾಲಿಗೆ ಸತ್ತಶವವಾಗಿ ಕಾಡುವ ಪೆಡಂಭೂತ ಲಂಚ ಪಡೆದ ಕಳ್ಳರನ್ನು ರಕ್ಷಿಸುತ್ತಿದೆ. ಇಂತಹ ನಿಷ್ಕ್ರಿಯ ಸರ್ಕಾರ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಲು ಸಿಪಿಐ(ಎಂ) ಶ್ರೀರಾಮಪುರ ಪ್ರದೇಶ ಸಮಿತಿ ಕೇಂದ್ರ ಸರ್ಕಾರದ ಶವಯಾತ್ರೆ ನಡೆಸಿ ಪ್ರತಿಭಟನೆ ನಡೆಸಿತು. ಅಂತಿಮವಾಗಿ ದೇವಯ್ಯ ಪಾರ್ಕ್ ಬಳಿ ಈ ಶವವನ್ನು ದಹನ ಮಾಡಲಾಯಿತು.

ಈ ಹೋರಾಟವನ್ನು ಗಮನಿಸಿದ ಜನರು ನಮ್ಮೊಂದಿಗೆ ಸೇರಿದರು. ನಾವು ನಡೆಸುತ್ತಿರುವ ಶವಯಾತ್ರೆ ಸರಿಯಾಗಿದೆ ಎನ್ನುವಂತೆ ಸಂತಸ ವ್ಯಕ್ತಪಡಿಸಿದರು. ವ್ಯಕ್ತಿಯೊಬ್ಬರು ದಾರಿಯಲ್ಲಿ ನಮ್ಮ ಓಟುಕೊಟ್ಟು ತಪ್ಪು ಮಾಡಿದೆವು ಎಂದು ಪರಿತಪಿಸುತ್ತಿದ್ದರು. ಮೆಡಿಕಲ್ ಸ್ಟೋರ್ಸ್‌ನ ವ್ಯಾಪಾರಿ ಗುಜರಾತ್ ಶೇಟ್ ಹೀಗೆಂದರು "ಒಳ್ಳೆಯ ಕಾರ್ಯಕ್ರಮ ಮಾಡಿದ್ದೀರಿ. ವ್ಯಾಪಾರ ಎಲ್ಲಾ ಬಿದ್ದು ಹೋಗಿದೆ. ಇವರಿಗೇನು ಬಡ ಜನರ ಕಷ್ಟ ಅರ್ಥವಾಗುತ್ತಿಲ್ಲವ. ನಾವೇನೋ ಒಳ್ಳೆ ಪಕ್ಷ ಅಂತ ಓಟು ಕೊಟ್ರೆ ನಮ್ಮನ್ನೇ ನುಂಗಿ ಹಾಕ್ತಾವ್ರಲ್ಲ, ಬಡ್ಡಿ ಮಕ್ಕಳು" ಎಂದರು.

ಶವಯಾತ್ರೆಯ ತಮಟೆ ಸದ್ದು ಕೇಳಿ ಹೊರಬಂದ ಮನೆಯವರು ಮತ್ತು ಅಂಗಡಿ ಮಾಲೀಕರು ಪಟಾಕಿ ಸುಡಿ ಎಂದು ಪಟಾಕಿ ಕೊಟ್ಟರು. ನಮ್ಮ ಹೋರಾಟಕ್ಕೆ ಕುಮ್ಮಕ್ಕು ನೀಡಿದರು. ಕೆಲವರು ತಮ್ಮ ರೋಷ ವ್ಯಕ್ತಪಡಿಸಿ ಹುಚ್ಚೆದ್ದು ಕುಣಿದರು. ಬಾಯಿ ಬಾಯಿ ಬಡಕೊಂಡು ಹೀಯಾಳಿಸಿದರು. ರಾಮನಾಮ ಹೇಳಿ ನಮಗೆ ನಾಮ ಹಾಕಿದರು ಎಂದು ಜನರು ಜರಿದರು. ಜನ ಬಿಜೆಪಿಯ ಈ ಜನವಿರೋಧಿ ನೀತಿಗಳನ್ನು ಸರಾಸಗಟಾಗಿ ತಿರಸ್ಕರಿಸುತ್ತಿರುವುದು ಕಂಡುಬರುತ್ತಿತ್ತು. ಈ ಹೋರಾಟಕ್ಕೆ ಪೂರ್ಣಬೆಂಬಲ ನೀಡಿ ಸಂತಸದ ಪ್ರತಿಭಟನೆ ನೀಡುತ್ತಿದ್ದುದು ಎದ್ದು ಕಾಣುತ್ತಿತ್ತು.

- ಗೋಪಾಲಕೃಷ್ಣ ಅರಳಹಳ್ಳಿ.




ಎನ್ರಾನ್ : ತಂದಿಟ್ಟ ಗಂಭೀರ

ಮಹಾರಾಷ್ಟ್ರ ರಾಜ್ಯ ವಿದ್ಯುತ್ ಮಂಡಳಿ (ಎಂ.ಎಸ್.ಇ.ಬಿ) ದಿವಾಳಿ ಎದ್ದಿದೆ. ಮಹಾರಾಷ್ಟ್ರ ಸರ್ಕಾರವನ್ನು ದಿವಾಳಿಏಳುವತ್ತ ತಳ್ಳುತ್ತಿದೆ. ಎಂ.ಎಸ್.ಇ.ಬಿ. 'ಎನ್ರಾನ್' ಸಂಸ್ಥೆಗೆ ಸಲ್ಲಿಸಬೇಕಾದ ನವೆಂಬರ್-ಡಿಸೆಂಬರ್ ತಿಂಗಳ ವಿದ್ಯುತ್ ಬಿಲ್ ಬಾಕಿ ಪಾವತಿ ಮಾಡಲಾಗದು ಎಂದು ಕೈ ಚೆಲ್ಲಿತು. (159 ಕೋಟಿ ರೂಪಾಯಿಗಳ ನವೆಂಬರ್ ತಿಂಗಳ ಬಾಕಿಯನ್ನು ಈಗ ರಾಜ್ಯ ಸರ್ಕಾರದ ಸಹಾಯದೊಂದಿಗೆ ಕಟ್ಟಲಾಗಿದೆ) ಈಗ ಸುಮಾರು ಇದೇ ಪ್ರಮಾಣದ ಡಿಸೆಂಬರ್ ತಿಂಗಳ ಬಿಲ್‌ನ್ನು ಕಟ್ಟಲು ರಾಜ್ಯ ಸರ್ಕಾರ ತನ್ನ ಅಸಹಾಯಕತೆ ತೋರಿಸಿತು. ಈ ಹಿನ್ನೆಲೆಯಲ್ಲಿ ಎನ್ರಾನ್ ಸಂಸ್ಥೆ ಕೇಂದ್ರ ಸರ್ಕಾರ ಒದಗಿಸುವ ಪ್ರತಿ ಗ್ಯಾರಂಟಿ ಸೌಕರ್ಯವನ್ನು ಬಳಸುವ ಬೆದರಿಕೆ ಒಡ್ಡಿದೆ.

ಎನ್ರಾನ್ ಸಂಸ್ಥೆ ಒದಗಿಸುವ ವಿದ್ಯುತ್‌ನ ಭಯಂಕರ ಶಾಕ್ ಈಗ ಮಹಾರಾಷ್ಟ್ರದ ಜನತೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮೇಲೆ ಎರಗಿದೆ. 'ಎನ್ರಾನ್'ನ ಮೊದಲನೆ ಹಂತದ ಯೋಜನೆಯಲ್ಲಿ ಇಂತಹ ಗಂಭೀರ ಪರಿಸ್ಥಿತಿ ನಿರ್ಮಾಣವಾದರೆ ಇನ್ನು ಎರಡನೇ ಹಂತದ ಯೋಜನೆಯ ಹೊತ್ತಿಗೆ ಏನೇನಾಗಬಹುದು ಎಂಬ ಗಂಭೀರ ಚಿಂತೆ ಕಾಡಲು ಆರಂಭವಾಗಿದೆ.

1996ರಲ್ಲಿ ಹದಿಮೂರು ದಿನಗಳ ಕಾಲ ಪ್ರಧಾನಿಯಾಗಿದ್ದು ಇನ್ನೇನೂ ರಾಜಿನಾಮೆ ಕೊಟ್ಟು ನಿರ್ಗಮಿಸಬೇಕಾದ ಕೊನೆಗಳಿಗೆಯಲ್ಲಿ ವಾಜಪೇಯಿ ಸರ್ಕಾರ ಎನ್ರಾನ್ ಒಪ್ಪಂದಕ್ಕೆ ಕೇಂದ್ರ ಸರ್ಕಾರದ ಪರವಾಗಿ ಪ್ರತಿ ಗ್ಯಾರಂಟಿ ನೀಡಿತು ಎಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕಿದೆ.

ಈ ಬಿಲ್ ಪಾವತಿ ಬಿಕ್ಕಟ್ಟು ಕಂಡೊಡನೆಯೇ ಭಾರತದಲ್ಲಿನ ಅಮೇರಿಕಾದ ರಾಯಬಾರಿ ರಿಚರ್ಡ್ ಸೆಲೆಸ್ಟ್ ಮುಂಬೈಗೆ ಎರಡು ದಿನಗಳ ಭೇಟಿಗಾಗಿ ದಾವಿಸಿ ಬಂದರು. ಎಲಿಫಂಟಾ ಗುಹೆಗೆ ಅವರು ಭೇಟಿ ನೀಡಿದರಾದರೂ ಅದು ಅವರ ಭೇಟಿಯ ಉದ್ದೇಶವಾಗಿರಲಿಲ್ಲ. ಅವರ ಉದ್ದೇಶ ಮಹಾರಾಷ್ಟ್ರ ಸರ್ಕಾರದ ಜೊತೆ ಎನ್ರಾನ್ ಒಪ್ಪಂದದ ಕುರಿತು ಚರ್ಚಿಸುವುದು ಬಿಲ್ ಪಾವತಿಗೆ ಒತ್ತಡ ಹಾಕುವುದೇ ಆಗಿತ್ತು. ಮಹಾರಾಷ್ಟ್ರದಲ್ಲಿ ಹಿಂದೆ ಬಿಜೆಪಿ ಶಿವಸೇನೆ ಸರ್ಕಾರ ಎನ್ರಾನ್‌ನ ಮೊದಲ ಹಂತದ ಯೋಜನೆಯನ್ನು ರದ್ದುಪಡಿಸಿ ದಾಗ ಭಾರತದಲ್ಲಿನ ಅಂದಿನ ಅಮೇರಿಕನ್ ರಾಯಬಾರಿ ಫ್ರಾಂಕ್ ವಿನ್ಸರ್ ಧಾವಿಸಿ ಬಂದಿದ್ದರು. ಮುಂದೆ ಅವರು ನಿವೃತ್ತರಾದ ನಂತರ ಎನ್ರಾನ್ ಕಂಪನಿಯ ನಿರ್ದೇಶಕರಾದದ್ದು ನೋಡಿದರೆ ಅವರ ರಾಯಭಾರ ಕಾರ್ಯಗಳ ಮರ್ಮ ಏನೆಂದು ಅರಿಯುವುದು ಕಷ್ಟವೇನಲ್ಲ.



ಎನ್ರಾನ್ ಜೊತೆಗೆ ಈ ಒಪ್ಪಂದದಿಂದಾಗಿ ಎಂಎಸ್‌ಬಿ ಯು ಈಗ ರೈತರು, ಗೃಹಬಳಕೆದಾರರು ಮತ್ತು ವಿದ್ಯುತ್ ಮಗ್ಗಗಳಿಗೆ ಪೂರೈಸುವ ವಿದ್ಯುತ್‌ಗೆ ಶೇ 50 ರಷ್ಟು ವಿದ್ಯುತ್ ದರವನ್ನು ಏರಿಸುವ ಪ್ರಸ್ತಾಪವನ್ನು ಮುಂದಿಟ್ಟಿದೆ. ತನ್ನ ನೌಕರರಿಗೆ ತುಟ್ಟಿಭತ್ಯೆ ನೀಡಲು 32 ಕೋಟಿ ರೂಪಾಯಿಗಳು ಇಲ್ಲವೆನ್ನುವ ಇದೇ ಎಂಎಸ್‌ಇಬಿ ಯು ಅಕ್ಟೋಬರ್ ತಿಂಗಳ ವಿದ್ಯುತ್ ಬಿಲ್ ಆಗಿ ಎನ್ರಾನ್ ಸಂಸ್ಥೆಗೆ 114 ಕೋಟಿ ರೂ.ಗಳನ್ನು ಕೊಟ್ಟಿದೆ. ಎನ್ರಾನ್ ಸಂಸ್ಥೆಯ ಈ ಮಾಸಿಕ ಬಿಲ್ ಪಾವತಿಯಿಂದಾಗಿ ಆರೋಗ್ಯ, ಕುಡಿಯುವ ನೀರು ಪೂರೈಕೆ, ಬಡತನ ನಿವಾರಣಾ ಕಾರ್ಯಕ್ರಮಗಳು ಮುಂತಾದ ಯೋಜನೆಗಳಿಗೆ ಹೊಡೆತ ಬಿದ್ದಿದೆ. ಜನರಲ್ಲಿ ಆತಂಕ, ಅತೃಪ್ತಿ ಏರುತ್ತಿದ್ದು ಮುಖ್ಯ ಮಂತ್ರಿಗಳು ಇಡೀ ಯೋಜನೆಯ ಬಗೆಗೆ ಪುನರ್‌ವಿಮರ್ಶೆ ನಡೆಸುವುದಾಗಿ ತಿಳಿಸಿದ್ದಾರೆ.

ದೊಡ್ಡಣ್ಣನ ಅಂಬೋಣ

ಭಾರತ ದೇಶದಲ್ಲಿ ಅಮೆರಿಕನ್ ಕಂಪನಿಗಳಲ್ಲಿ ಅತಿಹೆಚ್ಚು ಬಂಡವಾಳ ಹೂಡಿರುವ ಎನ್ರಾನ್ ಒಪ್ಪಂದದಲ್ಲಿ ಆಗುವ ಯಾವುದೇ ಹಿನ್ನೆಡೆಯು ಮುಂದೆ ಮಹಾರಾಷ್ಟ್ರ ದಲ್ಲಿ ಹಾಗೂ ಭಾರತದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎನ್ನುತ್ತಾರೆ ಅಮೆರಿಕಾದ ರಾಯಭಾರಿ ರಿಚರ್ಡ್ ಸೆಲೆಸ್ಟೊ. ಕಳೆದ ಎರಡು ದಶಕಗಳಿಂದ ಆಳುವ ಪಕ್ಷ ಕಾಂಗ್ರೆಸ್ ಅಥವಾ

ಆರ್. ರಾಮಕೃಷ್ಣ

ಬಿಜೆಪಿ ಯಾವುದೇ ಇರಲಿ ಐಎಂಎಫ್-ವಿಶ್ವಬ್ಯಾಂಕ್ ನಿರ್ದೇಶಿತ ಅಪಾಯಕಾರಿ ಖಾಸಗೀಕರಣ, ಜಾಗತೀಕರಣ, ಉದಾರೀಕರಣ ನೀತಿಗಳನ್ನು ಪಾಲಿಸುತ್ತಿರುವುದರಿಂದ ವಿದೇಶಿ ಬಂಡವಾಳ ಹೂಡಿಕೆಯಿಂದಲೇ ಅಭಿವೃದ್ಧಿ ಸಾಧ್ಯ ಎಂದೂ ಭಾವಿಸಲಾಗಿರುವುದರಿಂದ ರಿಚರ್ಡ್ ಸೆಲೆಕ್ಸ್ ರವರ ಬೆದರಿಕೆಗೆ ಒಂದು ಅರ್ಥವೂ ಇದೆ!

ಪ್ರತಿ ಹಂತದಲ್ಲೂ ಮೋಸ

ಎನ್ರಾನ್ ಯೋಜನೆಯ ಪ್ರಥಮ ಹಂತದ ಕುರಿತು ಒಪ್ಪಂದ ಮಾಡಿಕೊಂಡದ್ದು ಶರದ್ ಪವಾರರ ನೇತೃತ್ವದ ಕಾಂಗ್ರೆಸ್ ಸರ್ಕಾರ, ಪ್ರತಿ ಯೂನಿಟ್ಟಿಗೆ ವಿದ್ಯುತ್ ಬೆಲೆ ರೂ. 2.40 ಎಂದು ಆಗ ಹೇಳಲಾಗಿತ್ತು. ಭ್ರಷ್ಟಾಚಾರ, ಮೋಸದ ಆಪಾದನೆಯ ಮೇಲೆ ಇದನ್ನೇ ಒಂದು ಪ್ರಮುಖ ಚುನಾವಣಾ ವಿಷಯವನ್ನಾಗಿ ಮಾಡಿ ಅಧಿಕಾರಕ್ಕೆ ಬಂದ ಬಿಜೆಪಿ-ಶಿವಸೇನಾ ಮೈತ್ರಿಕೂಟದ ಸರಕಾರ ಎರಡನೇ ಹಂತದ ಯೋಜನೆಗೆ ಸಹಿ ಹಾಕಿತು. ಹಾಗೂ ಪ್ರತಿ ಯುನಿಟ್ ವಿದ್ಯುತ್‌ಗೆ ಬೆಲೆ 1.85 ರೂ. ಎಂದು ಪ್ರತಿಪಾದಿಸಿತು. ವಾಸ್ತವವಾಗಿ ಇದೊಂದು ದ್ರೋಹ. 1999 ರ ಜನವರಿಯಲ್ಲಿ 'ದಾಬೋಲ್ ಪವರ್ ಕಂಪನಿ' ಮುಂದಿನ 23 ವರ್ಷಗಳಿಗೆ ವಿದ್ಯುತ್ ದರವನ್ನು ಲೆಕ್ಕ ಹಾಕಿ ವರದಿ ಕೊಟ್ಟಿದ್ದು. ಇದರಲ್ಲಿ ಸರಾಸರಿ ವಿದ್ಯುತ್ ದರ ಪ್ರತಿ ಯುನಿಟ್‌ಗೆ 2.92 ಎಂದು ತೋರಿಸಲಾಗಿದೆ.

ಎನ್ರಾನ್ ಯೋಜನೆಯ ದುಬಾರಿ ವಿದ್ಯುತ್ ದರದ ಕುರಿತು ಸುಪ್ರಿಂ ಕೋರ್ಟ್‌ನಲ್ಲಿ ಆಕ್ಷೇಪವೆತ್ತಿರುವ ಸಿಐಟಿಯು ನ ಮನವಿಗೆ ಪ್ರತಿಯಾಗಿ ಮಹಾರಾಷ್ಟ್ರ ಸರ್ಕಾರವು ವಿದ್ಯುತ್ ದರ ನಿಗದಿ ಪ್ರಶ್ನೆಯಲ್ಲಿ ತಾನೇನು ಮಾಡುವಂತಿಲ್ಲ. ಹೆಚ್ಚೆಂದರೆ ಈ ಕುರಿತು ಪರಿಶೀಲಿಸಲು ಒಂದು ತಜ್ಞರ ಸಮಿತಿ ರಚಿಸಬಹುದೆಂದು ತಿಳಿಸಿದೆ. ಸಿಐಟಿಯು ಸಂಘಟನೆ ಈ ತಜ್ಞರ ಸಮಿತಿಗೆ ಪ್ರಾಮಾಣಿಕತೆ-ನಿಸ್ಪಕ್ಷಪಾತ ನಡವಳಿಕೆಗೆ ಹೆಸರಾದ ಮಾಧವ ಗೋಡಬೋಲೆ, ಇ.ಎ.ಎಸ್.ಶರ್ಮರ ಹೆಸರನ್ನು ಸೂಚಿಸಿತ್ತು. ಆದರೆ ಸಿಐಟಿಯು

ಎನ್ರೋನ್ ಎಂಬ ಭಸ್ಮಾಸುರ ಕರ್ನಾಟಕವನ್ನು ಕಾಡದಿರಲಿ

ಕ್ಯಾಲಿಫೋರ್ನಿಯದಲ್ಲಿ ಕಗ್ಗತ್ತಲೆ, ಮಹಾರಾಷ್ಟ್ರದ ವಿದ್ಯುತ್ ಮಂಡಳಿ ಮುಳುಗುತ್ತಿದೆ. ಎಲ್ಲಿಯೋ ಕತ್ತಲಾದರೆ ನಮಗೇನು? ಯಾವುದೋ ರಾಜ್ಯದ ವಿದ್ಯುತ್ ಮಂಡಳಿ ತಾನೆ, ಮುಳುಗಲೇಳಲಿಬಿಡಿ. ಇದು ಒಂದೆರಡು ವರ್ಷದ ಹಿಂದೆ ಕರ್ನಾಟಕದವರಾದ ಜನಸಾಮಾನ್ಯರು ಕೇಳುವಂತಹ ಪ್ರಶ್ನೆಯಾಗಿತ್ತು.

ಆದರೆ ಇಂದು ಕರ್ನಾಟಕದ ಜನರು-ವಿದ್ಯಾವಂತ ಪುರನಿವಾಸಿಗಳು ಮಾತ್ರವೇ ಅಲ್ಲ ದೂರದೂರದ ಕುಗ್ರಾಮಗಳ ರೈತರು, ಕೂಲಿಕಾರರು ಕೂಡ ಕಿವಿಗೊಟ್ಟು ಕೇಳುವಂತಹ ವಿಷಯವಾಗಿದೆ. ಕರ್ನಾಟಕದ ಕೈಗಾರಿಕೋದ್ಯಮಿಗಳು, ಆಡಳಿತಗಾರರು ಗಾಬರಿಪಡಬೇಕಾದ ವಿಷಯವಾಗಿದೆ.

ಕ್ಯಾಲಿಫೋರ್ನಿಯ ಎಂಬುದು ಜಗತ್ತಿನ ಅತ್ಯಂತ ಶ್ರೀಮಂತ ದೇಶವೆಂದು ಹೆಸರಾದ ಅಮೆರಿಕದ ಅತ್ಯಂತ ಶ್ರೀಮಂತ ರಾಜ್ಯಗಳಲ್ಲೊಂದು ಈ ರಾಜ್ಯವೊಂದರ ಉತ್ಪಾದನೆ, ಜಗತ್ತಿನಲ್ಲಿ ಭಾರತ ಮತ್ತು ಮತ್ತಿತರ ಅನೇಕ ದೇಶಗಳ ಒಟ್ಟು ಉತ್ಪಾದನೆಯ ಮೌಲ್ಯಕ್ಕಿಂತ ಹೆಚ್ಚು. ಇಂತಹ ಶ್ರೀಮಂತಿಕೆಯ ರಾಜ್ಯದಲ್ಲಿ ಶ್ರೀಮಂತರು ಅಂಧಕಾರದಲ್ಲಿ ಮುಳುಗುವಂತಹ, ತಮ್ಮ ಹವಾನಿಯಂತ್ರಣ ವ್ಯವಸ್ಥೆ, ಫ್ರಿಜ್‌ಗಳಿಲ್ಲದೆ ತಹತಹಿಸುವಂತಹ ಸ್ಥಿತಿ ಏಕೆ? ಅಲ್ಲಿಯ ಶ್ರೀಮಂತರಲ್ಲಿಯೇ ಶ್ರೀಮಂತರಾದವರೇ ಆ ರಾಜ್ಯದ ವಿದ್ಯುತ್ ಉತ್ಪಾದನೆಯ ಸರಬರಾಜಿನ ಹೊಣೆ ಹೊತ್ತಿರುವುದರಿಂದಲೇ ಈ ಸಂಕಷ್ಟ! ಖಾಸಗೀ ಬಂಡವಾಳ ಶಾಹಿ ವ್ಯವಸ್ಥೆಯ ಆರಾಧಕ ಜಗತ್ತೆಲ್ಲಾ ನಮ್ಮ ಖಾಸಗೀಕರಣ ಮಾಡಿ ತನ್ನ ದೇಶದ ಅತಿ ಶ್ರೀಮಂತರ ಹಿಡಿತಕ್ಕೊಪ್ಪಿಸಬೇಕೆಂದು ಹಗಲಿರುಳೂ ತಿಣುಕುತ್ತಿರುವ ಅಮೆರಿಕದಲ್ಲಿ ವಿದ್ಯುತ್ ಉತ್ಪಾದನೆ ಹಾಗೂ ಸರಬರಾಜು ಪೂರ್ಣವಾಗಿ ಖಾಸಗೀಕರಣಗೊಂಡಿದೆ. ಇವರೊಳಗಿನ ಪೈಪೋಟಿ ಇಡೀ ಸಮಾಜವನ್ನು ಬಲಿಗೊಟ್ಟು ದುರ್ಲಾಭ ಪಡೆಯುವ ದಾಹ ಅನಾಗರೀಕ ಮಟ್ಟಕ್ಕೇರಿ ಇಂದು ಶ್ರೀಮಂತರು ಬಡವರು ಎಲ್ಲರೂ ಸಂಕಟವನ್ನು ಅನುಭವಿಸಬೇಕಾಗಿದೆ ಅಲ್ಲಿ.

ಈ ಪ್ರಸಂಗ ಖಾಸಗೀಕರಣದ ಮಂತ್ರ ಆಶಿಸುತ್ತಿರುವ ಭಾರತ ಸರ್ಕಾರದ ಕಣ್ಣು ತೆರೆಯಿಸಬೇಕು. ಇತ್ತೀಚೆಗೆ ವಾಜಪೇಯಿಯವರು ಕರೆದ ಮುಖ್ಯಮಂತ್ರಿಗಳ ಸಭೆಯಲ್ಲಿ! ಎಲ್ಲರೂ ಈ ಕ್ಷಣವೇ ಖಾಸಗೀಕರಣ ಮಾಡಬೇಕು ಎಂದು ಪ್ರಧಾನಿಯವರು ಅರ್ಭಟಿಸಿದಾಗ ಕ್ಯಾಲಿಫೋರ್ನಿಯದ ಉದಾಹರಣೆಯನ್ನು ನೀಡಿ ಸಾವಧಾನ! ಸಾವಧಾನ!! ಎಂದವರು ಯಾರು ಗೊತ್ತೆ? ಕರ್ನಾಟಕದ ಹೈಟೆಕ್ ಖಾಸಗೀಕರಣದ ಆಚಾರ್ಯ ಎಸ್.ಎಂ.ಕೃಷ್ಣರವರು. ಎತ್ತಣ ಕರ್ನಾಟಕ ಎತ್ತಣ ಕ್ಯಾಲಿಫೋರ್ನಿಯ, ಎತ್ತಣಿಂದೆತ್ತ ಸಂಬಂಧವಯ್ಯ ಎನ್ನದಿರಿ, ಇಂದು ಕ್ಯಾಲಿಫೋರ್ನಿಯದಲ್ಲಾದದ್ದು. ನಾಳೆ ಕರ್ನಾಟಕಕ್ಕೆ ವಕ್ಕರಿಸೀತು.

ಹಾಗೆಯೇ ನಮ್ಮ ದೇಶದಲ್ಲಿ ವಿದ್ಯುತ್ ತಯಾರಿಕೆಯ ಖಾಸಗೀಕರಣ ಆರಂಭಿಸಿದಾಗ ಇಡೀ ದೇಶಕ್ಕೆ ಒಂದು ಮಾದರಿಯನ್ನಾಗಿ ಮಾಡ ಹೊರಟದ್ದು 'ಎನ್ರಾನ್' ಎಂಬ ವಿದೇಶಿ ಕಂಪನಿಯನ್ನು ಈ ಕಂಪನಿ ಕೇಳಿದ್ದನ್ನೆಲ್ಲಾ ಹೂಂಗುಟ್ಟಿ ಅನುಮತಿ ನೀಡಿದ್ದು 1996 ರಲ್ಲಿ 13 ದಿನದ ಸರಕಾರ ನಡೆಸಿದ ವಾಜಪೇಯಿಯವರು ತಾವು ರಾಜೀನಾಮೆ ನೀಡುವ ಕೆಲವೇ ಗಂಟೆಗಳ ಮೊದಲು ಈ ಎನ್ರಾನ್ ಕಂಪನಿಯು ವಿದ್ಯುತ್ ಬಿಲ್ ಅನ್ನು ಅದು ಉತ್ಪಾದಿಸಿದ ವಿದ್ಯುತ್ ಅನ್ನು ಉಪಯೋಗಿಸಿದರೂ ಉಪಯೋಗಿಸದಿದ್ದರೂ ಸಾವಿರಾರು ಕೋಟಿ ರೂ. ಬಿಲ್ ಕೂಡಲೇ ಬೇಕು. ಇದರಿಂದಾಗಿ ಮಹಾರಾಷ್ಟ್ರ ವಿದ್ಯುತ್ ಮಂಡಳಿ ದಿವಾಳಿಯಾಗುವ ಪರಿಸ್ಥಿತಿ ಬಂದಿದೆ. ನಾನು ಈ ಬಿಲ್‌ನ ಭರಿಸಲಾರೆ ಎಂದು ಮಹಾರಾಷ್ಟ್ರ ಸರ್ಕಾರದ ಮೊರೆ ಹೊಕ್ಕಿದೆ. ರಾಜ್ಯ ಸರ್ಕಾರವಾದರೂ ಧಿಡೀರನೇ ಸಾವಿರಾರು ಕೋಟಿ ರೂ.ಗಳನ್ನು ಎಲ್ಲಿಂದ ತಂದೀತು? ಈ ಬಾಕಿ ಪಾವತಿ ಮಾಡಿದರೆ ರಾಜ್ಯ ಸರ್ಕಾರವೇ ದಿವಾಳಿಯಾದೀತು!

ಆದರೆ ಎನ್ರಾನ್ ಭಸ್ಮಾಸುರನಂತೆ ಕೈಯೆತ್ತಿ ಬೆನ್ನು ಹತ್ತಿದೆ. ಮಹಾರಾಷ್ಟ್ರ ವಿದ್ಯುತ್ ಮಂಡಳಿಯಲ್ಲದಿದ್ದರೆ ರಾಜ್ಯ ಸರ್ಕಾರ. ರಾಜ್ಯ ಸರ್ಕಾರ ಕೊಡುವುದಿಲ್ಲವೇ! ಹಾಗಾದರೆ ನೀವೇ ಕೊಡಿ ಎಂದು ಕೇಂದ್ರ ಸರ್ಕಾರದ ಬೆನ್ನು ಹತ್ತಿದೆ. ಲಂಡನ್‌ನ ಅಂತರಾಷ್ಟ್ರೀಯ ಪಂಚಾಯತಿ ಕಟ್ಟೆ ಮುಂದೆ ನಿಲ್ಲಿಸುತ್ತೇನೆಂದು ಅರ್ಭಟಿಸುತ್ತಿದೆ.

ಕರ್ನಾಟಕ ರಾಜ್ಯ ಸರ್ಕಾರವೂ ಮಂಗಳೂರು ಬಳಿಯ ಕೊಜೆಂಟ್ರಿಕ್ಸ್,ಬಳ್ಳಾರಿಯ ಹೊಸಪೇಟೆ, ಬೆಂಗಳೂರು ಬಳಿಯ ರಾಮನಗರ ಹೀಗೆ ಹಲವು ಭಾಗಗಳಲ್ಲಿ ಖಾಸಗಿ ವಿದೇಶಿ ವಿದ್ಯುತ್ ತಯಾರಿಕೆಗೆ ಅವಕಾಶ ನೀಡಿದೆ.

ಇವೆಲ್ಲಾ ಕಾರ್ಯಗತವಾದರೆ ವಿದ್ಯುತ್ ಬರದ ಬವಣೆ ಹರಿದು ಬೆಳಕೋ ಬೆಳಕೋ ಎಲ್ಲೆಲ್ಲಿಯೂ ಝಗ್ಗನ್ನುವ ವಿದ್ಯುತ್ ದೀಪಗಳ ಕಣ್ಣು ಕೋರೈಸುವ ಬೆಳಕು ಎಂದು ಕರ್ನಾಟಕ ಸರ್ಕಾರ ಜನಸಾಮಾನ್ಯರಿಗೂ ಸವಿಗನಸುಗಳ ಸರಮಾಲೆಯನ್ನೇ ಉಣಿಸುತ್ತಿರುವಾಗ ಬಂದೆರಗಬೇಕೇ ಕ್ಯಾಲಿಫೋರ್ನಿಯ ಕಗ್ಗತ್ತಲ ಹಾಳುಗನಸು - ಎನ್ರಾನ್ ಎಂಬ ಭಸ್ಮಾಸುರನ ಭೂತ.

ಜಿ.ಎನ್.ನಾಗಾರಾಜ್

ಬಿಕ್ಕಟ್ಟು

ಪ್ರಸ್ತಾವನೆಗೆ ವಿರೋಧ ಸೂಚಿಸಲಾಯಿತು. ಎನ್ರಾನ್ ಯೋಜನೆಯ ಬೆಂಬಲಿಗರೆಂದು ಪರಿಗಣಿಸಲಾದ ಕೀರ್ತಿ ಫರಿಕ್ ಮತ್ತು ಪಚೌರಿಯವರನ್ನು ರಾಜ್ಯ ಇಂಧನ ಮಂತ್ರಿ ಪದ್ಮಾಸಿಂಗ್ ಪಾಟೀಲ್ ಸೂಚಿಸಿದರು. ಹಲವು ತಿಕ್ಕಾಟಗಳ ನಂತರ ಕೊನೆಗೆ ಗೋಡ್‌ಬೊಲೆಯವರನ್ನು ಅಧ್ಯಕ್ಷರನ್ನಾಗಿ ಹಾಗೂ ಫರಿಕ್, ಪಚೌರಿ, ಕರ್ಮ ಇವರನ್ನು ಸದಸ್ಯರನ್ನಾಗುಳ್ಳ ಸಮಿತಿಯನ್ನು ನೇಮಕ ಮಾಡಲಾಗಿದೆ.

ರಾಜ್ಯ ಹಣಕಾಸು ಮಂತ್ರಿ ಜಯಂತ್ ಪಾಟೀಲ್ ಅವರು ರಿಚರ್ಡ್ ಸೆಲೆಸ್ಟ್ ಅವರನ್ನು ಭೇಟಿ ಮಾಡಿದ ನಂತರ ಬಿಕ್ಕಟ್ಟಿನ ಬಗೆಗೆ ಅವರ ನಿಲುವು ಬದಲಾಗಿದೆ. ಸಾಧ್ಯವಾಗುರುವವರೆಗೆ ವಿದ್ಯುತ್ ಬಿಲ್ ಪಾವತಿಗೆ ರಾಜ್ಯ ಸರ್ಕಾರದ ಸಹಾಯ ಕೋರುವುದು ನಂತರ ಕೇಂದ್ರ ಸರ್ಕಾರದ ಸಹಾಯ ಕೋರುವುದು ಅವರ ನಿಲುವು. ಮುಖ್ಯಮಂತ್ರಿಗಳ ನಿಲುವಿಗಿಂತ ಇದು ಭಿನ್ನವಾಗಿದೆ. 'ನ್ಯಾಷನಲ್ ಪವರ್ ಕಂಪನಿ'ಯ ಮೂಲಕ ಎನ್ರಾನ್ ಯೋಜನೆ -2 ನ್ನು ಕೇಂದ್ರ ಸರ್ಕಾರ ಕೊಳ್ಳುವಂತೆ ಮಾಡುವ ಪ್ರಯತ್ನವು ನಡೆಯುತ್ತಿದೆ. ಈ ಮೂಲಕ ಇತರ ರಾಜ್ಯಗಳಿಗೂ ವಿದ್ಯುತನ್ನು ವಿತರಿಸಲು ಸಾಧ್ಯವಾಗುತ್ತದೆ ಎಂಬುದು 'ಎನ್ರಾನ್' ಮಿತ್ರರ ಯೋಜನೆ. ರಾಜ್ಯದ ಹೊಸ ಇಂಧನ ಮಂತ್ರಿಸುರೇಶ್ ಪ್ರಭು ಇದನ್ನು ಹೇಗಾದರೂ ಸಾಧಿಸಲು ಪ್ರಯತ್ನಿಸುತ್ತಾರೆ ಎಂದು ಹಲವರು ನಿರೀಕ್ಷಿಸಿದ್ದಾರೆ.

ಈ ಹಿಂದೆ ಆಡಳಿತ ನಡೆಸಿದ ಕಾಂಗ್ರೆಸ್-ಬಿಜೆಪಿ-ಶಿವಸೇನೆ ಸರ್ಕಾರಗಳು, ತಮ್ಮ ಸ್ವಾರ್ಥ-ಭ್ರಷ್ಟಾಚಾರ ಹಾಗೂ ಮೂರ್ಖತನಗಳಿಂದಾಗಿ ರಾಜ್ಯದ ಜನತೆಯ ಮೇಲೆ ಇಂತಹ ದೈತ್ಯ ಹೊರೆಯನ್ನು ಹೇರಿದ್ದಾರೆ. ರಾಜ್ಯದ ಜನತೆಗೆ ಸಾವಕಾಶವಾಗಿ 'ಎನ್ರಾನ್' ವಿದ್ಯುತ್ತಿನ ಬಿಸಿ ತಟ್ಟಲಾರಂಭಿಸಿದೆ. ಜನರ ತೀವ್ರ ಅತೃಪ್ತಿ ಶೇಖರಗೊಳ್ಳುತ್ತಿದೆ. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. 'ದಾಬೋಲ್ ಪವರ್ ಕಂಪನಿ' ಯ ಗೇಟ್‌ನಲ್ಲಿ ಪ್ರತಿಭಟನೆ, ಜಿಲ್ಲಾ ಮಟ್ಟದ ರ್‍ಯಾಲಿಗಳು ಹೋರಾಟವನ್ನು, ಪ್ರಚಾರಾಂದೋಲನವನ್ನು ಎಡಪಕ್ಷಗಳು ಯೋಜಿಸಿವೆ.

ಎನ್ರಾನ್ ಯೋಜನೆ-ಪರಿಣಾಮ ಕೇವಲ ಮಹಾರಾಷ್ಟ್ರಕ್ಕಲ್ಲ ಇಡೀ ದೇಶಕ್ಕೆ ಒಂದು ಉತ್ತಮ ಪಾಠವಾಗಲಿದೆ. ಈ ಅನುಭವವನ್ನು ಜನರ ನಡುವೆ ಕೊಂಡೊಯ್ಯಬೇಕಾದ ಜವಾಬ್ದಾರಿ ಇದೆ.

ಎನ್ರೋನ್ ಮೇಲೆ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದ 'ಮೋಸ ಮಾಡಿದ' ಕೇಸ್

ಎನ್ರೋನ್ ಕ್ಯಾಲಿಫೋರ್ನಿಯದಲ್ಲಿ ಕತ್ತಲು ತಂದಿರುವ ದೈತ್ಯ ವಿದ್ಯುತ್ ಕಂಪನಿಗಳಲ್ಲಿ ಒಂದು ಎಂದರೆ ನಿಮಗೆ ಆಶ್ಚರ್ಯವಾಗುವುದೇ? ಇದು ಮಾತ್ರವಲ್ಲ ಎನ್ರೋನ್ ತನ್ನ ಲಾಭಕೋರತನದಿಂದ ಕೋರ್ಟಿನ ಕಟ್ಟೆ ಹತ್ತಬೇಕಾಗಿ ಬಂದಿದೆ. ಎನ್ರೋನ್ ವಿಶ್ವವಿದ್ಯಾಲಯ ಜೊತೆ ಮಾಡಿಕೊಂಡ, ನಾಲ್ಕು ವರ್ಷಗಳ ಕಾಲ ನಿಗದಿತ ಬೆಲೆಗೆ ನಿಗದಿತ ಪ್ರಮಾಣದ ವಿದ್ಯುತ್ ಪೂರೈಕೆ ಮಾಡುವ ಒಪ್ಪಂದ ಪಾಲಿಸುತ್ತಿಲ್ಲ, ನಿಗದಿತ ಪ್ರಮಾಣಕ್ಕಿಂತ ಕಡಿಮೆ ವಿದ್ಯುತ್ ಪೂರೈಕೆ ಮಾಡಿ, ಮುಕ್ತ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಕೊಳ್ಳುವಂತೆ ಮಾಡಿ ಮೋಸ ಮಾಡುತ್ತಿದೆ ಎಂದು ಕೋರ್ಟಿನ ಕಟ್ಟೆ ಹತ್ತಿದೆ.

ಕ್ಯಾಲಿಫೋರ್ನಿಯಾದಲ್ಲಿ ವಿದ್ಯುತ್ ಬರ

ನಿಬಂಧನೆಗೆ ಕೂಗು

ಶ್ರೀಮಂತ ದೇಶದ ಶ್ರೀಮಂತ ರಾಜ್ಯದಲ್ಲಿ ಕತ್ತಲು ಏಕೆ ಆವರಿಸಿತು?

ಕ್ಯಾಲಿಫೋರ್ನಿಯಾದಲ್ಲಿ ತೀವ್ರ ವಿದ್ಯುತ್ ಬಿಕ್ಕಟ್ಟು ಕ್ರಿಸ್‌ಮಸ್‌ದಿನದ ಹಿಂದಿನ ರಾತ್ರಿ ಇಡೀ ರಾಜ್ಯದಲ್ಲಿ ಕತ್ತಲು ಆವರಿಸುವುದ ರೊಂದಿಗೆ ಆರಂಭವಾಗಿ; ಇಡೀ ಚಳಿಗಾಲದಲ್ಲಿ ಕಗ್ಗಂಟಾಗಿತ್ತು. ಕ್ಯಾಲಿಫೋರ್ನಿಯದಲ್ಲಿ ವಿದ್ಯುತ್ ಬಿಕ್ಕಟ್ಟುಕಾಲದಲ್ಲಿ ಏನಾಯಿತು? ಶ್ರೀಮಂತ ದೇಶದ ಈ ಶ್ರೀಮಂತ ರಾಜ್ಯದಲ್ಲಿ ಕತ್ತಲು ಆವರಿಸಲು ಕಾರಣವಾದ ಹಿನ್ನೆಲೆ ಏನು? ಇದರಿಂದ ನಮ್ಮ ದೇಶದಲ್ಲಿ ವಿದ್ಯುತ್ ಖಾಸಗೀಕರಣದ ಸಂದರ್ಭದಲ್ಲಿ ನಾವು ಏನು ಪಾಠ ಕಲಿಯಬಹುದು ? ಎಂಬ ಬಗ್ಗೆ ಚರ್ಚಿಸುವ ಲೇಖನ

ಶರತ್ ಚಂದ್ರ

ಕ್ಯಾಲಿಫೋರ್ನಿಯ ಜಗತ್ತಿನ ಅತ್ಯಂತ ಶ್ರೀಮಂತ ದೇಶವಾದ ಅಮೆರಿಕದ ತಾಂತ್ರಿಕವಾಗಿ ಅತ್ಯಂತ ಮುಂದುವರೆದ ಶ್ರೀಮಂತ ರಾಜ್ಯ. ಈ ರಾಜ್ಯ ಅಮೆರಿಕದ ಪಶ್ಚಿಮ ಕರಾವಳಿಯಲ್ಲಿದೆ. ಕಳೆದ ಕ್ರಿಸ್‌ಮಸ್ ದಿನದ ಹಿಂದಿನ ರಾತ್ರಿ ಈ ರಾಜ್ಯದಲ್ಲಿ ಕತ್ತಲು ಆವರಿಸಿತ್ತು. ಪಂಪುಗಳನ್ನು ಆರಿಸಿದರೆ ಮಾತ್ರ ಲೈಟ್ ಉರಿಯುತ್ತಿತ್ತು ಎಂಬ 'ಪ್ರಾಚೀನ' ಅವ್ಯವಸ್ಥೆಗೆ ಕ್ಯಾಲಿಫೋರ್ನಿಯಾ ತಿರುಗಿತ್ತು. ಇದು ಯಾಕೆ ಹೀಗೆ ಎಂದಿರಾ? ಈ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 'ವಿದ್ಯುತ್ ಸುಧಾರಣೆ' ತರಲಾಗಿತ್ತು. ಅದರ ನೇರ ಫಲ ಇದಾಗಿತ್ತು? 'ವಿದ್ಯುತ್ ಸುಧಾರಣೆ' ಯೆಂದರೆ ಕತ್ತಲು ಹೇಗೆ ಬರುತ್ತದೆ ಎಂದಿರಾ? ವಿದ್ಯುತ್ ಸುಧಾರಣೆ ಎಂದರೆ ಖಾಸಗೀಕರಣ, ವಿದ್ಯುತ್ ವ್ಯವಸ್ಥೆಯ ನಿಬಂಧನೆಯ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಪ್ರತಿ ಸ್ಥಾವರಕ್ಕೆ ಮುಕ್ತ ಪೈಪೋಟಿಗೆ ಅವಕಾಶ ಮಾಡಿಕೊಡುವುದು ಎಂದಾಗ ಅದರ ಫಲ ಕತ್ತಲು ಸ್ವಾಭಾವಿಕವೇ! ಕಳೆದ ನಾಲ್ಕು ವರ್ಷಗಳಿಂದ ವಿದ್ಯುತ್ ಒದಗಿಸುವುದರಲ್ಲಿ ದಕ್ಷತೆ ಹೆಚ್ಚಿಸಲು, ವಿದ್ಯುತ್ ದರ ಕಡಿಮೆ ಮಾಡಲು ಮಹಾರಾಷ್ಟ್ರದಲ್ಲಿ 'ಎನ್ರೋನ್ ಹಗರಣ' ದಿಂದ ಆರಂಭವಾಗಿ ಈಗ ದೇಶದ ತುಂಬಾ ಹಬ್ಬುತ್ತಿರುವ 'ವಿದ್ಯುತ್ ಸುಧಾರಣೆ'ಗಳು ತರುವ ಕತ್ತಲ ಅನುಭವವಾದವರಿಗೆ ಇದು ಆಶ್ಚರ್ಯ ಎನಿಸಲಿಕ್ಕಿಲ್ಲ.

ಆದರೂ 'ಮುಕ್ತ ಮಾರುಕಟ್ಟೆ' 'ಅನಿರ್ಬಂಧಿತ ಬಂಡವಾಳಶಾಹಿ' ಪದ್ಧತಿ ಕೆಲಸ ಮಾಡುತ್ತದೆ ಎನ್ನಲಾದ ಅಮೆರಿಕಾದಲ್ಲೂ ಈ ಅವಸ್ಥೆಯೆಂದು ನಿಮಗೆ ಆಶ್ಚರ್ಯವಾಗಬಹುದು ಅಷ್ಟೇ!

ಕ್ಯಾಲಿಫೋರ್ನಿಯಾದ ಈ 'ವಿದ್ಯುತ್ ಸುಧಾರಣೆ'ಗಳ ಫಲವಾಗಿ ಜಲ ವಿದ್ಯುತ್ ಯೋಜನೆಗಳನ್ನು ದೊಡ್ಡ ಕೈಗಾರಿಕೋದ್ಯಮಿ ಗಳು 'ಗುಳುಂ' ಮಾಡಿದ್ದಾರೆ. ವಿದ್ಯುತ್ ಬೆಲೆ ಶೇಕಡಾ 20 ರಷ್ಟು ಏರಿದೆ. ಯಾವುದೇ ಹೊಸ ವಿದ್ಯುತ್ ಯೋಜನೆಗಳು ಒಂದೇ ಒಂದು ಆರಂಭವಾಗಿಲ್ಲ. ಇದಲ್ಲದೆ ವಿದ್ಯುತ್ ಬಾರಿಬಾರಿಗೆ ನಿಲ್ಲುವುದು, ಮುಂತಾದ ಅದ್ವಾನ ಬೇರೆ. ಕ್ಯಾಲಿಫೋರ್ನಿಯದ ವಿದ್ಯುತ್ ಸುಧಾರಣೆಗಳ ಅದ್ವಾನ, ಇಂತಹುದೇ ಸುಧಾರಣೆಗಳನ್ನು ತರ ಹೊರಟಿರುವ ಇತರ ರಾಜ್ಯಗಳಿಗೆ ನಡುಕ ಹುಟ್ಟಿಸಿದೆ.

ವಿದ್ಯುತ್ ಪೂರೈಕೆ ಪರಿಸ್ಥಿತಿ ಎಷ್ಟು ಕೆಟ್ಟಿದೆಯೆಂದರೆ, ಕ್ಯಾಲಿಫೋರ್ನಿಯದ ರಾಜ್ಯದ ವಿಧಾನಸಭೆ ರಾಜ್ಯ ಸರ್ಕಾರಕ್ಕೆ ವಿದ್ಯುತ್ ಮಾರುಕಟ್ಟೆಯಲ್ಲಿ ನಿಬಂಧನೆ ಹೇರಿ ಮಧ್ಯ ಪ್ರವೇಶ ಮಾಡುವ ವಿಧೇಯಕ ಪಾಸು ಮಾಡಿದೆ.

ಕತ್ತಲು ಆವರಿಸಿದ್ದು ಏಕೆ?

ಕ್ಯಾಲಿಫೋರ್ನಿಯದಲ್ಲಿ ಈ ಚಳಿಗಾಲ ಕತ್ತಲು ಆವರಿಸಿದ್ದು ಏಕೆ? ಎಂದು ತಿಳಿದುಕೊಳ್ಳಬೇಕಾದರೆ ಅಮೆರಿಕದ-ಅದರ ಭಾಗವಾಗಿ ಕ್ಯಾಲಿಫೋರ್ನಿಯದ ವಿದ್ಯುತ್ ಉತ್ಪಾದನಾ, ವಿತರಣಾ ವ್ಯವಸ್ಥೆ ಬಗ್ಗೆ ತಿಳಿದುಕೊಳ್ಳಬೇಕು. ಬೇರೆ ಹೆಚ್ಚಿನ ದೇಶದಂತೆ ವಿದ್ಯುತ್ ಉತ್ಪಾದನೆ, ವಿತರಣೆ ಸಾರ್ವಜನಿಕ ಕ್ಷೇತ್ರದಲ್ಲಿ ಅಥವಾ ಸರ್ಕಾರಿ ಸಂಘಟನೆಯಾಗಿಲ್ಲ. ಹಿಂದಿನಿಂದಲೂ ಅದು ಖಾಸಗಿ ಕಂಪನಿಗಳೇ. ಆದರೆ 20ನೇ ಶತಮಾನದ ಮೊದಲ ದಶಕದಲ್ಲಿ ದೇಶದ ವಿದ್ಯುತ್ ಉತ್ಪಾದನ-ವಿತರಣೆ ವ್ಯವಸ್ಥೆಯ ಮುಕ್ಕಾಲು ಭಾಗ ಕೆಲವೇ ಕಂಪನಿಗಳು ನಡೆಸುತ್ತಿದ್ದವು. ಈ ರೀತಿಯ ಏಕಸ್ವಾಮ್ಯ ಸಾರ್ವಜನಿಕ ಹಿತದಲ್ಲಿ ಒಳ್ಳೆಯದಲ್ಲ ಎಂದು ಭಾವಿಸಿದ ಆಗಿನ ಸರ್ಕಾರ 1935 ರಲ್ಲಿ ಒಂದು ಕಾನೂನು ತಂದು ಆಗಿನ ಕಂಪನಿಗಳನ್ನು ಒಡೆದು 300 ಪ್ರದೇಶಗಳಲ್ಲಿ 300 ಕಂಪನಿಗಳನ್ನು ತಂದಿತು. ಇದಲ್ಲದೆ 800 ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಗಳು ಅಸ್ತಿತ್ವಕ್ಕೆ ಬಂದವು. ಈ ಹೊಸ ಕಾನೂನು ಪ್ರಕಾರ ಒಂದು ಪ್ರದೇಶದಲ್ಲಿ ಒಂದು ಕಂಪನಿಗೆ ವಿದ್ಯುತ್ ಉತ್ಪಾದನೆ, ವಿತರಣೆಯಲ್ಲಿ ಏಕಸ್ವಾಮ್ಯ ನೀಡಲಾಯಿತು. ಇದಕ್ಕೆ ಪ್ರತಿಯಾಗಿ ಈ ಕಂಪನಿಗಳು ಹಲವು ನಿಬಂಧನೆಗಳನ್ನು ಪಾಲಿಸಬೇಕಾಗಿತ್ತು. ಇದರಲ್ಲಿ ವಿದ್ಯುತ್‌ನ ಗುಣಮಟ್ಟ, ಬೆಲೆ, ಪ್ರಮಾಣಗಳನ್ನು ಸಾರ್ವಜನಿಕ ಕಮಿಷನ್ ಗಳು ನಿಗದಿ ಪಡಿಸಿದ್ದನ್ನು ಪಾಲಿಸಬೇಕಿತ್ತು. ಪ್ರಮಾಣ, ಬೆಲೆಯನ್ನು ಸಾರ್ವಜನಿಕ ಅಗತ್ಯಕ್ಕೆ ಸರಿಯಾಗಿ ನಿಬಂಧನೆಗೆ ಒಳಪಡಿಸುವುದರಲ್ಲಿ ಯಶಸ್ವಿಯಾಯಿತು. ಈ ಕಂಪನಿಗಳ ನಿಬಂಧನೆಗೆ ಮಾಡುವ ಕಮಿಷನ್‌ಗಳ ಕೈ ಕೆಲವೊಮ್ಮೆ ತಿರುಚಿ ತಮಗೆ ಅನುಕೂಲ ನಿರ್ಣಯಗಳನ್ನು ಪಡೆದರೂ, ನಿಬಂಧನೆ ಒಟ್ಟಾರೆ ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿತ್ತು. ಆದರೆ 300 ಶತಕೋಟಿ ಡಾಲರುಗಳ ಈ ಬೃಹತ್ ವಿದ್ಯುತ್ ಕೈಗಾರಿಕೆಯ ಒಳಗೆ ಹಲವು ಕಂಪನಿಗಳು ಈ ನಿಬಂಧನೆಗಳನ್ನು ರದ್ದು ಮಾಡಿ 'ಮುಕ್ತ ಮಾರುಕಟ್ಟೆ ಪೈಪೋಟಿ'ಗೆ ಅವಕಾಶ ಮಾಡಬೇಕು ಎಂಬ ತೀವ್ರಕೂಗು ಕೇಳತೊಡಗಿದವು. 90 ರ ದಶಕದ ಆದಿ ವೇಳೆಗೆ. ಹಲವು ಕಂಪನಿಗಳು ಬರಿಯ ಕೂಗು ಹಾಕಲಿಲ್ಲ, ಅಮೆರಿಕದ ರಾಜಕೀಯದಲ್ಲಿ ಸಾಮಾನ್ಯವಾದ 'ಲಾಬಿ' ಆರಂಬಿಸಿದವು. ಎರಡೂ ಆಳುವ ಪಕ್ಷಗಳ ಚುನಾವಣಾ ಪ್ರಚಾರಕ್ಕೆ ದುಡ್ಡು ಸುರಿದವು. ಇದರ ಫಲವಾಗಿ 1992 ರಲ್ಲಿ ವಿದ್ಯುತ್ ವ್ಯವಸ್ಥೆ ಯಲ್ಲಿ ನಿಬಂಧನೆಗಳನ್ನು ತೆಗೆದು ಹಾಕುವ ಕಾನೂನನ್ನು ಕೇಂದ್ರ ಸರ್ಕಾರ ತಂದಿತು.

ಹಲವು ರಾಜ್ಯಗಳಲ್ಲಿ (ಕ್ಯಾಲಿಫೋರ್ನಿಯ ಸೇರಿ) ದುಬಾರಿಯಾದ ಅಣು ವಿದ್ಯುತ್ ಸ್ಥಾವರಗಳನ್ನು ಹೆಚ್ಚಾಗಿ ರಚಿಸಿದ್ದರಿಂದ ಮತ್ತು ಇತರ ಹಣಕಾಸು ಶಿಸ್ತಿನ ಅಭಾವದಿಂದ ವಿದ್ಯುತ್ ಕಂಪನಿಗಳ ವೆಚ್ಚ ಹೆಚ್ಚಿತು. ಈ ಹೆಚ್ಚಿದ ನಿಬಂಧಿತ ವಿದ್ಯುತ್ ಬೆಲೆ ತಪ್ಪಿಸಿ, ಮುಕ್ತ ಮಾರುಕಟ್ಟೆ ಬಂದರೆ ತಮ್ಮ ವಿದ್ಯುತ್ ವೆಚ್ಚ ಕಡಿಮೆಯಾದೀತು - ಎಂಬ ಆಧಾರದ ಮೇಲೆ ಹಲವು ವಿದ್ಯುತ್ ಬಳಸುವ ದೊಡ್ಡ ಕೈಗಾರಿಕಾ ಘಟಕಗಳ ಮಾಲಕರು ಬಯಸಿ ನಿಬಂಧನೆ ತೆಗೆದುಹಾಕಲು ಅವರೂ ಬೆಂಬಲವಿತ್ತರು.

ವಿದ್ಯುತ್ ಕೈಗಾರಿಕೆಗಳು ಕ್ಯಾಲಿಫೋರ್ನಿಯದ 'ವಿದ್ಯುತ್ ಸುಧಾರಣೆ'ಗಳ ಹೆಸರಲ್ಲಿ ನಿಬಂಧನೆ ತೆಗೆದು ಹಾಕುವ ಕಾನೂನನ್ನು ತಾವೇ ಬರೆದು ತಮ್ಮ ಅಪಾರ ಹಣಬಲದಿಂದ ಕ್ಯಾಲಿಫೋರ್ನಿಯ ರಾಜ್ಯ ಸರ್ಕಾರದ ಮೇಲೆ ಹೊರಿಸುವಲ್ಲಿ ಯಶಸ್ವಿಯಾದವು. ಅವರೇ ಬರೆದ ಕಾನೂನು ಸ್ವಾಭಾವಿಕವಾಗಿಯೇ ಅವರಿಗೆ ಅನುಕೂಲಕರವಾಗಿತ್ತು. ವಿದ್ಯುತ್ ಉತ್ಪಾದನೆ, ವಿತರಣೆಯನ್ನು ಮುಕ್ತ ಪೈಪೋಟಿಯಿಂದ ಬರುವ ಲಾಭದ ಹಾನಿಯೆಲ್ಲ ಸಾರ್ವಜನಿಕರು ಭರಿಸುವಂತೆ ಕಾನೂನು ರಚಿಸಲಾಯಿತು. 1996 ರಲ್ಲಿ ಬಂದ ನಿಬಂಧನೆ ತೆಗೆಯುವ ಈ ಕಾನೂನು ಪ್ರಕಾರ - ಕಂಪನಿಗಳು ಈವರೆಗೆ 'ಏಕಸ್ವಾಮ್ಯ' ಹೊಂದಿದ್ದು ಮುಕ್ತ ಪೈಪೋಟಿಗೆ ಹೋಗುತ್ತಿರುವುದರಿಂದ 'ಅಪಾಯ' ಎದುರಿಸುತ್ತಿವೆ. ಈ ಅಪಾಯ ಭರಿಸಲು ಮತ್ತು ಈಗಾಗಲೇ ಅವು ವೆಚ್ಚ ಮಾಡಿರುವುದನ್ನು ತುಂಬಿಕೊಡಲು ವಿದ್ಯುತ್ ಬೆಲೆ ಏರಿಕೆ ಮೂಲಕ 28 ಶತಕೋಟಿ ಡಾಲರು ಕಂಪನಿಗಳಿಗೆ ಕೊಡಬೇಕೆಂದು ಕಾನೂನು ಹೇಳಿತು. ಇದಕ್ಕಾಗಿ ನಾಲ್ಕು ವರ್ಷಗಳ ಕಾಲ ಈ ಸ್ತಂಭಿತ ಬೆಲೆ, ರಾಷ್ಟ್ರೀಯ ಸರಾಸರಿ ವಿದ್ಯುತ್ ಬೆಲೆಗಿಂತ ಒಂದೂವರೆ ಪಟ್ಟು ಕಂಪನಿಗಳು 20 ಶತಕೋಟಿ ಡಾಲರು ಪಡೆದವೆ. ಇದಲ್ಲದೆ ಈಗಾಗಲೇ ಲಾಭ ತೆಗೆದಿರುವ ವಿದ್ಯುತ್ ಸ್ಥಾವರಗಳನ್ನು ಅದರ ಒಟ್ಟು ಆಸ್ತಿಯ ಹಲವು ಪಟ್ಟುಗಳ ಬೆಲೆಯಲ್ಲಿ ಮಾರುವ ಮೂಲಕ ಇನ್ನಷ್ಟು ಲಾಭ ಸಂಪಾದಿಸಿದವು. ಈ ರೀತಿ ಪಡೆದ ಹಣವನ್ನು ಇನ್ನೂ ಹೆಚ್ಚು ದರದ ಲಾಭ ಮಾಡುವ ಟೆಲಿಕಮ್ಯುನಿಕೇಷನ್ ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿದವು. ಈ ಕಾನೂನು ಪ್ರಕಾರ ವಿದ್ಯತ್ ಉತ್ಪಾದನಾ ಘಟಕಗಳ ವಿದ್ಯುತ್ತನ್ನು 'ಪವರ್ ಎಕ್ಸ್‌ಚೇಂಜ್' ಎಂಬ ಖಾಸಗಿ ಕಂಪನಿ ಹರಾಜಿನಲ್ಲಿ ಕೊಂಡುಕೊಂಡು ವಿತರಿಸುತ್ತಿತ್ತು. ಈ ಹರಾಜಿನಲ್ಲಿ ಅತ್ಯಂತ ಹೆಚ್ಚು ಬೆಲೆ ಬರುವಂತೆ ಕಂಪನಿಗಳು ವರ್ತಿಸುತ್ತಿದ್ದವು. ವಿದ್ಯುತ್ ಬೇಕಾದ ಪ್ರಮಾಣದಲ್ಲಿ ಉತ್ಪಾದನೆ ಮಾಡದೆ, ಬೆಲೆ ಕೃತಕವಾಗಿ ಹೆಚ್ಚುವಂತೆ ಮಾಡುತ್ತಿದ್ದವು. 'ಮುಕ್ತ ಪೈಪೋಟಿ' ಬದಲು ದೊಡ್ಡ ವಿದ್ಯುತ್ ಕಂಪನಿಗಳು ಸೇರಿ 'ಬೆಲೆ'ಯನ್ನು ಗೋಲ್‌ಮಾಲ್ ಮಾಡಿ ಹೆಚ್ಚಿಸುತ್ತಿದ್ದವು. ಎಲ್ಲಾ ನಿಬಂಧನೆಗಳನ್ನು ತೆಗೆದುಹಾಕಿದ್ದ ರಿಂದ ಮಾತ್ರವೇ ಇದು ಸಾಧ್ಯವಾಯಿತು.

ಹೀಗೆ 'ವಿದ್ಯುತ್ ಹರಾಜಿನಿಂದ' ವಿದ್ಯುತ್ ಪೂರೈಕೆಯ ಗುಣಮಟ್ಟ, ಪ್ರಮಾಣ, ಬೆಲೆ ಎಲ್ಲಾ ಏರುಪೇರಾಗಿ ಈ ಚಳಿಗಾಲದಲ್ಲಿ ಕತ್ತಲು ಆವರಿಸುವಂತಹ ವಾತಾವರಣ ನಿರ್ಮಾಣವಾಯಿತು.

ಇಂತಹ ವಿದ್ಯುತ್ ಸುಧಾರಣೆಗಳು ಬೇಕೆ?

ಹಲವಾರು ಅಮೆರಿಕದ ಬಳಕೆದಾರ ಸಂಘಟನೆಗಳು ವಿದ್ಯುತ್ ಮೇಲಿನ ಎಲ್ಲ ನಿಬಂಧನೆಗಳನ್ನು ತೆಗೆಯುವುದನ್ನು ವಿರೋಧಿಸಿದ್ದವು. 1996 ರ ಕ್ಯಾಲಿಫೋರ್ನಿಯಾದ ಕಾನೂನು ಪಾಸಾದ ನಂತರವೂ ಅದನ್ನು ಕೋರ್ಟಿನಲ್ಲಿ ಪ್ರಶ್ನಿಸಿದ್ದವು. ಈ ಕಾನೂನನ್ನು ರಕ್ಷಿಸಲು ವಿದ್ಯುತ್ ಕಂಪನಿಗಳು 30 ಕೋಟಿ ಡಾಲರು ಖರ್ಚು ಮಾಡಿದವಂತೆ. ಕ್ಯಾಲಿಫೋರ್ನಿಯದಲ್ಲಿ ಈ ವಿದ್ಯುತ್ ಸುಧಾರಣೆಗಳ ಬಿಕ್ಕಟ್ಟು ಇಡೀ ದೇಶದ, ವಿಶ್ವದ ಗಮನ ಸೆಳೆದಿದೆ. ಇಂತಹದೇ ವಿದ್ಯುತ್ ಸುಧಾರಣೆಗಳ ಪಥದಲ್ಲಿ ನಡೆಯಲು 24 ರಾಜ್ಯಗಳಲ್ಲಿ ಹಲವು (ಇಷ್ಟು ತೀವ್ರವಲ್ಲದಿದ್ದರೂ) ಬೆಲೆ ಏರಿಕೆ- ಇದು ಏರುಪೇರಾಗಿ ಕಂಡಿದೆ. ಎಲ್ಲೂ ಇಂತಹ 'ಸುಧಾರಣೆ'ಗಳ ಜಾರಿಯಿಂದ ಬೆಲೆಗಳು ಇಳಿದದ್ದು, ಗುಣಮಟ್ಟ ಏರಿದ್ದು, ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ ಲಭ್ಯವಾದದ್ದು ಕಂಡು ಬಂದಿಲ್ಲ. ಹಲವು ಕಡೆ ಬಡ ಮನೆಗಳಿಗೆ ವಿದ್ಯುತ್ ಪೂರೈಸಲು ಕಂಪನಿಗಳು ನಿರಾಕರಿಸಿವೆಯಂತೆ. ಇದಲ್ಲದೆ ವಿದ್ಯುತ್ ಕಂಪನಿಗಳ ಲಾಭ ಗಗನಕ್ಕೇರಿದೆ. ಅವು ಬೆಲೆಗಳ 'ಗೋಲ್‌ಮಾಲ್', ತಮ್ಮ ಕೆಲವು ವಿದ್ಯುತ್ ಘಟಕಗಳ ಮಾರಾಟ, ಇತರ ಕ್ಷೇತ್ರಗಳಿಗೆ ಬಂಡವಾಳ ಸಾಗಾಣಿಕೆ- ಇವೆಲ್ಲಾ ಅನುಸರಿಸಿ ಲಾಭ ಮಾಡಿವೆ ಅಷ್ಟೆ. ಇದಲ್ಲದೆ ವಿದ್ಯುತ್ ಕಂಪನಿಗಳ ಮಿಲನ ಆರಂಭವಾಗಿದ್ದು, ಈ ಕ್ಷೇತ್ರ ಇನ್ನೂ ಹೆಚ್ಚಿನ 'ಏಕಸ್ವಾಮ್ಯ' ದತ್ತ ಸಾಗಿವೆ. ಈಕ್ಷೇತ್ರದಲ್ಲಿ ಹೆಚ್ಚಿನ ಏಕಸ್ವಾಮ್ಯ ಎಂದರೆ ಇನ್ನಷ್ಟು ಹೆಚ್ಚು ಮಾರುಕಟ್ಟೆ 'ಬಲ' ಮತ್ತು 'ಲಾಭ'.

ಲಾಭಕೋರತನದ ಮೇಲಿನ ನಿಬಂಧನೆಗಳನ್ನು ಕಿತ್ತು ಹಾಕುವ, ಕಾಳಸಂತೆ ಕೋರ ಲಾಭವನ್ನು 'ಖಾಸಗೀಕರಿಸುವ' ಎಲ್ಲಾ ನಷ್ಟವನ್ನು 'ರಾಷ್ಟ್ರೀಕರಿಸುವ' ಇಂತಹ ವಿದ್ಯುತ್ ಸುಧಾರಣೆಗಳು ಬೇಕೆ? ಈಗಾಗಲೇ ಖಾಸಗಿ ವಿದ್ಯುತ್ ಕಂಪನಿಗಳು ಇದ್ದಲ್ಲಿ ನಿಬಂಧನೆಗಳನ್ನು ತೆಗೆಯುವ ಈ ಅವಸ್ಥೆ ಇನ್ನು ನಮ್ಮಲ್ಲಿ ವಿದ್ಯುತ್ ಖಾಸಗೀಕರಣ, ನಿಬಂಧನೆ ತೆಗೆಯುವ ಜತೆಗೆ ಪಡಬೇಕಾದ ಅವಸ್ಥೆ ಏನಾಗಬಹುದು ಎಂದು ಊಹಿಸಬಹುದು.

ಕಾರ್ಮಿಕರ ಉದ್ಯೋಗ-ಆದಾಯದ ಮೇಲೆ ಧಾಳಿ

ವಿಶ್ವದ ದುಡಿಯುವ ಜನರ ಅನುಭವಗಳು

ಜಾಗತೀಕರಣವು ಕಾರ್ಮಿಕ ವರ್ಗದ ಮೇಲೆ ಉಂಟುಮಾಡುತ್ತಿರುವ ಪರಿಣಾಮಗಳ ಬಗ್ಗೆ ವಿಶ್ವದ ವಿವಿಧ ದೇಶಗಳ ದುಡಿಯುವ ವರ್ಗದ ಅನುಭವಗಳನ್ನು ಹಂಚಿಕೊಳ್ಳಲು ಜಪಾನ್‌ನಲ್ಲಿ ಅಂತರ್ರಾಷ್ಟ್ರೀಯ ಕಾರ್ಯಾಗಾರ ನಡೆಯಿತು. ಇದರಲ್ಲಿ ಪ್ರತಿನಿಧಿಯಾಗಿ ಸಿಐಟಿಯು ವಿನ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್‌ರವರು ಭಾಗವಹಿಸಿದ್ದರು. ಅಲ್ಲಿ ಹಂಚಿಕೊಂಡ ಧಾರುಣ ಅನುಭವಗಳು, ಪ್ರತಿರೋಧದ ಮಾರ್ಗಗಳು ಇಲ್ಲಿವೆ.

ಇತರೇ ರಾಷ್ಟ್ರಗಳಿಗೆ ಉತ್ಪಾದನಾ ಘಟಕಗಳನ್ನು ವರ್ಗಾಯಿಸುವ ಕೈಗಾರಿಕಾ ಆಡಳಿತಗಳನ್ನು ಪುನರ್ರಚಿಸುವ ಹೆಸರಿನಲ್ಲಿ ದೊಡ್ಡ ಪ್ರಮಾಣದ ಕಾರ್ಮಿಕರನ್ನು ಬೃಹತ್ ಉದ್ದಿಮೆಗಳು ಅಮಾನತ್ತುಗೊಳಿಸುತ್ತಿವೆ. ಈ ವಿನಾಶಕಾರಿ ಪ್ರಯತ್ನಗಳಿಗೆ ಪೂರಕವಾಗಿ ಕಾರ್ಮಿಕ ಕಾನೂನುಗಳನ್ನು ಪರಾಮರ್ಶಿಸಲಾಗಿದೆ. ನಿರುದ್ಯೋಗದ ಪ್ರಮಾಣ 30 ಲಕ್ಷ ಮುಟ್ಟಿದೆ. ನೈಜ ವೇತನದಲ್ಲಿ ಸವಕಳಿ ಪ್ರಾರಂಭಿಸಿದೆ. ಕೆಲಸದ ಗಂಟೆಗಳು ಹೆಚ್ಚುತ್ತಿವೆ. ಕಟ್ಟಡ ನಿರ್ಮಾಣ ಉದ್ದಿಮೆಗಳಲ್ಲಿ ಇದುವರೆಗೆ ಇದ್ದ ವಾರ್ಷಿಕ 1842 ಗಂಟೆಗಳ ದುಡಿಮೆಯ ಸಮಯವು 2000 ಗಂಟೆಗಳಿಗೆ ಹೆಚ್ಚಿದೆ. ಇದು ಫ್ರಾನ್ಸ್ ಅಥವಾ ಜರ್ಮನಿಗಿಂತ 300 ಗಂಟೆಗಳ ಹೆಚ್ಚು ಸಮಯ ಹೆಚ್ಚಳ. ಕೂಲಿರಹಿತ ಓವರ್ ಟೈಂ ಕೆಲಸವನ್ನು ಪರಿಚಯಿಸಲಾಗಿದೆ. ಕೆಲಸದಿಂದ ತೆಗೆದುಹಾಕುವ ಬೆದರಿಕೆಯೊಡ್ಡಿ ಫುಲ್ ಫಾರ್ಮೋಲಾ ಬೇಸ್ಡ್ ಸಿಸ್ಟಂ (ಕೆಲಸ ಆಧಾರಿತ ವೇತನ ಪದ್ಧತಿ) ಬಲವಂತವಾಗಿ ಜಾರಿಗೊಳಿಸಲಾಗಿದೆ. ಅರೆಕಾಲಿಕ ಉದ್ಯೋಗಗಳು ವ್ಯಾಪಕವಾಗಿ ಹೆಚ್ಚುತ್ತಿವೆ. ವೇತನ ಮಟ್ಟ ಕುಸಿಯುತ್ತಿವೆ. ಕಾರ್ಮಿಕ ಆಡಳಿತದಲ್ಲಿ ಇದ್ದ ಎಲ್ಲಾ ನಿಯಂತ್ರಣಗಳನ್ನು ತೆಗೆದುಹಾಕಲಾಗುತ್ತಿದೆ. ದುಡಿಯುವ ಮಹಿಳೆಯರಿಗಿದ್ದ ರಕ್ಷಣಾತ್ಮಕ ಕಾನೂನುಗಳನ್ನು ಮಾರ್ಪಡಿಸಲಾಗುತ್ತಿದೆ. ಡಿಸ್‌ಪ್ಯಾಚ್ ಲೇಬರ್ ಹೆಸರಿನಲ್ಲಿ ಗುತ್ತಿಗೆ ಕಾರ್ಮಿಕರ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ.

ದುಡಿಯುವ ವರ್ಗದ ವ್ಯಥೆ

ಇದು ಭಾರತದ ಸ್ಥಿತಿಯ ಬಂಡವಾಳಶಾಹಿ ವ್ಯವಸ್ಥೆಯ ಮಾದರಿ ಮೇಳವೆನಿಸಿಕೊಂಡಿರುವ ಜಪಾನಿನ ದುಡಿಯುವ ವರ್ಗದ ವ್ಯಥೆ. ಇದು ಪ್ರಕಟಗೊಂಡಿದ್ದು ಜಪಾನಿನ ಕಾರ್ಮಿಕ ಸಂಘಟನೆ ಜೆನ್‌ರೋಮ್ ಮಂಡಿಸಿದ ಜಪಾನಿನ ಕಾರ್ಮಿಕರ ಸ್ಥಿತಿ ಕುರಿತ ವರದಿ. ಈ ರೀತಿಯ ಇತರೇ ದೇಶಗಳಲ್ಲಿನ ದುಡಿಯುವ ವರ್ಗದ ಬದುಕಿನ ವ್ಯಥೆಯ ಕಥೆ. ಆ ದೇಶದ ಕಾರ್ಮಿಕ ಸಂಘಟನೆಗಳು ಮಂಡಿಸಿದ ವರದಿಯಲ್ಲಿ ವ್ಯಕ್ತಗೊಂಡವು. ಈ ಕಾರ್ಯಾಗಾರವು 2000 ಅಕ್ಟೋಬರ್ 30 ರಿಂದ ನವೆಂಬರ್ 1 ರವರೆಗೆ ನಡೆಯಿತು. ಈ ಕಾರ್ಯಾಗಾರದಲ್ಲಿ 21 ಮಹಿಳೆಯರನ್ನೊಳಗೊಂಡ 156 ಜಪಾನಿ ಪ್ರತಿನಿಧಿಗಳು, ಜೆನರೋರೆನ್ ಕಾರ್ಮಿಕ ಸಂಘಟನೆಗೆ ನೊಂದಣಿಗೊಂಡ 16 ಕಾರ್ಮಿಕ ಸಂಘಟನೆಗಳನ್ನು ಪ್ರತಿನಿಧಿಸಿ ಭಾಗವಹಿಸಿದ್ದವು. ಭಾರತದ ಸಿಐಟಿಯು ಸಂಘಟನೆಯನ್ನು ಒಳಗೊಂಡಂತೆ 6 ವಿದೇಶಿ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದವು. ಇಂಡೋನೇಷಿಯಾ, ಪ್ರಾಸ್ಪರಿಟ್ ಟ್ರೇಡ್ ಯೂನಿಯನ್, ಕೊರಿಯಾದ ಫೆಡರೇಶನ್ ಆಫ್ ಕೊರಿಯನ್ ಟ್ರೇಡ್ ಯೂನಿಯನ್ಸ್ (ಕಾಂಗ್ ಹೂಂಗ್ ಜಾಂಗ್) ಅಮೇರಿಕಾದ ಯುನೈಟೆಡ್ ಎಲೆಕ್ಟ್ರಿಕಲ್, ರೇಡಿಯೋ ಅಂಡ್ ಮಿಷನ್ ವರ್ಕರ್ಸ್ ಆಫ್ ಅಮೇರಿಕಾ ಸಂಘಟನೆ ಹಾಗೂ ಆಸ್ಟ್ರೇಲಿಯಾದ ಕಂಸ್ಟ್ರಕ್ಷನ್ ಫಾಸ್ಟರಿ ಮೀನಿಂಗ್ ಎನರ್ಜಿ ಯೂನಿಯನ್ (DFMEU) ಭಾಗವಹಿಸಿದ್ದವು.

ಅರ್ಥಪೂರ್ಣ ಕಾರ್ಯಾಗಾರ

ಫ್ರಾನ್ಸಿನ ಕಾರ್ಮಿಕ ಸಂಘಟನೆಯ ಪ್ರತಿನಿಧಿ ತಂಡವೊಂದು ಭಾಗವಹಿಸಬೇಕಿತ್ತು. ಭಾಗವಹಿಸಲು ಆಗದಿದ್ದ ಕಾರಣ ಅವರ ಪರಿಸ್ಥಿತಿ ಕುರಿತ ವರದಿಯೊಂದನ್ನು ಕಳಿಸಿದ್ದರು. ಜಪಾನಿ ಕಾರ್ಮಿಕ ಚಳುವಳಿಯ ಕ್ರಾಂತಿಕಾರಿ ಹಾಗೂ ಪ್ರಭಾವಿ ವಲಯವಾದ ಜೆನ್‌ರೋರೆನ್ ಈ ಕಾರ್ಯಾಗಾರವನ್ನು ಸಂಘಟಿಸಿ ಪ್ರಯೋಜಿಸಿತ್ತು. ಭಾಗವಹಿಸುವ ಸಂಘಟನೆಗಳನ್ನು ಪ್ರತಿನಿಧಿಗಳನ್ನು ಕಾರ್ಯಾಗಾರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಉದ್ದೇಶದೊಂದಿಗೆ ಸಂಘಟಕರು ಕಾರ್ಯಾಗಾರದ ಪೂರ್ವಭಾವಿಯಾಗಿ ಬಹಳಷ್ಟು ಸಮಯಾವಕಾಶದೊಂದಿಗೆ ಕರಡು ಆಶಯ ವರದಿಯನ್ನು ಎಲ್ಲಾ ಭಾಗವಹಿಸುವವರಿಗೆ ಕಳಿಸಿತ್ತು. ಬಹಳಷ್ಟು ಪೂರ್ವಭಾವಿಯಾಗಿ ಭಾಗವಹಿಸುವ ಸಂಘಟನೆಗಳ ಲಿಖಿತ ವರದಿಗಳನ್ನು ಸಹ ಪಡೆದುಕೊಂಡಿತ್ತು. ಪ್ರತಿಯೊಬ್ಬ ಪ್ರತಿನಿಧಿಗಳೂ 3 ಸುತ್ತಿನಲ್ಲಿ ಕಾರ್ಯಾಗಾರದ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು. ಮೊದಲಿಗೆ ವರದಿ ಮಂಡಿಸಲು ಅವಕಾಶ ಕಲ್ಪಿಸಲಾಗಿತ್ತು. ನಂತರ ಪ್ರತಿನಿಧಿಗಳು ಕೇಳುವ ಲಿಖಿತ ಪ್ರಶ್ನೆಗಳಿಗೆ ಉತ್ತರಿಸುವ ಅವಕಾಶ, 3ನೇ ಸುತ್ತಿನಲ್ಲಿ ಅಂತಿಮವಾಗಿ ಕೈಗೊಳ್ಳಬೇಕಾದ ನಿರ್ಣಯಗಳ ಕುರಿತು ಚರ್ಚೆಯಲ್ಲಿ ಭಾಗವಹಿಸುವ ಅವಕಾಶ ಈ ರೀತಿ ಪ್ರತಿಯೊಬ್ಬರೂ ಅತ್ಯಂತ ಪ್ರಜಾಸತ್ತಾತ್ಮಕವಾಗಿ ಈ ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

ಕೈಗಾರಿಕಾ ಪುನರ್‌ಸಂಘಟನೆ ಅಪಾಯಗಳು

ಕಾರ್ಯಾಗಾರದಲ್ಲಿ ಜೆನ್ ರೋರೆನ್ ಮಂಡಿಸಿದ ಕರಡು ಆಶಯ ವರದಿಯಲ್ಲಿ ಪ್ರಸ್ತುತ ವಾಸ್ತವಿಕ ಪರಿಸ್ಥಿತಿಯಲ್ಲಿ ಜಾಗತಿಕವಾಗಿ ಬೃಹತ್ ಬಂಡವಾಳಶಾಹಿಗಳ ನೇತೃತ್ವದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳು ಒಂದರ ನಂತರ ಒಂದರಂತೆ ಮಾಡಿಕೊಳ್ಳುತ್ತಿರುವ ಒಪ್ಪಂದದ ಪರಿಣಾಮವಾಗಿ ಆಗುತ್ತಿರುವ ಕೈಗಾರಿಕಾ ಪುನರ್ ಸಂಘಟನೆ ಹಾಗೂ ಅದರಿಂದುಂಟಾಗುತ್ತಿರುವ ಜಾಗತಿಕ ಪ್ರೇರಣೆ ಮತ್ತು ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳ ಹಕ್ಕುಗಳ ಹರಣವನ್ನು ವಿವರಿಸಲಾಗಿತ್ತು. ಉದ್ಯೋಗ ಹಾಗೂ ನಿರುದ್ಯೋಗ ಕುರಿತ ಪರಿಸ್ಥಿತಿಯನ್ನು ವಿವರಿಸುವ ವಿಶೇಷ ಅಂಶಗಳು, ಐಎಂಎಫ್, ಡಬ್ಲ್ಯೂಟಿಓ ದ ಪ್ರಸ್ತಾವಗಳು, ಜಾಗತಿಕವಾಗಿ ಬಲಗೊಳ್ಳುತ್ತಿರುವ ಕಾರ್ಮಿಕರ ಪ್ರತಿರೋಧಗಳು, ಜಾರಿಗೆ ಬರುತ್ತಿರುವ ಅಮೇರಿಕಾದ ಆರ್ಥಿಕ ಮತ್ತು ಸೈನ್ಯದ ಹಿಡಿತ ಹಾಗೂ ಜಾಗತಿಕವಾಗಿ ಮೂಡಿಬರುತ್ತಿರುವ ಪ್ರತಿರೋಧದ ಸಮಾನಾಂಶಗಳು, ಬಹುರಾಷ್ಟ್ರೀಯ ಕಂಪನಿಗಳನ್ನು ಪ್ರಜಾಸತ್ತಾತ್ಮಕ ಹಿಡಿತಕ್ಕೊಳಪಡಿಸುವ ಮಾರ್ಗಗಳನ್ನು ವರದಿಯಲ್ಲಿ ಸೂಚಿಸಲಾಗಿತ್ತು.

ದಾಳಿಗೆ ಸಿಲುಕುತ್ತಿರುವ ಜಪಾನ್ ದುಡಿಯುವ ಜನ

ಜೀವಮಾನವಿಡೀ ಉದ್ಯೋಗ ಎಂಬ ಸಾಂಪ್ರದಾಯಿಕ ವ್ಯವಸ್ಥೆಯನ್ನು ಹೊಂದಿದ್ದ ಜಪಾನಿನ ಕಾರ್ಮಿಕ ವರ್ಗದ ಪರಿಸ್ಥಿತಿ ಒಂದಾದರೆ ಇತರೆ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳಾದ ಆಸ್ಟ್ರೇಲಿಯಾ, ಫ್ರಾನ್ಸ್, ಹಾಗೂ ಅಮೇರಿಕಾದ ಪರಿಸ್ಥಿತಿ ಇದಕ್ಕಿಂತೇನೂ ವಿಭಿನ್ನವಾಗಿಲ್ಲ. ಆ ದೇಶಗಳ ಸಾಮಾನ್ಯ ಪರಿಸ್ಥಿತಿ ಏನೆಂದರೆ ಅರಕ್ಷಿತ ಕಾರ್ಮಿಕರ ಸಂಖ್ಯೆ ಹೆಚ್ಚಳವಾಗುತ್ತಿದೆ. ಕೂಲಿಯಲ್ಲಿ ಕಡಿತ, ದುಡಿಯುವ ದುಡಿಮೆಯ ಕಾಲಾವಧಿಯ ಹೆಚ್ಚಳ, ಗ್ರಾಮೀಣ ಹಾಗೂ ಅರಕ್ಷಿತ ಕಾರ್ಮಿಕರ ರಕ್ಷಣೆಗೆಂದಿದ್ದ ರಿಯಾಯಿತಿಗಳ ಹಾಗೂ ಸಾಮಾಜಿಕ ಭದ್ರತೆಯಲ್ಲಿನ ಕಡಿತ ಸಾಮಾನ್ಯ ವಿಷಯವಾಗಿದೆ. ಈ ದೇಶಗಳ ಕಾರ್ಮಿಕ ಸಂಘಟನೆಗಳು ಬಹುರಾಷ್ಟ್ರೀಯ ಕಂಪನಿಗಳ ಪ್ರತ್ಯೇಕ ಕಾರ್ಮಿಕ ಸಂಘಟನೆಗಳನ್ನು ಅಂತರರಾಷ್ಟ್ರೀಯವಾಗಿ ಒಂದುಗೂಡಿಸಲು ತಯಾರಿರುವುದಾಗಿ ಸೂಚಿಸಿದವು.

ಹೋರಾಟಗಳಿಂದ ಜೀವನದತ್ತ ಕಾನೂನುಗಳು.

ಕೋರಿಯಾದ ಕಾರ್ಮಿಕರು ಸಂಘಟಿತರಾಗುವ ಪ್ರಮಾಣವು 1989ರಲ್ಲಿ ಶೇ. 19.6ರಷ್ಟಿದ್ದದ್ದು ಕಳೆದ ವರ್ಷದ ಕೊನೆಯಭಾಗದಲ್ಲಿ ಶೇ. 11ಕ್ಕೆ ಇಳಿದಿದೆ. ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಕಾರ್ಮಿಕರ ಕಾನೂನುಗಳು ಪರಿಷ್ಕರಣೆಗೆ ಒಳಪಡುತ್ತಿವೆ. ವೇತನ ಗುತ್ತಿಗೆ ಆಧಾರಿತ ನೌಕರಿ ಹಾಗೂ ಅರೆಕಾರ್ಮಿಕ ನೌಕರರು ಹೆಚ್ಚುತ್ತಿದ್ದಾರೆ. ಪೂರ್ಣ ಪ್ರಮಾಣದ ಉದ್ಯೋಗ ಹಾಗೂ ನೌಕರಿ ಕಡಿತಗೊಳ್ಳುತ್ತಿದೆ. ನೈಜ ವೇತನವೂ ಸವಕಳಿಗೊಳ್ಳುತ್ತಿದೆ. ದುಡಿಮೆಯ ಕಾಲ ಹೆಚ್ಚುತ್ತಿದೆ. ಶೇ. 20 ರಷ್ಟು ಯುವಕರು ನಿರುದ್ಯೋಗಿಗಳಾಗಿದ್ದಾರೆ. ನೌಕರಿಕೇಳುತ್ತಿರುವವರ ಸಂಖ್ಯೆ ಹೆಚ್ಚುತ್ತಿದ್ದರೆ, ನೌಕರಿ ಸಿಗುವ ಅವಕಾಶಗಳು ಕಡಿಮೆಯಾಗುತ್ತಿವೆ. ಎಂಬ ಕೋರಿಯಾ ದೇಶದ ದುಡಿವ ವರ್ಗದ ಪರಿಸ್ಥಿತಿಯನ್ನು ಅಲ್ಲಿನ ಕಾರ್ಮಿಕ ಸಂಘಟನೆಯಾದ ಕಾಂಗ್ ಹೂಂಗ್ ಜಾಂಗ್ ತನ್ನ ವರದಿಯಲ್ಲಿ ಮಂಡಿಸಿತು.

ಕೈಗಾರಿಕಾ ಅಪಘಾತದಲ್ಲಿ ಸಾವನ್ನಪ್ಪಿದ ಗಾಯಗೊಂಡ ಕಾರ್ಮಿಕರ ಸಂಖ್ಯೆ ಕೋರಿಯಾದಲ್ಲಿ ಹೆಚ್ಚುತ್ತಿದೆ. ಪ್ರತಿ 10 ಸಾವಿರ ಕಾರ್ಮಿಕರಲ್ಲಿ 4 ಜನ ಅಪಘಾತಕ್ಕೊಳಗಾಗುತ್ತಿದ್ದಾರೆ ಈ ಪ್ರಮಾಣ ಅಮೇರಿಕಾದಲ್ಲಿ 0.05ಕ್ಕಿಂತ ಕಡಿಮೆ ಇದ್ದರೆ ಜಪಾನಿನಲ್ಲಿ 0.1ರಷ್ಟು ಥೈವಾನ್‌ನಲ್ಲಿ 1.7 ರಷ್ಟಿದೆ.

1998ರ ಆರ್ಥಿಕ ಬಿಕ್ಕಟ್ಟಿನ ನಂತರ 1999ರ ಅಕ್ಟೋಬರ್‌ನಲ್ಲಿ ಜೀವನ ಸಂರಕ್ಷಣಾ ಕಾನೂನನ್ನು ರೂಪಿಸಿದೆ. ಕಾರ್ಮಿಕರು ಅದರ ಪ್ರಯೋಜನ ಪಡೆಯುತ್ತಿದ್ದಾರೆ. ಉದ್ಯೋಗ ವಿಮಾ ವ್ಯವಸ್ಥೆ ಜಾರಿಗೆ ತರಲಾಗಿದೆ. ಕಂಪನಿ ಆಧಾರಿತ ಕಾರ್ಮಿಕ ಸಂಘಟನೆಗಳ ರಾಷ್ಟ್ರದ ಕಾರ್ಮಿಕ ಸಂಘಟನೆಗಳಡಿಯಲ್ಲಿ ಬರಲು ಪ್ರಾರಂಭಿಸಿವೆ. ಕಾರ್ಮಿಕ ವರ್ಗದ ಹೋರಾಟ ಜನತೆಯ ಜೀವನಾವಶ್ಯಕ ಕಾನೂನುಗಳನ್ನು ರೂಪಿಸಿದೆ. ಎಂಬ ವಾಸ್ತವಾಂಶ ವರದಿಯನ್ನು ಕೋರಿಯಾದ ಕಾರ್ಮಿಕರ ಸಂಘಟನೆ ಮಂಡಿಸಿತು.

ವಿದೇಶಿ ನೆರವಿನ ಮೇಲೆ ಅವಲಂಬಿತ ವ್ಯವಸ್ಥೆ.

ಏಷ್ಯಾದ ಹುಲಿ ಎಂದು ಪ್ರಖ್ಯಾತಿಗೊಳಪಟ್ಟಿದ ಇಂಡೋನೇಶ್ಯದ ಆರ್ಥಿಕತೆ ಮೇಲಿನವುಕ್ಕಿಂತಲೂ ವಿಭಿನ್ನವಾಗಿಲ್ಲ. ಆರ್ಥಿಕವಾಗಿ ಕ್ರಿಯಾಶೀಲವಾಗಿರುವ 120 ದಶಲಕ್ಷ ಜನಸಂಖ್ಯೆಯಲ್ಲಿ 36 ದಶಲಕ್ಷ ನಿರುದ್ಯೋಗಿಗಳಿದ್ದಾರೆ. 80 ದಶಲಕ್ಷಜನ ಅನೇಕ ಅಸಾಂಪ್ರದಾಯಿಕ ಆರ್ಥಿಕ ವಲಯಗಳ ಮೇಲೆ ಅವಲಂಬಿತರಾಗಿದ್ದಾರೆ. ಹಿಂದಿನ ಕಾಲದಲ್ಲಿ ಶಿಕ್ಷಣವನ್ನು ಅಲಕ್ಷಿಸಲಾಗಿತ್ತು. ಕೃಷಿಯಿಂದ ಕೈಗಾರಿಕೆಗಳಲ್ಲಿನ ಕಳಪೆದರ್ಜೆಯ ನೌಕರಿಗಳಿಗೆ ಜನತೆಯನ್ನು ವರ್ಗಾಯಿಸಲಾಗುತ್ತಿದೆ. ಇಂಡೋನೇಷ್ಯಾದ ಕಾರ್ಮಿಕರು ಅಂತರ ರಾಷ್ಟ್ರೀಯ ಪೈಪೋಟಿ ನೀಡುವಂಥದ್ದಲ್ಲ ಎಂಬ ಅಂಶಗಳನ್ನು ಇಂಡೋನೇಷ್ಯಾದ ಕಾರ್ಮಿಕ ಸಂಘಟನೆಯಾದ ರೆಕ್ಷನ್ ಸಿಲಾಬ್ಸ್ (ಎಸ್.ಬಿ.ಎಸ್.ಐ) ಸಂಘಟನೆಯು ತನ್ನ ವರದಿಯಲ್ಲಿ ಮಂಡಿಸಿದೆ.

146 ಬಿಲಿಯನ್ ಡಾಲರ್‌ಗಳ ಸಾಲದ ಹೊರೆಯಲ್ಲಿ ಸಿಕ್ಕಿಕೊಂಡಿರುವ ಇಂಡೋನೇಷ್ಯಾದ ಆರ್ಥಿಕತೆಯು ಸ್ವಾವಲಂಬನೆಯಿಲ್ಲದ, ಭ್ರಷ್ಟಾಚಾರದಿಂದ ತುಂಬಿತುಳುಕುತ್ತಿರುವ ವಿದೇಶಿ ನೆರವಿನ ಮೇಲೆಯೇ ಅವಲಂಬಿತವಾಗಿರುವ ಆರ್ಥಿಕತೆಯಾಗಿದೆ. ಎಂಬ ಅಂಶವನ್ನು ವರದಿಯು ಉಲ್ಲೇಖಿಸಿದೆ. ಉದ್ಯೋಗ ಸೃಷ್ಟಿ ಹಾಗೂ ಉದ್ಯೋಗ ಒದಗಿಸಲು ಅಗತ್ಯವಿರುವ ನೇರ ಮಧ್ಯ ಪ್ರವೇಶ ಮಾಡಲೂ ಸಹ ಅಲ್ಲಿನ ಕಾರ್ಮಿಕ ಸಂಘಟನೆ ನಿರ್ಧರಿಸಿದೆ. ಕಾರ್ಮಿಕ ಕಾನೂನುಗಳಿಗಾಗಿ ಹಾಗೂ ಕಾರ್ಮಿಕ ಕಲ್ಯಾಣ ಶಾಸನಗಳಿಗಾಗಿ ಚಳುವಳಿ ಮುಂದುವರಿಸಲು ನಿರ್ಧರಿಸಿದೆ.

> **ಕಾರ್ಖಾನೆ ಮಾಲಕ**
>
> ದಿನವಿಡೀ ಕೂಲಿಗಳು ಸುರಿಸುತಿಹ ರಕ್ತ
> ನೆಕ್ಕುತ್ತ ಮಾಲಕನು ಆಗುವನು ಶಕ್ತ
> ಕಾರಣವು ಇವನು ಸರಕಾರಿ ಭಕ್ತ
> ಹೀಗಾಗಿ ಕ್ರೌರ್ಯಕ್ಕೆ ದ್ವಾರವೈ ಮುಕ್ತ
>
> **- ವಿಡಂಬಾರಿ**

ಖಾಸಗಿ ವಲಯದಲ್ಲಿ ಲಾಭ ಹೆಚ್ಚಳ ನಿರುದ್ಯೋಗದ ಉಲ್ಬಣ

ಈ ಮೇಲಿನಂತೆ ವಿವಿಧ ದೇಶಗಳ ಕಾರ್ಮಿಕರ ಪರಿಸ್ಥಿತಿ ಇದ್ದರೆ ಕಾರ್ಯಾಗಾರದಲ್ಲಿ ಭಾಗವಹಿಸಿದ ಸಿಐಟಿಯು ಸಂಘಟನೆಯು ತನ್ನ ವರದಿಯಲ್ಲಿ ಜಾಗತೀಕರಣದ ಭಾಗವಾಗಿ ಬರುತ್ತಿರುವ ಉದಾರೀಕರಣ ನೀತಿಯಿಂದ ಭಾರತದಲ್ಲಿ ನಿರುದ್ಯೋಗ ಹೆಚ್ಚುತ್ತಿದೆ. ಕಾರ್ಮಿಕರ ಪಾತ್ರವನ್ನು ಕಡಿತಗೊಳಿಸಲಾಗುತ್ತಿದೆ. ಸ್ವಯಂ ನಿವೃತ್ತಿಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ ಪ್ರಮುಖವಾಗಿ ಸಾರ್ವಜನಿಕ ಉದ್ದಿಮೆಗಳನ್ನು ಈ ನೀತಿಗಳಿಗೆ ಗುರಿಪಡಿಸಲಾಗುತ್ತಿದೆ ಎಂಬ ವಾಸ್ತವತೆಯನ್ನು ಮಂಡಿಸಿತು. ಉದಾರೀಕರಣ ನೀತಿಯು ಖಾಸಗಿ ವಲಯದಲ್ಲಿ ವಾರ್ಷಿಕ 700 ರಿಂದ 800 ಕೋಟಿ ಲಾಭ ಒದಗಿಸುತ್ತಿದೆ. ಆದರೆ ಖಾಸಗಿ ವಲಯದಲ್ಲಿ ಯಾವುದೇ ಉದ್ಯೋಗ ಸೃಷ್ಟಿ ಅಥವಾ ಉದ್ಯೋಗ ಪ್ರಮಾಣದ ಹೆಚ್ಚಳವಾಗದಿರುವುದನ್ನು ಪ್ರಸ್ತಾಪಿಸಿತು.

ಈ ಎಲ್ಲ ವರದಿಗಳ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ವಿಮರ್ಶಿಸಿದ ಕಾರ್ಯಾಗಾರವು ಪ್ರಸ್ತುತ ಜಾಗತೀಕರಣವು ಕಾರ್ಮಿಕರ ಉದ್ಯೋಗ ಆದಾಯ ಎರಡನ್ನು ಪ್ರಪಂಚದಾದ್ಯಂತ ತೀವ್ರ ದಾಳಿಗೆ ಒಳಪಡಿಸುತ್ತಿವೆ. ದೇಶದ ಒಳಗೆ ಹಾಗೂ ಹೊರಗೆ ಒಬ್ಬರ ಮೇಲೊಬ್ಬರು, ಪೈಪೋಟಿ ನಡೆಸುವಂತಾಗಿದೆ. ದುಡಿಯುವ ಮಹಿಳೆಯರ ಅರೆಕಾಲಿಕ ಹಾಗೂ ಗುತ್ತಿಗೆ ಕಾರ್ಮಿಕರ ಪರಿಸ್ಥಿತಿ ಶೋಚನೀಯವಾಗುತ್ತಿದೆ. ಎಂಬ ಅಶಗಳನ್ನು ಗುರುತಿಸಿತು. ಬಹುರಾಷ್ಟ್ರೀಯ ಕಂಪನಿಗಳ ಪ್ರಜಾಪ್ರಭುತ್ವೀಕರಣಕ್ಕೆ ಒತ್ತಾಯಿಸುತ್ತಾ ಕ್ರಾಂತಿಕಾರಿ ಸಮರಶೀಲ ಕಾರ್ಮಿಕ ಸಂಘಟನೆಗಳ ನಡುವಿನ ಅಂತರರಾಷ್ಟ್ರೀಯ ಸಹಕಾರವನ್ನು ಹೆಚ್ಚಿಸಿ ಪ್ರಬಲಗೊಳಿಸಬೇಕು ಎಂದು ನಿರ್ಣಯಿಸಿತು.

ವಿಶ್ವದಾದ್ಯಂತ ಜಾಗತೀಕರಣದ ಪರಿಣಾಮವಾಗಿ ಪುನರ್ ಸಂಘಟನೆಗೊಳಪಡುತ್ತಿರುವ ಉದ್ದಿಮೆಯನ್ನು ರಕ್ಷಿಸಲು ದುಡಿಯುವ ವರ್ಗದ ಹಿತಾಸಕ್ತಿಯನ್ನು ಬಲಪಡಿಸಲು ಕಾಲ ಪಕ್ವವಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ದೇಶಗಳ ಕಾರ್ಮಿಕ ಸಂಘಟನೆಗಳು ಮುಂದಾಗಬೇಕೆಂದು ಸಮಾವೇಶವು ನಿರ್ಣಯಿಸಿತು.

○

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಉದ್ಯಮಗಳನ್ನು ಸ್ಥಾಪಿಸಲೋ, ವ್ಯಾಪಾರ ವ್ಯವಹಾರಗಳನ್ನು ನಡೆಸಲೋ ಅಥವಾ ವಾಹನಗಳನ್ನು ಖರೀದಿಸಲೋ ಹಣಕಾಸಿನ ನೆರವು ನೀಡಿ ಕನಸು ಕಾಣುವ ನಿರುದ್ಯೋಗಿಗಳ ಕತ್ತಲ ಬದುಕಿಗೆ ದಾರಿತೋರುವ ದೀಪ ಎಂದು ಜಂಬ ಕೊಚ್ಚಿಕೊಳ್ಳುವುದನ್ನು ಓದಿದ್ದೇವೆ, ನೋಡಿದ್ದೇವೆ. ಆದರೆ ಇದು ಬಾಳನ್ನು ಬೆಳಗುವ ನಂದಾದೀಪವಲ್ಲ, ಮೈ ಮನವನ್ನೇ ಸುಡುವ ರಣಗಿಚ್ಚು..... ಓದಿ! ಅಂಥಹ ಒಂದು ಬ್ಯಾಂಕಿನ ಕಥೆ ಇಲ್ಲಿದೆ, ವಿಜಾಪುರದಲ್ಲಿ.

ಕೆ.ಎಸ್.ಎಫ್.ಸಿ. : ಬಿಜಾಪೂರದ ಬಕಾಸುರರು

ಅಣ್ಣಾರಾಯ ಈಳಿಗೇರಾ - ಈರಣ್ಣ ಹಳ್ಳಿ

'ಗಿಸಾಡೆರು' ಎನ್ನುವುದು ಒಂದು ಪರಿಶಿಷ್ಟ ಜನಾಂಗ. ನಗರದ ಇಂಡಿ ರೋಡಿನಲ್ಲಿ ಇರುವ ಮದ್ದಿನ ಕಣಿ ಎಂಬ ಕೊಳಚಿ ಪ್ರದೇಶದಲ್ಲಿ ಇವರ ವಾಸಸ್ಥಾನ.

ಕುರೂಪಿ, ಕುಡುಗೋಲು, ಪಿಕಾಶಿ, ಕಬ್ಬಿಣದ ಬಾಗಿಲು, ಕಿಟಕಿ ಮುಂತಾದ ವಸ್ತುಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ತಯಾರಿಸಿ ಮಾರಾಟ ಮಾಡಿ ತಮ್ಮ ಬದುಕಿನ ಬಂಡಿ ಸಾಗಿಸುವವರು. ಬಂದ ಆದಾಯದಲ್ಲಿಯೇ ಅಲ್ಪಸ್ವಲ್ಪ ಉಳಿತಾಯ ಮಾಡಿ ವೆಲ್ಡಿಂಗ್, ಗ್ರೈಂಡಿಂಗ್, ಡ್ರಿಲ್ಲಿಂಗ್ ಮುಂತಾದ ಮೆಶಿನ್ನುಗಳನ್ನು ಖರೀದಿಸಿ ತಮ್ಮ ಆದಾಯವನ್ನು ಸ್ವಲ್ಪ ಹೆಚ್ಚಿಸಿಕೊಂಡಿದ್ದು ಉಂಟು. ಅಗ್ಗದಲ್ಲಿ ಸಿಗುವ ಕೃಷಿ ಉಪಕರಣಗಳನ್ನು ಖರೀದಿಗೋ ಅಥವಾ ಟ್ರಾಕ್ಟರ್, ಟ್ರೈಲರ್‌ಗಳ ರಿಪೇರಿಗಾಗಿಯೋ ದೂರದೂರದ ರೈತರು ಇವರಲ್ಲಿ ಮುಗಿಬೀಳುತ್ತಿದ್ದರು. ಅತಿ ಲಾಭದ ಆಸೆ ಇಲ್ಲದೆ ಶ್ರಮದ ಬೆಲೆಯಷ್ಟೇ ಸಿಕ್ಕರೂ ಸಾಕು ಜನರ ಪ್ರೀತಿ ವಿಶ್ವಾಸ ಗಳಿಸಿಕೊಂಡು ನೆಮ್ಮದಿಯ ಜೀವನ ಸಾಗಿಸುತ್ತಿದ್ದರು. ಇದೇ ಅವರಿಗೆ ಮುಳುವಾಯಿತೇನೋ. ಅತಿ ಲಾಭದ ಆಸೆ ಹೊಂದಿರುವ ಕೈಗಾರಿಕಾ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳನ್ನು ತೆಗೆದು ಕೆಲಸವಿಲ್ಲದೆ ಕುಳಿತಿದ್ದ ದುರಾಸೆ ಇರುವ ಜನಗಳು ಹೆಣೆದ ಬಲೆಯೋ ತಿಳಿಯದು. ಅಂತು ಕೆ.ಎಸ್.ಎಫ್.ಸಿ. ಬ್ಯಾಂಕಿನ ಸಾಲಕ್ಕೆ ಬಲಿಪಶು ಆದದ್ದಂತು ನಿಜ.

ವಂಚನೆ ಜಾಲ

1. ಜಯಸಿಂಗ ಮಾನಾಜಿ ಸಾಳುಂಕೆ (ಶಂಕರ್ ಪಲ್ವುಕೇಶನ್ ವರ್ಕ್ಸ್ ಇಂಡಿ ರೋಡ, ಬಿಜಾಪುರ
2. ಮನೋಹರ ಭೀಮಜ ಪವಾರ ಡಿಲಕ್ಸ್ ಮೆಟೀರಿಯಲ್ಸ್ ಕೈಗಾರಿಕಾ ಪ್ರದೇಶ, ವಿಜಾಪೂರ
3. ವಿಷ್ಣು ಬಾಳಕೃಷ್ಣ ಸಾಳುಂಕೆ ಸಚಿನ್ ವರ್ಕ್ಸ್ ಇಂಡಿ ರೋಡ್, ಗಣಪತಿ ಚೌಕ, ವಿಜಾಪೂರ
4. ದೀಪಕ ಲಕ್ಷ್ಮಣ ಸಾಳುಂಕೆ ಭವಾನಿ ವರ್ಕ್ಸ್, ಬಂಬಾಳ ಅಗಸಿ ರೋಡ, ವಿಜಾಪೂರ
5. ನೇತಾಜ ಭೈರು ಸೂರ್ಯವಂಶಿ ಸಾಯಿ ಟ್ರೈಲರ್ಸ್ ಇಂಜನಿಯರಿಂಗ್ ವರ್ಕ್ಸ್, ಇಂಡಿ ರೋಡ ವಿಜಾಪೂರ
6. ಚಂದ್ರಕಾಂತ ಶಿವಾಜಿ ಪವಾರ, ಇಂಡಿರೋಡ ವಿಜಾಪುರ
7. ಶ್ರೀಮತಿ ಸಾವಿತ್ರಿ ಅಶೋಕ ಸಾಳುಂಕೆ, ಗಣಪತಿ ಚೌಕ, ಇಂಡಿರೋಡ, ವಿಜಾಪುರ

ಇವರೆ ಬಲಿಪಶುವಾದ 'ದುರ್ದೈವಿಗಳು. ಬೇಡವೆಂದರೂ ಇವರಿಗೆ ಸಾಲ ತೆಗೆದುಕೊಳ್ಳುವಂತೆ ಒತ್ತಾಯ ಹೇರಿದ್ದಾರೆ.

ಈ ಹಿಂದೆ ಮ್ಯಾನೇಜರ ಆಗಿದ್ದ ಕೆ.ಎಸ್.ಎಫ್.ಸಿ. ಬ್ಯಾಂಕಿನ ವಿಶ್ವನಾಥ ಪಾಟೀಲ ಹಾಗೂ ಅವರ ಸಿಬ್ಬಂದಿಗಳಾದ ಡೆಪ್ಯೂಟಿ ಮ್ಯಾನೇಜರ್ ಅನಂತಕುಮಾರ, ಫೀಲ್ಡ್ ಆಫೀಸರ್ ಅಡಿವೆಪ್ಪ, ಬ್ಯಾಂಕಿನ ಕಾನೂನು ಸಲಹೆಗಾರ ಶಂಕರಾನಂದ ಪಾಟೀಲ(ವಕೀಲರು) ಹಾಗೂ ಸಾಲ ಕೊಡಿಸುತ್ತೇನೆ ಎಂದು ಹೇಳುವ ದಲ್ಲಾಳಿಗಾರ ಹಾಗೂ ವಂಚಕ ಮನೋಹರ ಶಿವಾಜಿ ಪವಾರ ಇವರೆಲ್ಲರೂ ಸೇರಿ ಸಾಲದ ಜಾಲ ಹೆಣೆದಿದ್ದಾರೆ.

ಕೊನೆ ಯತ್ನ

ಗಣಪತಿ ಚೌಕದಲ್ಲಿ ಇರುವ ಅಶೋಕ ಅರ್ಜುನ ಸಾಳುಂಕೆ ಇವರ ಅಂಗಡಿಯನ್ನು ಬ್ಯಾಂಕಿನ ದಲ್ಲಾಳಿಗಾರ ಮನೋಹರ ಪವಾರ ಇವರು ತಮ್ಮ ಹೆಸರಿನಿಂದ ಖೊಟ್ಟಿ(ಸುಳ್ಳು) ರಿಜಿಸ್ಟರ್ ಮಾಡಿಕೊಂಡು ಅದರ ಮೇಲೆ ಎಂಟು ಲಕ್ಷ ರೂಪಾಯಿಯ ಸಾಲ ಮಂಜೂರಿ ಮಾಡಿಸಿಕೊಂಡು ಹಣ ಎತ್ತಿ ಹಾಕಿದ್ದಾನೆ. ತನ್ನ ಸಾಲದ ಅರ್ಜಿಗೆ ಚಂದ್ರಕಾಂತ ಪವಾರ ಎಂಬ ಇನ್ನೊಬ್ಬ ವ್ಯಕ್ತಿಯ ಫೋಟೋ ಲಗತ್ತಿಸಿದ್ದಾನೆ. ಈ ಬಗ್ಗೆ ವಿಚಾರಿಸಲು ಹೋದರೆ ಈ ಬ್ಯಾಂಕಿನ ದಲ್ಲಾಳಿಯು ಫೋಟೋದಲ್ಲಿ ಇದ್ದ ವ್ಯಕ್ತಿ(ಚಂದ್ರಕಾಂತ ಪವಾರ)ಯನ್ನೇ ಕೊಲೆ ಮಾಡಲು ಪ್ರಯತ್ನಿಸಿದ್ದಾನೆ. ಹರಿತ ಚಾಕುವಿನಿಂದ ಇರಿದು ಹೊಟ್ಟೆಗೆ ಮೂರು ನಾಲ್ಕು ಕಡೆ ಆಳವಾದ ಗಾಯ ಮಾಡಿದ್ದಾನೆ.

ಕೂಡಲೇ ಆಸ್ಪತ್ರೆ ಸೇರಿಸಿದ್ದರಿಂದ ಹಾಗೂ ನೀರಿನಂತೆ ಹಣ ಖರ್ಚುಮಾಡಿ ಚಿಕಿತ್ಸೆ ಪಡೆದಿದ್ದರಿಂದ ಬದುಕಿ ಉಳಿದು ಇತ್ತೀಚೆಗೆ ಆಸ್ಪತ್ರೆಯಿಂದ ಹೊರಗೆ ಬಂದಿದ್ದಾನೆ.

ಈ ಬಗ್ಗೆ ಎಪಿಎಂಸಿ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಆಗಿದೆ. ಆದರೆ ಈತನನ್ನು ಬಂಧಿಸುವ ಪ್ರಯತ್ನವನ್ನೇ ಪೋಲೀಸರು ಮಾಡುತ್ತಿಲ್ಲ. ಈತ ಭಯೋತ್ಪಾದಕನಂತೆ ರಾಜಾರೋಷವಾಗಿ ನಗರದಲ್ಲಿಯೇ ಓಡಾಡಿಕೊಂಡಿದ್ದಾನೆ.

ಹಣವೂ ಇಲ್ಲ ಮೆಶಿನರಿಯೂ ಇಲ್ಲ

ಎರಡು ಲಕ್ಷದಿಂದ ಎಂಟು ಲಕ್ಷದವರೆಗೂ ಉಳಿದ ಜನರಿಗೂ ಸಾಲ ನೀಡಲಾಗಿದೆ ಎಂದು ಬ್ಯಾಂಕಿನಲ್ಲಿ ಖರ್ಚು ಬಿದ್ದಿದೆ. ವಾಸ್ತವವಾಗಿ ಇವರಾರಿಗೂ ಪೂರ್ತಿಯಾಗಿ ಹಣವಾಗಲಿ ಮೆಶಿನರಿಗಳಾಗಲೀ ನೀಡಿಯೇ ಇಲ್ಲ. ಸಾಲ ಕೊಟ್ಟಂತೆ ಮಾಡಿ ಇವರಿಂದ ರುಜು ಪಡೆದು ಮತ್ತೆ ಇವರ ಮಳಿಗೆ ಹಾಗೂ ಮಿಶಿನರಿಗಳಿಗೆ ಬೀಗಮುದ್ರೆ ಹಾಕಿ ಸುಮಾರು 40 ಲಕ್ಷ ದಷ್ಟು ಹಣ ಬ್ಯಾಂಕಿನ ಮ್ಯಾನೇಜರ್ ಹಾಗೂ ಸಿಬ್ಬಂದಿಗಳೊಡಗೂಡಿ ಲಪಟಾಯಿಸಲಾಗಿದೆ.

ಇಂತಹ ಹಣ ಲಪಟಾಯಿಸುವ ಇನ್ನೊಂದು ತಾಜಾ ಉದಾಹರಣೆ ಎಂದರೆ ಕೈಗಾರಿಕಾ ಪ್ರದೇಶದಲ್ಲಿರುವ ಪ್ಲಾಸ್ಟಿಕ್ ಪೈಪ್ ಫ್ಯಾಕ್ಟರಿಯವರು ತೆಗೆದುಕೊಂಡ ಸಾಲ ಮರುಪಾವತಿ ಮಾಡಲಿಲ್ಲವೆಂಬ ಕಾರಣಕ್ಕೆ ಬೀಗ ಮುದ್ರ ಹಾಕಿ ಸುಮಾರು 20 ಲಕ್ಷ ರೂಪಾಯಿ ಆಸ್ತಿಯನ್ನು 5-6 ಲಕ್ಷಕ್ಕೆ ಮಾರಿದ್ದು ಮಾತ್ರವಲ್ಲ, ಖರೀದಿ ಮಾಡಿದ ಹೊಸ ಮಾಲೀಕನಿಗೆ ಮತ್ತೆ 30 ಲಕ್ಷ ರೂ. ಸಾಲ ನೀಡಿದ್ದೂ ಇದೆಯಂತೆ. ಹಾಗಾದರೆ ಇದರಲ್ಲಿ ನಡೆದಿರುವ ಗುಪ್ತ ಒಪ್ಪಂದವೇನು?

ಇಟ್ಟಂಗಿ ಹಾಳ ರೋಡಿನಲ್ಲಿ ಇರುವ ಖಡಿ ಮಣ್ಣನ್ನು ಹಾಗೂ ಡಾಂಬರ್ ಹಾಟ ಮಿಕ್ಸರ್ ಘಟಕಕ್ಕೆ ಅಧಿಕೃತ ವಿದ್ಯುತ್ ಸರಬರಾಜು ಇಲ್ಲದಿದ್ದರೂ, ಸುಮಾರು 30 ಲಕ್ಷ ರೂ. ಸಾಲ ನೀಡಲಾಗಿದೆ. ಸಾಲ ಮರುಪಾವತಿಸದಿದ್ದುದ್ದಕ್ಕೆ ಈ ಘಟಕಕ್ಕೆ ಬೀಗಮುದ್ರೆ ಹಾಕಲಾಗಿದೆ. ಆದರೆ ಒಳಗಿದ್ದ ಟಿಪ್ಪರದ ಹೊಸ ಬಿಡಿಭಾಗಗಳನ್ನು ತೆಗೆದು ಹಳೆ ಬಿಡಿಭಾಗಗಳನ್ನು ಜೋಡಿಸಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ಒಳಗಿದ್ದ ರೋಲರ್ ಕೂಡ ಮಾಯವಾಗಿದೆ. ಮೇಲಧಿಕಾರಿಗಳು ಈ ಘಟಕದ ವೀಕ್ಷಣೆಗೆ ಬಂದರೆ ರೋಲರ್ ಮತ್ತೆ ಪ್ರತ್ಯಕ್ಷವಾಗಬಹುದೇನೋ?

ಪಡೆಯದ ಸಾಲ ಕೊಡು ಎಂದ ಹೊಸ ಮ್ಯಾನೇಜರ್

ಮುಂದೆ ವಿಶ್ವನಾಥ ಪಾಟೀಲ ಎಂಬ ಈ ಘಟಿಂಗ ಮ್ಯಾನೇಜರ್ ವರ್ಗಾವಣೆಯಾಗಿ ಹೋದ ನಂತರ ಅವನ ಸ್ಥಾನದಲ್ಲಿ ಈಗ ಇರುವ, ಮಹಾ ಭ್ರಷ್ಟನೆಂದು ಹೇಳುವ ಎ.ಕೆ.ರಾಜೇಂದ್ರ ಎಂಬ ಹೊಸ ಮ್ಯಾನೇಜರ್ ಬಂದ ನಂತರ ಸಾಲ ವಸೂಲಿ ಕಿರುಕುಳ ಪ್ರಾರಂಭವಾಯಿತು. ಪಡೆಯದೆ ಇರುವ ಸಾಲ ಕೊಡು ಎಂದಾಗ ಮನೆಯೇ ಕುಸಿದು ಮೈಮೇಲೆ ಬಿದ್ದಂತಾಯಿತು. ಸಾಲದ ಕಿರುಕುಳ ತಡೆಯದೇ ಹಲವರು ಮರ್ಯಾದೆಗೆ ಅಂಜಿ ಮನೆ ಬಿಟ್ಟು ಹೋದರು.



ಲಂಚ ಕೊಟ್ಟವರ ಮೆಶಿನ್ನುಗಳಿಗೆ ಜಪ್ತಿ ಅಥವಾ ಬೀಗಮುದ್ರೆ ಇಲ್ಲ, ಲಂಚ ಕೊಡದೆ ಇರುವ ಕೈಗಾರಿಕಾ ವಸಾಹತುಗಳಿಗೆ ಮೆಶಿನ್ನುಗಳಿಗೆ ಬೀಗ ಮುದ್ರೆ, ಜಪ್ತಿ ಹರಾಜು ಪ್ರಾರಂಭವಾದವು. ಈ ಗಿಸಾಡೆರ ಗೋಳು ಕೇಳದವರೇ ಇಲ್ಲ. ಲಂಚ ರುಷುವತ್ತು ಕೊಟ್ಟವರ ಸಾಲದ ಬಡ್ಡಿ ಮನ್ನಾ, ಮಿಶಿನರಿಗಳ ಹೊಸ ಬಿಡಿಭಾಗಗಳ ಬದಲಾಯಿಸಿ ಹಳೆ ಬಿಡಿ ಭಾಗಗಳಿಗೆ ಜೋಡಣೆ ಮಾಡಲು ವಿಫಲವಾದ ಅವಕಾಶ ಕಲ್ಪಿಸಲಾಗುತ್ತಿದೆಯಂತೆ.

ಬೀಗ ಮುದ್ರೆ ಹಾಕಿದ ಕೈಗಾರಿಕೆಗಳನ್ನು ಹರಾಜು ಹಾಕುವಾಗ ಒಂದು ಲಕ್ಷ, ಎರಡು ಲಕ್ಷ ರೂ. ಲಂಚ ಕೊಟ್ಟರೆ 10-20 ಲಕ್ಷ ರೂ.ಗಳ ಆಸ್ತಿಯನ್ನು 5-6 ಲಕ್ಷಕ್ಕೆ ತೆಗೆದುಕೊಳ್ಳಬಹುದು ಮತ್ತೆ ಅದರ ಆಧುನೀಕರಣಕ್ಕೆ 10-20 ಲಕ್ಷ ರೂ. ಸಾಲ ಮಂಜೂರಿಯೂ ಸಾಧ್ಯ ಮಾಡಿಕೊಡಲಾಗಿದೆ. ಹೇಗಿದೆ? ಮ್ಯಾನೇಜರ್‌ರ ಈ ಹಣಕಾಸು ಸಂಸ್ಥೆಯ ಹರಾಜು ಪ್ರಕರಣ. ಎಂ.ಪಿ., ಎಂ.ಎಲ್.ಎ., ಮರಿ ಪುಡಾರಿ, ಹಿರಿ ಪುಡಾರಿ ಎಲ್ಲರೂ ಮುಗಿದರು. ಆದರೆ ಸಾಲದ ಬಲೆಯಿಂದ ಮೇಲೆತ್ತುವವರಿಲ್ಲದಂತಾಯಿತು. ಮ್ಯಾನೇಜರ್‌ರಿಗೆ ಹಾಗೂ ಸಿಬ್ಬಂದಿಗಳ ಕೈಕಾಲುಗಳಿಗೆ ಬಿದ್ದದ್ದು ಆಯಿತು. ಕೋಳಿ ಕುರಿ ತಿನ್ನಿಸಿದ್ದು ಆಯಿತು. ಆದರೆ ಕರುಣೆ ಬರಲಿಲ್ಲ ಇವರಿಗೆ.

ಜನರ ಬಳಿ ಹೋದಾಗ

ಜನವಾದಿ ಮಹಿಳಾ ಸಂಘದ ಸದಸ್ಯತ್ವ ನೊಂದಾವಣೆ ಚಳುವಳಿಯ ಅಂಗವಾಗಿ ಈ ಪ್ರದೇಶಕ್ಕೆ ಹೋದಾಗ 300 ಜನ ಮಹಿಳೆಯರ ಸದಸ್ಯತ್ವ ನೊಂದಾವಣೆಯಾಯಿತು. ಜೊತೆಗೆ ತಮ್ಮ ಗಂಡಂದರಿಂದ ಅನುಭವಿಸುತ್ತಿರುವ ಕಿರುಕುಳದ ಬಗ್ಗೆ ಹೇಳಿದಾಗ ಅದರ ಗಂಭೀರತೆಯನ್ನು ಅರಿತ ಕಾರ್ಯಕರ್ತರು ರೈತ ಸಂಘದ ಮುಖಂಡರ ಗಮನಕ್ಕೆ ತಂದಾಗ ಸಂಸ್ಥೆಯ ಮೇಲಧಿಕಾರಿಗಳ ಗಮನಕ್ಕೂ ಸರಕಾರದ ಗಮನಕ್ಕೂ ಆ ಅವ್ಯವಹಾರ ತಂದರೂ ಯಾವುದೇ ಪ್ರಯೋಜನವಾಗಲಿಲ್ಲ.

ಕೊನೆಗಾಣದ ಬಾಳಿನ ಗೋಳಿಗೆ ಹೋರಾಟವೇ ದಾರಿ

ಮೇಲು ನೋಟಕ್ಕೆ ಸಾಬೀತು ಆಗುವಂತಹ ಗಂಭೀರ ಸ್ವರೂಪದ ಅವ್ಯವಹಾರ ಅಕ್ರಮ ನಡೆದಿದ್ದು ಕಂಡು ಬಂದಿದೆ. ಇದನ್ನು ಮುಚ್ಚಿ ಹಾಕಲು ಪ್ರಯತ್ನಿಸಲಾಗಿದೆ. ಇಷ್ಟೆಲ್ಲಾ ಘಟನೆಗಳು ನಡೆದು ಸರಕಾರದ ಗಮನಕ್ಕೆ ತಂದು ಒಂದೂವರೆ ವರ್ಷವಾದರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಈ ಮೊದಲು ವಿಜಾಪುರದಲ್ಲಿದ್ದ ಮ್ಯಾನೇಜರ್ ವಿಶ್ವನಾಥ ಪಾಟೀಲ ಬೆಂಗಳೂರಿನ ಪ್ರಧಾನ ಕಛೇರಿಯಲ್ಲಿದ್ದು ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ಅವ್ಯಹಾರವನ್ನು ಮುಚ್ಚಿಹಾಕುತ್ತಾ ನಡೆದಿರುವುದು ತಿಳಿದು ಬಂದು ಕೊನೆಗೆ ಹೋರಾಟವೇ ದಾರಿ ಎಂದು ಮಾರ್ಚ್ 3 ರಂದು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಜನವಾದಿ ಮಹಿಳಾ ಸಂಘಟನೆಗಳು ಜಂಟಿ ಮೆರವಣಿಗೆ ಹೊರಡಿಸಿ ವಿಜಾಪೂರದ ಹಣಕಾಸು ಸಂಸ್ಥೆಯ ಮುಂದೆ ಧರಣಿ ಹೂಡಲಾಯಿತು. ಆಗ ಇವರ ಹೂರಣ ಬಯಲಿಗೆ ಬಂದು ಒಪ್ಪಂದಕ್ಕೆ ಬಂದಿದ್ದಾರೆ. ಆದರೆ ಎರಡು ಸಂಘಟನೆಗಳು ಇದಕ್ಕೆ ಒಪ್ಪಿಕೊಂಡಿಲ್ಲ. ಈ ಹಣಕಾಸು ಸಂಸ್ಥೆಯ ಮುಚ್ಚಿಹೋಗಿರುವ ಇನ್ನೂ ಹಲವಾರು ಪ್ರಕರಣಗಳಿರುವುದರಿಂದ ಸಿ.ಓ.ಡಿ. ತನಿಖೆ ಮಾಡಬೇಕು ಎಂದು ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಅಧ್ಯಕ್ಷ ಭೀಮಸಿ ಕಲಾದಗಿ, ಪ್ರ.ಕಾರ್ಯದರ್ಶಿ ಅಣ್ಣರಾಯ ಈಳಿಗೇರ, ಜನವಾದಿ ಮಹಿಳಾ ಸಂಘದ ಜಿಲ್ಲಾ [illegible] ಸುರೇಖಾ ರಜಪೂತ ಅವರು ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಆಗ್ರಹಿಸಿದ್ದಾರೆ.

ತೆಹಲ್ಕಾ ಹಗರಣ: ಹಲವು ಪ್ರಶ್ನೆಗಳು - ಉತ್ತರಗಳು

ವಾಜಪೇಯಿ ಸರ್ಕಾರ ನಿರ್ಗಮಿಸಬೇಕು

ಸೀತಾರಾಂ ಯೆಚೂರಿ

ಪ್ರತಿಪಾದಿಸಲು ಅಸಾಧ್ಯವಾದ ಅಂಶವನ್ನು ಪ್ರತಿಪಾದಿಸಲು ವಾಜಪೇಯಿ ಸರ್ಕಾರ ಮತ್ತು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಕೂಟ ಶತಪ್ರಯತ್ನ ಮಾಡುತ್ತಿದೆ. ಈ ಪ್ರಕ್ರಿಯೆಯಲ್ಲಿ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲು ಹಾಗೂ ಹಗರಣದ ವಿಷಯವನ್ನು ಮುಚ್ಚಿಹಾಕಲು ಫ್ಯಾಸಿಸ್ಟ್ ಗೊಬೆಲ್ಸನ ಪ್ರಚಾರದ ತಂತ್ರಗಳನ್ನು ಬಳಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಅವರ ಕೆಲವು ಪ್ರಯತ್ನಗಳು ಇಂತಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಈ ವಿಷಯ ಕುರಿತ ಕೆಲವು ಪ್ರಶ್ನೆಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದಾರೆ

ಪ್ರಶ್ನೆ: *ತೆಹಲ್ಕಾ ಡಾಟ್ ಕಾಂ ಬಹಿರಂಗಪಡಿಸಿರುವ ಅಂಶಗಳ ಬಗ್ಗೆ ತನಿಖೆಯನ್ನು ಹಾಗೂ ಸಂಸತ್ತಿನಲ್ಲಿ ಚರ್ಚೆಯನ್ನು ನೀವೇಕೆ ಒಪ್ಪುತ್ತಿಲ್ಲ?*

▶ ರಕ್ಷಣಾ ವ್ಯವಹಾರ ಕುದುರಿಸುವ ಆಶ್ವಾಸನೆಯೊಂದಿಗೆ ಕೆಲವರು ಲಂಚ ಪಡೆಯುತ್ತಿರುವುದನ್ನು ತೆಹಲ್ಕಾ ಟೇಪ್‌ಗಳು ಸಾಕ್ಷಿ ಸಮೇತ ಬಹಿರಂಗ ಪಡಿಸಿವೆ. ಜನಾಭಿಪ್ರಾಯದ ಒತ್ತಡದಿಂದಾಗಿ ಕೆಲವರು ರಾಜೀನಾಮೆ ನೀಡಿದ್ದರೂ ಸಹ ಈ ಹಿಂದಿನ ರಕ್ಷಣಾ ಸಚಿವರು ಆಳುವ ಮೈತ್ರಿಕೂಟದ ಸಂಚಾಲಕರಾಗಿ ಮುಂದುವರಿದಿದ್ದಾರೆ. ತನಿಖೆಯ ನಂತರ ಅವರನ್ನು ಸಚಿವ ಸಂಪುಟಕ್ಕೆ ತೆಗೆದುಕೊಳ್ಳುವ ಗೌರವಾನ್ವಿತ ಮಾತುಗಳನ್ನು ಪ್ರಧಾನಿ ಸ್ಪಷ್ಟಪಡಿಸಿದ್ದಾರೆ. ಹಾಗಾಗಿ ತನಿಖೆಯ ತೀರ್ಮಾನ ಹಾಗೂ ವಿಧಾನವನ್ನು ಪ್ರಾರಂಭದಲ್ಲೇ ನಿರ್ಧರಿಸಲಾಗಿದೆ. ಈ ತನಿಖೆ ಜನತೆಯನ್ನು ದಿಕ್ಕುತಪ್ಪಿಸಲು ಹಾಗೂ ಅವರ ಸಿಟ್ಟನ್ನು ಬೇರೆಡೆಗೆ ತಿರುಗಿಸಲು ನಡೆಸುವ ಅಂಶವೆಂದು ಸ್ಪಷ್ಟವಾಗುತ್ತದೆ.

ವಾಜಪೇಯಿ ಸರ್ಕಾರದಡಿ ಭ್ರಷ್ಟಾಚಾರ ಎಷ್ಟು ತೀವ್ರವಾಗಿ ಆಳಕ್ಕೆ ಇಳಿದಿದೆ ಎಂಬುದನ್ನು ಸಾಬೀತುಪಡಿಸಲು ತನಿಖೆ ಅಗತ್ಯವಿದೆ. ಅದರಲ್ಲೂ ರಾಷ್ಟ್ರೀಯ ಭದ್ರತೆಯ ವಲಯದಲ್ಲಂತೂ ಅತೀ ಜರೂರಿದೆ. ಇಂತ ತನಿಖೆ ಸಾಧ್ಯವಾಗುವುದೂ ಅಧಿಕಾರ ದುರುಪಯೋಗಪಡಿಸಿಕೊಳ್ಳಲು ಶತ ಪ್ರಯತ್ನ ಮಾಡುತ್ತಿರುವ ಈ ಸರ್ಕಾರ ನಿರ್ಗಮಿಸಿದರೆ ಮಾತ್ರ. ವಾಜಪೇಯಿ ಸರ್ಕಾರ ಅಧಿಕಾರದಲ್ಲಿ ಇರುವವರೆಗೂ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ. ತನಿಖೆ ಪ್ರಾರಂಭವಾಗುವ ಮುನ್ನ ಸೈನ್ಯಾಧಿಕಾರಿಗಳು ವಜಾ ಆದಂತೆ ಈ ಸರ್ಕಾರವೂ ವಜಾ ಆಗಬೇಕು.

ಲಲ್ಲೂ ಪ್ರಸಾದ್ ಯಾದವ್ ಅಥವಾ ಜಯಲಲಿತಾರವರ ಮೇಲಿರುವ ಆರೋಪಗಳ ಕುರಿತಂತೆ ಬಿಹಾರ ಅಥವಾ ತಮಿಳುನಾಡು ರಾಜ್ಯ ಶಾಸನಸಭೆಗಳೂ ಚರ್ಚಿಸಿಲ್ಲವಲ್ಲ. ಈ ದೇಶದ ಕಾನೂನು ಹೇಳಿರುವಂತೆ ಅವರ ಮೇಲೆ ಕ್ರಮಕೈಗೊಂಡಿಲ್ಲವೇ? ಹಾಗಿರುವಾಗ ರಕ್ಷಣಾ ಖರೀದಿ ಹಗರಣಕ್ಕೆ ಸಂಬಂಧಪಟ್ಟಂತೆ ತೆಹಲ್ಕಾ ಟೇಪ್‌ಗಳಲ್ಲಿ ಸಾಕಷ್ಟು ಸಾಕ್ಷಿಗಳು ಇರುವಾಗ ನೀವು(ಕೇಂದ್ರ ಸರ್ಕಾರ) ಚಾರ್ಜ್‌ಶೀಟ್-ಎಫ್‌ಐಆರ್ ಹಾಕಿಲ್ಲ. ಅವರನ್ನೇಕೆ ಬಂಧಿಸಿಲ್ಲ? ಇದರರ್ಥ ಇಷ್ಟೇ ಈ ಸರ್ಕಾರ ಭ್ರಷ್ಟರನ್ನು ರಕ್ಷಿಸುತ್ತಿದೆ.

ಪ್ರಶ್ನೆ 2: *ಎಲ್ಲ ಪಕ್ಷಗಳು ನಿಧಿ ಸಂಗ್ರಹಿಸುತ್ತವೆ ಹಾಗಾಗಿ ಬಿಜೆಪಿ ಮತ್ತು ಸಮತಾ ಅಧ್ಯಕ್ಷರು ಸಂಗ್ರಹಿಸುವುದರಲ್ಲಿ ತಪ್ಪೇನು?*

▶ ರಾಜಕೀಯ ಪಕ್ಷಗಳಿಗೆ ನಿಧಿ ಸಂಗ್ರಹವನ್ನು ಕೆಲವು ವ್ಯವಹಾರಗಳನ್ನು ಕುದುರುಸಿ ಕೊಡುತ್ತೇವೆಂಬ ಆಶ್ವಾಸನೆಯೊಂದಿಗೆ ಪಡೆಯುವ ಹಣಕ್ಕೆ ಹೋಲಿಸಲಾಗದು. ಎಲ್ಲಾ ರಾಜಕೀಯ ಪಕ್ಷಗಳೂ ಬಹಿರಂಗವಾಗಿ ನಿಧಿ ಸಂಗ್ರಹಿಸುತ್ತವೆ. ಈ ಮುಕ್ತ ಭ್ರಷ್ಟಾಚಾರವನ್ನು ಪಕ್ಷದ ನಿಧಿ ಸಂಗ್ರಹವೆಂದು ವಾದಿಸುವುದು ಆತ್ಮವಂಚಕ ಕೆಲಸ.

ಈ ನಿಟ್ಟಿನಲ್ಲಿ ರಾಜಕೀಯ ಪಕ್ಷಗಳಿಗೆ ಕಂಪನಿಗಳು ಹಣ ನೀಡುವುದನ್ನು ನಿಷೇಧಿಸಬೇಕೆಂದು ಸಿಪಿಐ(ಎಂ) ಮೊದಲಿನಿಂದಲೂ ಒತ್ತಾಯಿಸುತ್ತಿದೆ. ಹಾಗಾಗಿ 1998 ರ ಚುನಾವಣೆಯಲ್ಲಿ ಟಾಟಾ ಟ್ರಸ್ಟ್‌ನವರು ಸಿಪಿಐ(ಎಂ)ಗೆ ಪಕ್ಷದ ನಿಧಿಗೆಂದು ಕಳುಹಿಸಿದ ಚೆಕ್ ನ್ನು ಗೌರವದೊಂದಿಗೆ ಹಿಂತಿರುಗಿಸಿದ್ದೇವೆ.

ಪ್ರಶ್ನೆ3: *ರಕ್ಷಣಾ ಸಚಿವರು ಬಿಜೆಪಿ ಹಾಗೂ ಸಮತಾಪಕ್ಷದ ಅಧ್ಯಕ್ಷರು ಎಲ್ಲಾ ರಾಜೀನಾಮೆ ನೀಡಿದ್ದಾರೆ. ವಿರೋಧ ಪಕ್ಷಗಳಿಗೆ ಮತ್ತೇನು ಬೇಕು?*

▶ ಪ್ರಧಾನಮಂತ್ರಿಯವರ ಕಛೇರಿಯಿಂದ ಪ್ರಾರಂಭವಾಗಿ ಅತ್ಯಂತ ಅಗಾಧವಾದ ಭ್ರಷ್ಟಾಚಾರ ಕೂಟವೊಂದು ಕಾರ್ಯವೆಸಗುತ್ತಿದೆ ಎಂದು ತೆಹಲ್ಕಾ ಡಾಂ ಕಾಂ ಬಹಿರಂಗಪಡಿಸಿದೆ. ಈ ಭ್ರಷ್ಟಕೂಟವನ್ನು ನಾವು ರಾಷ್ಟ್ರದ ಹಿತಾಸಕ್ತಿಯಿಂದ ಬಡಿದೋಡಿಸಬೇಕಿದೆ. ಹಾಗಾಗಿ ಇದಕ್ಕೆ ಕಾರಣಭೂತವಾಗಿರುವ ಯಾವುದೇ ಕಛೇರಿಯ ಎಂತಹುದೇ ಅಧಿಕಾರಿಯನ್ನು ಕ್ಷಮಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಭ್ರಷ್ಟ ವ್ಯವಸ್ಥೆಯನ್ನು ಹೊಡೆದುಹಾಕಲು ಪ್ರಧಾನಮಂತ್ರಿಗಳೇ ರಾಜಿನಾಮೆ ನೀಡಬೇಕೆಂದು ಒತ್ತಾಯಿಸುತ್ತೇವೆ.

ಪ್ರಶ್ನೆ4: *ಸರ್ಕಾರವನ್ನು ಅಭದ್ರಗೊಳಿಸಲು ನಡೆಸುವ ಪಿತೂರಿ ಅಲ್ಲ ಎಂದು ಹೇಗೆ ಹೇಳುತ್ತೀರಿ?*

▶ ಆಳುವ ಸರ್ಕಾರ ಯಾವಾಗೆಲ್ಲ ಸ್ಪಷ್ಟವಾಗಿ - ಪ್ರತ್ಯಕ್ಷವಾಗಿ ಭ್ರಷ್ಟಚಾರದ ಹಗರಣದಲ್ಲಿ ಸಿಲುಕಿಕೊಳ್ಳುತ್ತದೋ ಆಗ ಚಾಲ್ತಿಗೆ ಬರುವ ಅಂಶವೆಂದರೆ ಈ ಪಿತೂರಿಯ ಮಾತುಗಳು ಹಾಗೂ ವಿದೇಶಿ ಕೈವಾಡದ ಮಾತುಗಳು. ಬಹಿರಂಗವಾಗಿ ಲಂಚ ಪಡೆಯುತ್ತಿರುವ ದೃಶ್ಯಾವಳಿಗಳ ಹಿಂದೆ ಯಾವ ಪಿತೂರಿ ಇದೆ? ಸದ್ಯದಲ್ಲಿ ಇರುವ ಪಿತೂರಿ ಎಂದರೆ ಈ ಭ್ರಷ್ಟಾಚಾರವನ್ನು ಮುಚ್ಚಿಹಾಕಲು ವಾಜಪೇಯಿ ಸರ್ಕಾರ ನಡೆಸುತ್ತಿರುವ ಪ್ರಯತ್ನಗಳು.

ಪ್ರಶ್ನೆ5: *ಎಲ್ಲಿಯವರೆಗೆ ಸಂಸತ್ತನ್ನು ನಡೆಯಲು ಬಿಡುವುದಿಲ್ಲ?*

▶ ಇಲ್ಲಿ ಸರ್ಕಾರದ ಮೇಲೆ ಜವಾಬ್ದಾರಿ ಇದೆ ವಿನಃ ವಿರೋಧ ಪಕ್ಷದ ಮೇಲಲ್ಲ. ರಾಷ್ಟ್ರದ ಹಿತದ ದೃಷ್ಟಿಯಿಂದ ಈ ಸರ್ಕಾರ ಕೂಡಲೇ ನಿರ್ಗಮಿಸಬೇಕು. ಸುಖರಾಂ ಹಗರಣಕ್ಕೆ ಕುರಿತಂತೆ ಈ ಹಿಂದೆ ವಿರೋಧ ಪಕ್ಷವಾಗಿದ್ದ ಬಿಜೆಪಿ ಸಂಸತ್ತನ್ನು 13 ದಿನಗಳ ಕಾಲ ನಡೆಯಲು ಬಿಟ್ಟಿರಲಿಲ್ಲ ಎಂದು ನೆನಪಿಸಿಕೊಳ್ಳಬೇಕು. ಆದರೆ ಇಂದು ಇದೇ ಜನ ಹಿಮಾಚಲ ಪ್ರದೇಶದಲ್ಲಿ ಅದೇ ಸುಖರಾಂನೊಂದಿಗೆ ಅಧಿಕಾರ ನಡೆಸುತ್ತಿದ್ದಾರೆ ಎಂಬುದು ಬೇರೊಂದು ಮಾತು. ಈ ಹಿಂದೆ ರಾಜೀವ್ ಗಾಂಧಿ ಭೋಫೋರ್ಸ್ ಹಗರಣದಲ್ಲಿ ರಾಜೀನಾಮೆ ನೀಡಲು ನಿರಾಕರಿಸಿದಾಗ ಇದೇ ಬಿಜೆಪಿ ವಿರೋಧ ಪಕ್ಷದ ಇತರೆ ಸದಸ್ಯರೊಂದಿಗೆ ರಾಜೀನಾಮೆ ನೀಡಿದ್ದನ್ನು ಮರೆತು ಬಿಟ್ಟಿದ್ದಾರೆಯೆ? ಈ ಮರೆವು ಅವರ ಜಾಣ ಮರೆವಾಗಿದೆ.

ಪ್ರಶ್ನೆ6: *ಈ ಸರ್ಕಾರ ಹೋದರೆ ಪರ್ಯಾಯ ಏನು?*

▶ ಪರ್ಯಾಯದ ಪ್ರಶ್ನೆ ಬರುವುದು ಈ ಸರ್ಕಾರ ರಾಜಿನಾಮೆ ಕೊಟ್ಟಾಗ. ಪರ್ಯಾಯ ಸಾಧ್ಯತೆಗಳ ಬಗ್ಗೆ ಸೂಕ್ತ ಸಮಯದಲ್ಲಿ ಸಮಯ ಬಂದಾಗ ವಿರೋಧ ಪಕ್ಷಗಳೆಲ್ಲಾ ಸೇರಿ ಚರ್ಚಿಸುತ್ತವೆ. ಆದರೆ ರಾಷ್ಟ್ರದ ಹಿತಾಸಕ್ತಿಯಿಂದ ಈ ಭ್ರಷ್ಟಸರ್ಕಾರವನ್ನು ಅಧಿಕಾರದಲ್ಲಿ ಮುಂದುವರಿಯಲು ಬಿಡಲು ಸಾಧ್ಯವಿಲ್ಲ.

ಹಗರಣ ಹಗರಣ ಮತ್ತೊಂದು ಶೇರು ಹಗರಣ

ಜಾಗತೀಕರಣ ಮತ್ತು ಉದಾರೀಕರಣದ ನೀತಿಗಳು ಇರುವುದು ಕೇವಲ ಲಾಭಕೋರರಿಗೆ, ಕೊಳ್ಳೆ ಹೊಡೆಯುವವರಿಗೆ, ಲೂಟಿಗಾರರಿಗೆ ಮಾತ್ರ ಎಂಬುದಕ್ಕೆ ಮತ್ತೊಂದು ಜ್ವಲಂತ ಪುರಾವೆ ಎಂದರೆ ಇದೀಗ ಬಯಲುಗೊಂಡಿರುವ ಎರಡನೇ ಷೇರು ಹಗರಣ.

ಆಳುವ ಜನಕ್ಕೆ ನಿಕಟವರ್ತಿಯಾಗಿದ್ದ ಕೇತನ್ ಪಾರಿಖ್ ಎಂಬ ಷೇರು ದಲ್ಲಾಳಿ ಪ್ರಮುಖ ಪಾತ್ರಧಾರಿ ಹಾಗೂ ಸೂತ್ರಧಾರಿ ಆಗಿರುವ ಈ ಹಗರಣದಲ್ಲಿ ಈಗಾಗಲೇ ಸುಮಾರು 850 ಕೋಟಿ ರೂಗಳ ನಷ್ಟ ಸಂಭವಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಈ ಅಂದಾಜು, ಕೇವಲ ಹಣಕಾಸು ಸಂಸ್ಥೆಗಳು ಮತ್ತಿತರ ಏಜೆನ್ಸಿಗಳು ಅನುಭವಿಸಿರುವ ನಷ್ಟವನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ. ಉಳಿದಂತೆ ಲಕ್ಷಾಂತರ ಹೂಡಿಕೆದಾರರು ಮತ್ತು ದಲ್ಲಾಳಿಗಳು ಅನುಭವಿಸಿರುವ ಕೋಟ್ಯಾಂತರ ರೂಗಳ ನಷ್ಟವನ್ನು ಲೆಕ್ಕ ಹಾಕುವುದು ಅಸಾಧ್ಯ. ಇಬ್ಬರು ದಲ್ಲಾಳಿಗಳು ಆತ್ಮಹತ್ಯೆ ಯಂತಹ ದುರಂತಕ್ಕೆ ಮೊರೆಹೋಗಿದ್ದಾರೆ.

ತಲೆಯೂ ಬೋಳು, ಕಾಸೂ ಹಾಳು

1992 ರ ಕುಖ್ಯಾತ ಹರ್ಷದ್ ಮೆಹ್ತಾ ಹಗರಣ ಮತ್ತೊಮ್ಮೆ ಮರುಕಳಿಸಿದೆ. ಬ್ಯಾಂಕುಗಳಿಂದ (ಅದರಲ್ಲೂ ಸಹಕಾರಿ ಬ್ಯಾಂಕುಗಳಿಂದ) ರಿಸರ್ವ್‌ಬ್ಯಾಂಕಿನ ನಿಯಮಾವಳಿಗಳನ್ನು ಮೀರಿ ಷೇರುಗಳ ಮೇಲೆ ಪಡೆದಂತಹ ಕೋಟ್ಯಾಂತರ ರೂಪಾಯಿ ಸಾಲವನ್ನು ಪುನಃ ಅದೇ ಶೇರುಗಳ ಖರೀದಿಗೆ ಬಳಸಿದ್ದು ; ಆ ಷೇರುಗಳ ಬೆಲೆ ಯದ್ವಾತದ್ವಾ ಏರಲಾರಂಭಿಸಿದ್ದು. ಸಮಯ ನೋಡಿ, ತಾನು ಖರೀದಿಸಿದ್ದ ಷೇರುಗಳನ್ನು ಮಾರಿದ್ದು ಒಮ್ಮೆಗೇ ಮಾರುಕಟ್ಟೆಗೆ ಬಂದ ಸದರಿ ಷೇರುಗಳಿಂದಾಗಿ ಅದರ ಬೆಲೆ ಕುಸಿದು, ಅಸಂಖ್ಯ ಹೂಡಿಕೆದಾರರು ಮಣ್ಣು ಮುಕ್ಕುವಂತೆ ಮಾಡಿದ್ದು, ಇದೇ ಕೇತನ್ ಪಾರೀಖ್ ಮತ್ತಿತರ ಪ್ರಮುಖ ದಲ್ಲಾಳಿಗಳು ಅನುಸರಿಸಿದ ತಂತ್ರ. ಒಂದು ನಯಾಪೈಸೆ ಬಂಡವಾಳವಿಲ್ಲದೆ ಕೋಟ್ಯಾಂತರ ರೂಪಾಯಿಗಳನ್ನು ನುಂಗಿಹಾಕಲು ಸಾಧ್ಯವಾಗಿದ್ದು, ಎಸ್.ಇ.ಬಿ.ಐ.(ಸೆಬಿ) ರಿಸರ್ವ್ ಬ್ಯಾಂಕ್ ಮುಂತಾದ ಸಂಸ್ಥೆಗಳು ವಿದ್ಯಾಮಾನಗಳಿಗೆ ಕಣ್ಣು ಮುಚ್ಚಿಕೊಂಡು ಕೂತಿದ್ದರಿಂದಲೇ ಕೊಟ್ಟ ಸಾಲಕ್ಕೆ ಅಡಮಾನ ಮಾಡಿರುವ ಷೇರುಗಳಿಗೆ ಇಂದು ಕವಡೆ ಬೆಲೆಯೂ ಇಲ್ಲ. ಸಾಲಕೊಟ್ಟ ಬ್ಯಾಂಕುಗಳ ಪರಿಸ್ಥಿತಿ ತಲೆಯೂ ಬೋಳು, ಕಾಸೂ ಹಾಳು ಎಂಬಂತಾಗಿದೆ.

ಹಗರಣ ಬಯಲಾದದ್ದು ಹೀಗೆ



ಇಡೀ ಹಗರಣದ ಕತ್ತಲ ಕರ್ಮಕಾಂಡಗಳ ವಿವರ ಒಂದೊಂದಾಗಿ ಬೆಳಕಿಗೆ ಬರತೊಡಗಿದೆ. ಈಗಾಗಲೇ ಲಭ್ಯವಾಗಿರುವ ವಿವರಗಳ ಪ್ರಕಾರ ನಡೆದಿದ್ದು ಇಷ್ಟು. ಕೇತನ್ ಪಾರೀಖ್, ಅಹಮದಾಬಾದಿನ ಮಾಧವಪುರ ಮರ್ಕಂಟೈಲ್ ಸಹಕಾರಿ ಬ್ಯಾಂಕ್ (ಎಂ.ಎಂ.ಸಿ.ಬಿ) ನಿಂದ ನಿಯಮ ಬಾಹಿರವಾಗಿ ಬೃಹತ್ ಮೊತ್ತದ ಹಣ ಪಡೆದು, ಆ ಹಣವನ್ನು ಕೆಲವು ಆಯ್ದ ಷೇರುಗಳ ಮೇಲೆ ವಿನಿಯೋಗಿಸಿದ್ದು. ಆ ಸಹಕಾರಿ ಬ್ಯಾಂಕು ಹಣವನ್ನು ಪೇ ಆರ್ಡರ್ ಮೂಲಕ (ಬ್ಯಾಂಕಿನವರೇ ಕೊಡುವ ಡಿಮಾಂಡ್ ಡ್ರಾಫ್ಟ್) ಕೊಡುತ್ತಿದ್ದು, ಅಂತಹ ಪೇ ಆರ್ಡರ್‌ಗಳನ್ನು ಬ್ಯಾಂಕ್ ಆಫ್ ಇಂಡಿಯಾದಂತಹ ಇತರ ಬ್ಯಾಂಕುಗಳಲ್ಲಿ ನಗದೀಕರಿಸಲಾಗುತ್ತಿತ್ತು. ಯಾರೇ ಆಗಲಿ ಬ್ಯಾಂಕಿನಿಂದ ಡಿಮಾಂಡ್ ಡ್ರಾಫ್ಟ್ (ಡಿಡಿ) ಪಡೆಯಬೇಕಾದರೆ ಹಣ ಪಾವತಿ ಮಾಡಬೇಕಾಗಿರುವ ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಈ ಹಗರಣದಲ್ಲಿ ಬೆಳಕಿಗೆ ಬಂದಿರುವ ಸಂಗತಿಯೆಂದರೆ ಕೇತನ್ ಪಾರೀಖ್ ಎಂ.ಎಂ.ಸಿ.ಬಿಗೆ ಹಣ ಪಾವತಿ ಮಾಡದೇ, ಪೇ ಆರ್ಡರ್‌ಗಳನ್ನು ಪಡೆಯಲು ಸಾಧ್ಯವಾಗಿದ್ದು. ನಗದೀಕರಿಸಿಕೊಂಡ ಕೆಲವು ಪೇ ಆರ್ಡರ್‌ಗಳು ಸಾಚಾಗಳಾಗಿರದೆ ನಕಲು ಮಾಡಿದ್ದವುಗಳು ಎಂಬ ಆರೋಪವೂ ಇದೆ. ತಾನೇ ನೀಡಿದ ಪೇ ಆರ್ಡರ್‌ನ ಮರುಪಾವತಿ ಮಾಡಲು ಎಂ.ಎಂ.ಸಿ.ಬಿ ಬ್ಯಾಂಕ್ ವಿಫಲವಾದಾಗ ಇಡೀ ಹಗರಣ ಬಯಲಾಯ್ತು.

ಈ ನಿಯಮಬಾಹಿರ ಕೃತ್ಯ ಒಂದು ವರ್ಷಕ್ಕೂ ಮಿಗಿಲಾಗಿ ನಡೆದುಕೊಂಡೇ ಬಂದಿದ್ದರೂ, ಶೇರು ಮಾರುಕಟ್ಟೆ ನಿಯಂತ್ರಿಸುವ ಎಸ್.ಇ.ಬಿ.ಐ ಸುಮ್ಮನೇ ಮಲಗಿತ್ತು. ಇಡೀ ಷೇರು ಬಜಾರಿನ ಎಲ್ಲಾ ದಲ್ಲಾಳಿಗಳಿಗೆ ಮತ್ತು ವಹಿವಾಟುದಾರರಿಗೆ ಕೇತನ್ ಪಾರೀಖ್‌ನ ದುರ್‌ವ್ಯವಹಾರಗೊತ್ತಿತ್ತು. ಆದರೆ ಎಸ್.ಇ.ಬಿ.ಐ ಗೆ ಇದರ ವಾಸನೆಯೂ ಹತ್ತಿರಲಿಲ್ಲ! ಒಂದು ವೇಳೆ ಅದಕ್ಕೆ ಗೊತ್ತಿದ್ದರೂ ಕೂಡಾ, ಅದು ಯಾವುದೇ ರೀತಿಯಲ್ಲಿ ಸಕಾಲಿಕ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ.MMEB ಬ್ಯಾಂಕ್ ಕೂಡ ಸುಮ್ಮನಿತ್ತು. ಒಂದು ಅಂದಾಜಿನಂತೆ ಷೇರು ಮಾರುಕಟ್ಟೆಗೆ ಸಂಬಂಧವಾಗಿ ಎಂ.ಎಂ.ಸಿ.ಬಿ. ಬ್ಯಾಂಕ್ ಸುಮಾರು 1000 ಕೋಟಿಗೂ ಹೆಚ್ಚು ಸಾಲ ನೀಡಿದೆ. ಅದರ ಒಟ್ಟು ಠೇವಣಿಗಳ ಮೊತ್ತವೇ ಹೆಚ್ಚು ಕಡಿಮೆ ಅಷ್ಟೇ ಇತ್ತು. ಇಡೀ ಷೇರು ಮಾರುಕಟ್ಟೆ ಕುಸಿದು ಅದರ ಪರಿಣಾಮವಾಗಿ ಎಂ.ಎಂ.ಸಿ. ಬ್ಯಾಂಕ್ ಕೂಡಾ ಕುಸಿದಿದೆ. ಅಸಂಖ್ಯಾತ ಠೇವಣಿದಾರರು ಕಂಗಾಲಾಗಿದ್ದಾರೆ. ಏನನ್ನೂ ಮಾಡದೆ ತೆಪ್ಪಗಿದ್ದ ಕೇಂದ್ರದ ರಿಜರ್ವ್ ಬ್ಯಾಂಕ್ ಈಗ ತನ್ನದೇನೂ ತಪ್ಪಿಲ್ಲ, ತಾನೇನೂ ಮಾಡಲಾಗುವುದಿಲ್ಲ ಎಂದು ವಾದಿಸುತ್ತಿದೆ.

ಜಾಗತೀಕರಣ/ ಉದಾರೀಕರಣವೆಂದರೆ ಇದೇ. ಎಲ್ಲರಿಂದಲೂ ಎಲ್ಲ ರೀತಿಯಲ್ಲೂ, ಎಲ್ಲವನ್ನೂ ಲೂಟಿ ಹೊಡೆದು ಕೇವಲ ಬೆರಳೆಣಿಕೆಯಷ್ಟು ಮಂದಿ ಕುಬೇರರಾಗುವುದು. ಬಜೆಟ್ ಮಂಡಿಸುವಾಗ ಪಾರ್ಲಿಮೆಂಟಿನಲ್ಲಿ ಕಥೆಗಳ ಅಣೆ ಮುತ್ತು ಉದುರಿಸಿದ ಕೇಂದ್ರದ ಅರ್ಥಸಚಿವ ಯಶವಂತಸಿನ್ಹಾ ಒಂದೂ ಮಾತನಾಡದೇ ಮೌನವಾಗಿದ್ದಾರೆ. ವಾಜಪೇಯಿಯವರೋ ತೆಹಲ್ಕಾದ್ದು ತೊಳಕೊಂಡರೆ ಸಾಕೇ ಸಾಕು ಎಂದು ತಿರುಗುತ್ತಿದ್ದಾರೆ.

- ರತ್ನಾಕರ ಶೆಣೈ

ಉತ್ತರ ಕನ್ನಡದಲ್ಲಿ ಹೋರಾಟದ ಕಿಡಿಹೊತ್ತಿಸಿದ
ಕಾಂ. ಎಂ.ಎಸ್. ಧಾರೇಶ್ವರ ಇನ್ನಿಲ್ಲ

ಕಾಂ. ಧಾರೇಶ್ವರರ ಕಿಸೆಯಲ್ಲಿ 50 ರೂಪಾಯಿ ಇದೆ ಎಂದಾದರೆ ಅಂದು ಒಂದು ಕರಪತ್ರ ಮುದ್ರಣಗೊಳ್ಳುತ್ತವೆ. ಬಿಡಕಿಬೆಲಿನಲ್ಲಿ ಕೆಂಬಾವುಟನೆಟ್ಟು ಒಂದು ಸಭೆನಡೆಯುತ್ತವೆ. ಆ ಸಭೆಗೆ ಕನಿಷ್ಠ 400-500 ಜನ ಸೇರುತ್ತಾರೆ. ಇದು ಎಂ.ಎಸ್. ಧಾರೇಶ್ವರರ ಸ್ನೇಹಿತರು ಮತ್ತು ಅವರ ಪರಿಚಯ ಇರುವವರು ಹೇಳುವ ಮಾತು.

"ನಿಮ್ಮದೆಂಥ ಚಳುವಳಿ ಧಾರೇಶ್ವರ ವಕೀಲರ ಪ್ರಾಯದಲ್ಲಿ ನೋಡಬೇಕಿತ್ತು. ಹಾಗೆ ಒಂದು ಪೈಸೆ ಹೆಚ್ಚಾದಾಗ ಇಡೀ ಸಿರ್ಸಿ ಅವರ ನಾಯಕತ್ವದಲ್ಲಿ ಚಳುವಳಿಮಾಡಿತ್ತು. ಏನೇ ಅನ್ಯಾಯ ಆದರೂ ಧಾರೇಶ್ವರ ವಕೀಲರು ಮತ್ತು ಅವರ ಕೆಂಬಾವುಟ ಹೋರಾಟ ಮಾಡುತ್ತಿತ್ತು. ರೇಶನ್‌ಗಾಗಿ ಹೋರಾಟ, ಕಟ್ಟಿಗೆಗಾಗಿ ಹೋರಾಟ, ಮಿನಿ ಕಾಲಿಟ್ಟರೆ ಹೋರಾಟ ಎಂಥೆಂಥ ಹೋರಾಟ" ಎಂದು ಸಿರ್ಸಿಯ ಹಳೆತಲೆಮಾರಿನವರನ್ನು ಮಾತನಾಡಿಸಿದರೆ ಹೇಳುತ್ತಾರೆ.

ಹೀಗೆ ಹೋರಾಟವೆಂದರೆ ದಾರೇಶ್ವರರು, ಧಾರೇಶ್ವರರೆಂದರೆ ಹೋರಾಟ ಎಂಬಷ್ಟರ ಮಟ್ಟಿಗೆ ತಮ್ಮ ಬದುಕನ್ನು ಹೋರಾಟಕ್ಕೆ ಮೀಸಲಿಟ್ಟವರು ಇವರು. ಉತ್ತರಕನ್ನಡದಲ್ಲಿ ಕೆಂಬಾವುಟವನ್ನು ಹಾರಿಸಿದ ಮೊದಲಿಗರಲ್ಲಿ ಇವರು ಸೇರುತ್ತಾರೆ. ಕಮ್ಯುನಿಷ್ಟ್ ಎಂದರೆ ನಮ್ಮ ಧಾರೇಶ್ವರರ ಪಕ್ಷವಲ್ಲವೇ? ಎಂದು ಕೇಳುವಷ್ಟರ ಮಟ್ಟಿಗೆ ಅವರು ಈ ನೆಲದಲ್ಲಿ ಮಾರ್ಕ್ಸ್‌ವಾದದ ತತ್ವವನ್ನು ಬಿತ್ತಿದರು. ರೈತ ಹೋರಾಟದ ಮೂಲಕ ಕಾರ್ಮಿಕ ಚಳುವಳಿಯ ಮೂಲಕ ವಕೀಲಿ ವೃತ್ತಿಯ ಮೂಲಕ, ಒಂದು ವೈಚಾರಿಕ ಚರ್ಚೆಯನ್ನು ಈ ಜಿಲ್ಲೆಯಲ್ಲಿ ಧಾರೇಶ್ವರರು ಹುಟ್ಟುಹಾಕಿದರು.

ಮೂಲತಃ ಕುಮಟಾ ತಾಲೂಕಿನ ಧಾರೇಶ್ವರರವರಾದ ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು ಆ ಕಾರಣಕ್ಕಾಗಿ ಜೈಲು ಕಂಡವರು ಬೆಳಗಾವಿಯಲ್ಲಿ ವಕೀಲ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಮಾರ್ಕ್ಸ್‌ವಾದಿ ಚಿಂತನೆಯ ಕಡೆಗೆ ಸೆಳೆಯಲ್ಪಟ್ಟರು. ಕೆಲವು ವರ್ಷಗಳ ಕಾಲ ಅವರು ಹೊನ್ನಾವರದಲ್ಲಿ ಶಿಕ್ಷಕರಾಗಿ ಕೂಡ ಕೆಲಸ ಮಾಡಿದರು. ಶಾಲಾ ಮಕ್ಕಳಿಗೆ ಪಾಠಹೇಳುವುದು ಬಿಟ್ಟು ಶಿರ್ಸಿಯಲ್ಲಿ ವಕೀಲಿ ವೃತ್ತಿ ನಡೆಸುತ್ತಾ ಸಮಾಜಕ್ಕೆ ಪಾಠಹೇಳಲು ಪ್ರಾರಂಭಿಸಿದರು ಖ್ಯಾತ ಕ್ರಿಮಿನಲ್ ವಕೀಲರಾದ ಇವರ ವಾದವನ್ನು ಕೇಳಲು ನ್ಯಾಯಾಲಯಕ್ಕೆ ಜನಬರುತ್ತಿದ್ದರೆಂಬುದನ್ನು ಕೇಳಿದ್ದೇವೆ. ವಕೀಲಿ ವೃತ್ತಿಯಿಂದ ಎಷ್ಟು ಹಣಗಳಿಸಿದರು ಗೊತ್ತಿಲ್ಲ ಆದರೆ ಜನರ ಪ್ರೀತಿಯನ್ನಂತೂ ಗಳಿಸಿದರು. ಪ್ರೀತಿಯ ಧಾರೇಶ್ವರ ವಕೀಲರಾಗಿ ಹೆಸರು ಪಡೆದರು. ಗೋವಾ ವಿಮೋಚನಾ ಹೋರಾಟದಲ್ಲಿ ಇವರು ಪಾಲ್ಗೊಂಡಿದ್ದರು.

ಸ್ವಾತಂತ್ರ್ಯ ಹೋರಾಟಗಾರರು ಕಂಡ ಸ್ವಾಭಿಮಾನಿ, ಸ್ವಾವಲಂಬಿ ದೇಶವನ್ನು ಕಟ್ಟಲು ಆಡಳಿತದಲ್ಲಿರುವ ಕಾಂಗ್ರೆಸ್‌ನಿಂದ ಸಾಧ್ಯವಿಲ್ಲ ಎನ್ನುವುದನ್ನು ಬಹುಬೇಗ ಅರ್ಥಮಾಡಿಕೊಂಡ ಧಾರೇಶ್ವರರು ಅದಕ್ಕಾಗಿ ಆಯ್ಕೆ ಮಾಡಿಕೊಂಡಿದ್ದು ಮಾರ್ಕ್ಸ್‌ವಾದಿ ಚಿಂತನೆಯನ್ನು ವೈಜ್ಞಾನಿಕ ಮತ್ತು ಕ್ರಾಂತಿಕಾರಿ ಮಾರ್ಕ್ಸ್‌ವಾದಿ ಚಿಂತನೆಗಳ ಅಡಿಯಲ್ಲಿ ಕಾರ್ಯ ಮಾಡಿಸುತ್ತಿರುವ ಕಮ್ಯುನಿಷ್ಟ್ ಪಕ್ಷದ ಸದಸ್ಯತ್ವ ಪಡೆದರು. ಉ.ಕನ್ನಡದಲ್ಲಿ ಕಮ್ಯುನಿಷ್ಟ್ ಚಳುವಳಿಯನ್ನು ಹುಟ್ಟುಹಾಕಲು ಬಂದ ಕಾಂ। ಎನ್.ಎಲ್.ಉಪಾಧ್ಯಾಯರ ಮಾರ್ಗದರ್ಶನದಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ಪಡೆದರು. ಪಕ್ಷ ವಿಭಜನೆ ಆದಾಗ ಸಿಪಿಐ(ಎಂ) ಪಕ್ಷದಲ್ಲಿ ಮುಂದುವರಿದರು. ಅವರೊಂದಿಗೆ ಶಿರ್ಸಿಯಲ್ಲಿ ಪಕ್ಷ ಕಟ್ಟಿ ಬೆಳೆಸಲು ಒಟ್ಟಾಗಿ ದುಡಿದ ಮಂಜುನಾಥ ಪುಲ್ಕರ, ಪಿ.ಜಿ. ಮಶಾಲ್ದಿ ಮುಂತಾದವರು ಈಗಲೂ ಧಾರೇಶ್ವರ ಅವರ ಕೊಡುಗೆಯನ್ನು ನೆನಪಿಸಿಕೊಳ್ಳುತ್ತಾರೆ.

ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಸ್ಪಷ್ಟ ಮಾತುಗಳಿಂದ ಖಂಡಿಸುತ್ತಿದ್ದ ಧಾರೇಶ್ವರರಿಗೆ ಇವರ ವಿರುದ್ಧ ಎಲ್ಲೇ ಸಣ್ಣ ಧ್ವನಿ ಎದ್ದರೂ ಅದನ್ನು ಬೆಂಬಲಿಸುತ್ತಿದ್ದರು. ಸಾಹಿತ್ಯ-ಸಾಂಸ್ಕೃತಿಕ-ರಾಜಕೀಯ ಎಲ್ಲಾ ತರಹದ ಸಭೆಗಳಲ್ಲಿ ಧಾರೇಶ್ವರರು ಹಾಜರಿರುತ್ತಿದ್ದರು. ಅದು ಪ್ರಗತಿಪರವಾದರೆ ಬೆಂಬಲಿಸುತ್ತಿದ್ದರು. ಇಲ್ಲದಿದ್ದರೆ ಅಲ್ಲೇ ಉಗಿದು ಬರುತ್ತಿದ್ದರು. ಕೊನೆಯವರೆಗೂ ಅವರು ಓದನ್ನು ಕೈಬಿಟ್ಟಿರಲಿಲ್ಲ. ಯಾವತ್ತೂ ಕಪ್ಪು ಕೋಟು, ತಲೆಯಲ್ಲಿ ಒಂದು ಹ್ಯಾಟಿನೊಂದಿಗೆ ಕೈಯಲ್ಲಿ ಪುಸ್ತಕ ಮತ್ತು ಪತ್ರಿಕೆ ಇರುತ್ತಿತ್ತು. ವಿದ್ಯಾರ್ಥಿಗಳಿಗೆ ಚಳುವಳಿಯಲ್ಲಿ ಇರುವವರಿಗೆ ಓದಲು ಒತ್ತಾಯಿಸುತ್ತಿದ್ದರು. ಕೊಟ್ಟ ಪುಸ್ತಕಗಳು ವಾಪಾಸಾಗಲಾರವು ಎಂದು ಗೊತ್ತಿದ್ದರೂ ಪುಸ್ತಕ



ಕೊಟ್ಟು ಓದಿಸುವುದು ಅವರ ರೂಢಿ.

ಶಿರ್ಸಿ, ಸಿದ್ಧಾಪುರ, ಹೊನ್ನಾವರ, ಕಾರವಾರಗಳಲ್ಲಿ ರೈತ ಕೂಟ ಕಟ್ಟುವಲ್ಲಿ ಅವರು ಸಕ್ರಿಯವಾದರು. ಭಟ್ಕಳದಲ್ಲಿ ಮೀನುಗಾರ ಮಹಿಳೆಯರನ್ನು ಕೂಲಿಕಾರ್ಮಿಕರನ್ನು ಸಂಘಟಿಸಿ ಹೋರಾಟಕ್ಕೆ ಹಚ್ಚಿದರು. ಕಾರ್ಮಿಕ ಸಂಘಟನೆಯಲ್ಲಿ (ಕೆ.ಎಸ್.ಆರ್.ಟಿ.ಸಿ. ಯೂನಿಯನ್) ನಾಯಕರಾಗಿ ದುಡಿದರು. ತಾನು ಮಾಡಿದ ಹಣವನ್ನೆಲ್ಲಾ ಸಂಘಟನೆ ಪಕ್ಷಕ್ಕಾಗಿ ಸುರಿದರು. ಸಮಾಜದ ಎಲ್ಲಾ ಕಟ್ಟಳೆಗಳನ್ನು ಪ್ರತಿಭಟನೆಗಳನ್ನು ಬದಿಗೊತ್ತಿ ಕಾಮಾಕ್ಷಿ ಎನ್ನುವವರನ್ನು ವಿವಾಹವಾದರು. ಇದು ಅಂತರ್ ಜಾತಿಯ ಮದುವೆ. ಮೂರು ಜನ ಮಕ್ಕಳು. ಖ್ಯಾತ ಸಾಹಿತಿ ನಿರಂಜನರ ಮಗಳಾದ ಲೇಖಕೀ ತೇಜಸ್ವಿನಿ ಇವರ ಸೊಸೆ. ಇಡೀ ಕುಟುಂಬ ವೈಚಾರಿಕ ಜಾಗೃತಿ ಉಳ್ಳದ್ದು, ಪ್ರಗತಿಪರ ಆಲೋಚನೆಯೊಂದಿಗೆ ಲೇಖನಿಯನ್ನು ಹೊಂದಿದವರು. ಮಗ ಅಶೋಕ, ವಿವೇಕ ಸೊಸೆ ತೇಜಸ್ವಿನಿ ಖ್ಯಾತ ಲೇಖಕರು ಕೂಡ.

ಚಳುವಳಿಯ ಕಾರಣಕ್ಕಾಗಿಯೇ ಅನೇಕ ಬಾರಿ ಜೈಲು ಕಂಡ ಧಾರೇಶ್ವರರು ಅದರಿಂದ ವಿಚಲಿತ ಆದವರಲ್ಲ, ಅವರ ಮೇಲೆ ಪೊಲೀಸ್ ದಬ್ಬಾಳಿಕೆ ನಡೆವಾಗಲೆಲ್ಲಾ ಜನ ಅವರನ್ನು ಬಿಡಿಸಿಕೊಂಡು ಬಂದಿದ್ದಾರೆ. ಮತ್ತಷ್ಟು ಛಲದಿಂದ ಹೋರಾಟ ಮಾಡಿದ್ದಾರೆ. ಸಿರ್ಸಿಯಲ್ಲಿ ಚಹಾದ ಬೆಲೆ ಪೈಸೆ ಹೆಚ್ಚಾದಾಗ ಅವರು ನಡೆಸುವ ಚಳುವಳಿ "ನಯಾಪೈಸೆ" ಚಳುವಳಿ ಎಂದೇ ಹೆಸರಾಗಿದೆ. ಇಡೀ ಜಿಲ್ಲೆಯಲ್ಲಿ ಒಂದು ರೀತಿಯ ಪ್ರತಿಭಟನೆಯ ಕಿಡಿ ಹಚ್ಚಿದ ಘಟನೆ ಇದು. ವಿದೇಶೀಯ ಪತ್ರಿಕೆಯಲ್ಲಿಯೂ ಇದು ಸುದ್ದಿಯಾಯಿತು. 1 ಪೈಸೆಯನ್ನು ಕಡಿಮೆ ಮಾಡಿಯೇ ಹೋರಾಟನಿಲ್ಲಿಸಿದ್ದು. ಕಟ್ಟಿಗೆ ಚಳುವಳಿ ಇನ್ನೊಂದು ಮುಖ್ಯ ಚಳುವಳಿ. ಕಾಡಿನಿಂದ ಚಕ್ಕಡಿಗಾಡಿಯ ಮೇಲೆ ಕಟ್ಟಿಗೆತರಲು ಅಡ್ಡಿಪಡಿಸಿದಾಗ ರೈತ ಕೂಟದ ಕೆಂಬಾವುಟದಡಿಯಲ್ಲಿ ಸೂಕ್ತ ವ್ಯವಸ್ಥೆಗಾಗಿ ಅಗ್ರಹಿಸಿ 300-400 ಚಕ್ಕಡಿಗಾಡಿ (ಎತ್ತಿನಗಾಡಿ)ಯ ಮೆರವಣಿಗೆ ನಡೆಸಿದ್ದರು. ರೇಷನ್‌ಗಾಗಿ ನಡೆಸಿದ ಚಳುವಳಿ ಸಿರ್ಸಿ ಭಾಗದ ಹಳ್ಳಿಗಳಲ್ಲೂ ಇನ್ನೂ ನೆನೆಸುತ್ತಾರೆ. ಭಟ್ಕಳದ ಮೀನು ಮಾರ್ಕೆಟ್ಟಿಗಾಗಿ, ಅವರಿಗೆ ಮನೆಕಟ್ಟಿಕೊಳ್ಳುವ ಭೂಮಿಗಾಗಿ ನಡೆದ ಹೋರಾಟಕ್ಕೆ ಧಾರೇಶ್ವರರು ನಾಯಕತ್ವ ನೀಡಿದ್ದು ಇನ್ನೂ ಹಸಿರಾಗಿದೆ. ನಾನು ವಿದ್ಯಾರ್ಥಿಯಾಗಿರುವಾಗ ಭಟ್ಕಳದ ಪ್ರದೇಶದಲ್ಲಿ ಅವರೊಂದಿಗೆ ಒಂದೆರಡು ಹೋರಾಟದಲ್ಲಿ ಪಾಲ್ಗೊಂಡಿದ್ದೇವೆ. ಅವರೆಂದರೆ ಪೊಲೀಸ್ ಅಧಿಕಾರಿಗಳು ನಡುಗುತ್ತಾ ನಿಂತಿದ್ದು ನೋಡಿದ್ದೇನೆ. ಅವರನ್ನು ಅರೆಸ್ಟ್ ಮಾಡಿದ್ದಾರೆಂದು ಸುದ್ದಿಕೇಳಿಯೇ ನೂರಾರು ಜನ ಠಾಣೆಗೆ ಮುತ್ತಿಗೆ ಹಾಕಿದನ್ನು ನೋಡಿದ್ದೇವೆ. ಸಿರ್ಸಿಯ ನಗರ ಸಭೆಯ ಸದಸ್ಯರಾಗಿ ಅನೇಕ ಹೋರಾಟವನ್ನು ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ವಿದ್ಯಾರ್ಥಿ ಚಳುವಳಿ ಬಗೆಗೆ ಧಾರೇಶ್ವರರಿಗೆ ವಿಶೇಷ ಪ್ರೀತಿ.

ವಿಠಲ ಭಂಡಾರಿ

ಸಂತಾಪ

ಧಾರೇಶ್ವರರ ಅಗಲಿಕೆಯಿಂದ ಪ್ರಗತಿಪರ ದುಡಿಯುವ ಜನರ ಒಬ್ಬ ನೆಚ್ಚಿನ ಒಡನಾಡಿಯನ್ನು ಕಳೆದುಕೊಂಡಿದೆ.

ಅವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಜನತೆ ಅಪಾರ ಸಂಖ್ಯೆಯಲ್ಲಿ ನೆರೆದರು. ಸಿಪಿಐ(ಎಂ) ಪಕ್ಷದ ಉತ್ತರ ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶಾಂತರಾಮ ನಾಯಕ್ ಮಂಜುನಾಥ ಪುಲಕರ್ ಸದಸ್ಯರಾದ ಸಿ. ಆರ್. ಶ್ಯಾನ್‌ಭಾಗ, ಪಿ.ಜಿ. ಮಶಾಲ್ದಿ, ಎಂ.ಬಿ.ನಾಯಕ್, ಮಾಧವ ಸೇರೆಗಾರ್, ಭೀಮರಾಮ್ ಜಿರಟಗಿ ಮುಂತಾದವರು ತೆರಳಿ ಶ್ರದ್ಧಾಂಜಲಿ ಸಲ್ಲಿಸಿದರು. ಶವ ಸಂಸ್ಕಾರದಲ್ಲಿ ಭಾಗವಹಿಸಿದ್ದರು.

ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣರಾವ್‌ರವರು ಅವರ ಕುಟುಂಬದವರಿಗೆ ಪತ್ರ ಬರೆದು ಈ ಶೋಕದಲ್ಲಿ ಭಾಗಿಯೆಂದು ಸಂತಾಪ ಸೂಚಿಸಿದ್ದಾರೆ.

ಇಲ್ಲಿ ಮಕ್ಕಳ ಮಾರ್‍ಯಾರೋೀ.........

ಪುಟ 4 ರಿಂದ

ಭೂತವಾಗಿ ಕಾಡುತ್ತಿದೆ. ಎಂದಾದರೂ ಒಂದು ದಿನ ಹೆಣ್ಣು ಪರರ ಸ್ವತ್ತು ಎಂದು ಬಗೆದು ಹುಟ್ಟಿದ ಕೂಡಲೇ ಪರರ ಸ್ವತ್ತು ಮಾಡಿರಬಹುದೇ ಈ ಲಂಬಾಣಿಗರು? "ಪಟ್ಟಣಗಳಲ್ಲಿ ಹೊಟ್ಟೆಯಲ್ಲಿ ಹೆಣ್ಣಿದೆ ಎಂದರೆ ಸಾಕು ಕತ್ತರಿಸಿ ಬೀಸಾಕುತ್ತಾರೆ. ನಾವು ಹಾಗೆ ಮಾಡುತ್ತಿಲ್ಲ. ಹೆತ್ತು ಹೆರವರಿಗೆ ಮಾರುತ್ತಿದ್ದೇವೆ ನಮ್ಮದೇನು ತಪ್ಪು? ಎಂದು ಪ್ರಶ್ನಿಸುವ ಲಂಬಾಣಿ ತಾಯಿಯ ಮಾತಿನಾಳ ಪ್ರಶ್ನಾರ್ಹವೋ... ಪ್ರಶ್ನಾತೀತವೋ.. ಹೇಗೆ ಹೇಳುವುದು.

ಕಣ್ಣಿಗೆ ಮಣ್ಣು ಹಾಕಿಕೊಂಡಿರುವ ಪೋಲೀಸರು

ಮಕ್ಕಳ ಮಾರಾಟದ ಪ್ರಕರಣ ಬಯಲಿಗೆ ಬಂದ ಕೂಡಲೇ ಪತ್ರಕರ್ತರು ಪೊಲೀಸರು ತಾಂಡಾಗಳಿಗೆ ಭೇಟಿಯಿತ್ತರು ಕಳೆದ ಐದಾರು ವರ್ಷಗಳಿಂದ ಈ ದಂಧೆ ನಡೆಯುತ್ತಿದೆ ಎಂದರೆ ಪೊಲೀಸರೇನು ಕಣ್ಣಲ್ಲಿ ಮಣ್ಣು ಹಾಕಿಕೊಂಡಿದ್ದರೆ ಎಂಬ ಆಪಾದನೆ ತಮ್ಮ ಮೇಲೆ ಬರುವುದೆಂದು ಎಸ್ಪಿ ಅಲೋಕಕುಮಾರ್‌ಗೆ ಅನಿಸಿರಲಿಕ್ಕೆ ಸಾಕು. ಆದ್ದರಿಂದಲೇ ಕೆಲವರಿಗೆ ಹೊಡೆ ಬಡೆ ಮಾಡಿದರು. ಇಂತಹ ಅನಾಚಾರಕ್ಕೆ ಹೆಸರಾದ ಎಎಸ್‌ಪಿ, ಡಿ.ಸಿ ರಾಜಪ್ಪನಂತೂ "ಮಕ್ಕಳ ಮಾರಾಟ ಧರ್ಮದ ಹೆಸರಿನಲ್ಲಿ ನಡೆದಿದೆ.." ಎಂದು ಹೇಳಿಕೆ ಕೊಟ್ಟು ತನ್ನ ಹೋಣೆಗೇಡಿತನ ಪ್ರದರ್ಶಿಸಿಬಿಟ್ಟನು. ಆದರೆ ಜನ ಅದನ್ನು ಪ್ರತಿಭಟಿಸಿದರು. ಯಾವ ಧರ್ಮವೂ ಮಕ್ಕಳನ್ನು ಮಾರಲು ಹೇಳಿಲ್ಲ ಎಂಬ ಮಾತಿಗೆ ಪೊಲೀಸ್ ಮಿದುಳಿನಲ್ಲಿ ಮಾತುಗಳಿರಲಿಲ್ಲ.

ಬೆಥನಿ ಹೋಂ ಎಂಬ ಅನಾಥಾಶ್ರಮವು ಪಕ್ಕದ ತಾಂಡೂರು(ಆ.ಪ್ರ)ನಲ್ಲಿದೆ. ಅದರ ಸಂಸ್ಥಾಪಕಿ ಸಾವಿತ್ರಮ್ಮ ಅಮೇರಿಕಾದಲ್ಲಿರುವಳು. ಪೀಟರ್ ಸುಬ್ಬಣ್ಣ ಮತ್ತು ಕ್ರಿಸ್ಟೋಫರ್ ಎಂಬ ದಲ್ಲಾಳಿಗಳು ಮಕ್ಕಳ ಮಾರಾಟದ ವ್ಯಾಪಾರ ಕುದುರಿಸಿ ಮಕ್ಕಳನ್ನು ಒಯ್ದು ಕೊಡುವವರು ಎಂದು ಗೊತ್ತಾಗಿದೆ. ಒಟ್ಟಾರೆ ಇಡೀ ಪ್ರಕರಣ ತನಿಖೆಯಾಗಬೇಕಿದೆ. ಈಗಾಗಲೇ ತಾಂಡೂರಿನ ಬೆಥನಿ ಹೋಂ ಅನಾಥಾಶ್ರಮದಲ್ಲಿ 19 ಮಕ್ಕಳಿವೆ. ಉಳಿದ ಮಕ್ಕಳೆಲ್ಲಿ ಎಂಬ ಪ್ರಶ್ನೆಗೆ ಉತ್ತರ ಬೇಕಿದೆ. ಆಂಧ್ರದ ಪೊಲೀಸರೂ ತನಿಖೆಯಲ್ಲಿದ್ದಾರಂತೆ. ಬೆಥನಿ ಹೋಂ ಎಂಬ ಅನಾಥಾಶ್ರಮ ಕಾನೂನು ಬದ್ಧವಾಗಿದೆಯೇ...? ತನ್ನಲ್ಲಿರುವ ಅನಾಥ ಮಕ್ಕಳನ್ನು ದತ್ತು ಕೊಡುತ್ತದೆಯೇ? ಕೊಟ್ಟಲ್ಲಿ ದತ್ತು ಪ್ರಕ್ರಿಯೆಗೆ ಬೇಕಾದ ಕಾನೂನು ಪರಿಪಾಲಿಸಿದೆಯೇ? ಹೀಗೆ ಹತ್ತು ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಜೊತೆಗೆ ಇಡೀ ಜಗತ್ತೇ ಇವತ್ತು ಹಳ್ಳಿಯಾಗುತ್ತಿರುವ ಸಂದರ್ಭದಲ್ಲಿ ಈ ಹಸುಕಂದಮ್ಮಗಳನ್ನು ಯಾವುದಾದರೂ ಪ್ರಯೋಗಗಳಿಗೆ ಬಲಿಪಶುಗಳಾಗಿಸುವ ಅಂತರ್‌ರಾಷ್ಟ್ರೀಯ ಜಾಲವೇನಾದರೂ ಇದೆಯೇ ಎಂಬ ಅನುಮಾನವೂ ಸುಳಿದಾಡುತ್ತದೆ. ಅಲ್ಲದೆ, ಬೆಳೆಯುತ್ತಿರುವ ವಿಜ್ಞಾನ ತಂತ್ರಜ್ಞಾನ ಯುಗದಲ್ಲೂ ಅನೇಕ ಹಲವು ಯಾಗ ಯಜ್ಞಗಳು ಯಥೇಚ್ಛವಾಗಿ ತಲೆ ಎತ್ತುತ್ತಿವೆ. ಮೂಢ ನಂಬಿಕೆ ಕಂದಾಚಾರದ ಹೆಸರಲ್ಲಿ ಸಂಪತ್ತಿನ ಆಸೆಗೆ ಅಧಿಕಾರದ ಆಮಿಷಕ್ಕೆ ಈ ಹಸುಳೆಗಳನ್ನು ನೇವೇದ್ಯ ಮಾಡಲಾಗುತ್ತಿದೆಯೇ....? ಏನು ? ಒಟ್ಟು ಪ್ರಾಮಾಣಿಕ ತನಿಖೆಯಿಂದ ಪ್ರಕರಣ ಬಯಲಿಗೆ ಬರಬೇಕಿದೆ.

ಸಚಿವರ ಭಂಡತನದ ಪರಾಕಾಷ್ಠೆ

ಆದರೆ ಇದೆಲ್ಲದರ ನಡುವೆ ಕ್ರಿಕೆಟ್ ಮಾತಾಡುವ ಮುಖ್ಯಮಂತ್ರಿ ಎಸ್. ಎಂ. ಕೃಷ್ಣನ ಕಲ್ಲು ಹೃದಯಕ್ಕೆ ಈ ಪ್ರಕರಣ ತಟ್ಟಲೇ ಇಲ್ಲ. ಆಳುವ ವರ್ಗಗಳ (ಪಕ್ಷಗಳ) ತಪ್ಪಿನಿಂದಾಗಿ ಇಂತಹ ಘಟನೆಗಳು ಘಟಿಸುತ್ತಿವೆ. ಸೌಜನ್ಯಕ್ಕಾಗಿಯಾದರೂ ಭೇಟಿ ಮಾಡುವ ಮಾನವೀಯ ಮನಸ್ಸೂ ಕೃಷ್ಣರಿಗಿಲ್ಲ ಎಂಬುದು ಜಾಹೀರಾಗಿದೆ. ಇದೇ ಸಂದರ್ಭದಲ್ಲಿ ಪಾಳೇಪಟ್ಟುಗಳ ಧಾಟಿಯಲ್ಲಿ ದರ್ಬಾರಿಕೆ ನಡೆಸುತ್ತಿರುವ ಗೃಹ ಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರು ತನ್ನದೇ ತಾಯ್ನಾಡಿನ ಈ ಪ್ರಕರಣಕ್ಕೆ ಚೂರು ಸಹ ಮಿಡಿಯಲಿಲ್ಲ. ಮಾತ್ರವಲ್ಲ ಆರೂ ಜನ ಮಂತ್ರಿಗಳು ಭಂಡತನ ಮತ್ತು ಸ್ವಾರ್ಥಲಾಲಸೆಯ ಪರಾಕಾಷ್ಠೆಗೆ ಮುಟ್ಟಿರುವುದು ಈಗ ಅಂಗೈ ಹುಣ್ಣಾಗಿರುವುದರಿಂದ ಕನ್ನಡಿ ಬೇಕಿಲ್ಲ.

ಎಲ್.ಪಿ.ಜಿಗೂ ಮಕ್ಕಳ ಮಾರಾಟಕ್ಕೂ ಸಂಬಂಧವುಂಟೆ?

ಹೌದು ಕೇಂದ್ರ ಮತ್ತು ರಾಜ್ಯ ಸರಕಾರಗಳು ಹೊಸ ಆರ್ಥಿಕ ನೀತಿಯನ್ನು ಚಾಚೂ ತಪ್ಪದೆ ಜಾರಿ ಮಾಡುತ್ತಿದೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳಿಂದಾಗಿ ದೇಶದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಕುಸಿದಿದೆ. ನಿರುದ್ಯೋಗ ತಾಂಡವವಾಡುತ್ತಿದೆ. ಕೂಲಿ ಕಾರ್ಮಿಕರಿಗೆ ಕೆಲಸ ಸಿಗುತ್ತಿಲ್ಲ. ಕೆಲಸ ಸಿಕ್ಕರೂ ಕೂಲಿ ಸಿಗುತ್ತಿಲ್ಲ. ವಿದ್ಯುಚ್ಛಕ್ತಿ ನೀರು, ಶಿಕ್ಷಣ, ಆರೋಗ್ಯ ಹೀಗೆ ಎಲ್ಲವನ್ನು ಹಣವಿದ್ದವರಿಗೆ ಮಾತ್ರ ಎಂಬ ಬೋರ್ಡು ತಗುಲಿಸಲಾಗಿದೆ. ಇವೆಲ್ಲವುಗಳ ದುಷ್ಟ ಪರಿಣಾಮ ನಿಮಗೆ ನೋಡಬೇಕೆನಿಸಿದಲ್ಲಿ ಮೇಲೆ ಹೇಳಿದ ಎಲ್ಲಾ 60 ತಾಂಡಾಗಳಿಗೂ ಬನ್ನಿ. ಅಲ್ಲಿ ನಿಮಗೆ ಸಾಕ್ಷಿ ಸಹಿತ ನೋಡಲು ಸಿಗುತ್ತದೆ. ಆದ್ದರಿಂದಲೇ **ಹೆತ್ತವರು ತಮ್ಮ ಕರುಳಿನ ಕುಡಿಗಳನ್ನೇ ಸರಕಾಗಿಸುವಂತಹ ಕೆಲಸಕ್ಕೆ ಇಳಿಯುವಂತಹ ದಾರುಣ ಸ್ಥಿತಿಗೆ ಬಂದಿರುವುದಕ್ಕೆ ಆಳುವ ಸರಕಾರಗಳೇ ಹೊಣೆಯಲ್ಲವೇ..?** ಆದರೆ ದಿಲ್ಲಿ ಗದ್ದುಗೆ ಹಿಡಿದ ಎನ್.ಡಿ.ಎ ಕೂಟವಾಗಲಿ ಬೆಂಗಳೂರು ಸಿಂಹಾಸನದಲ್ಲಿ ಕೂತ ಕಾಂಗ್ರೆ ಪಾಳೇಯವಾಗಲಿ ಒಮ್ಮೆಯಾದರೂ ಜನತೆಗೆ ತಾವು ಎಸಗುತ್ತಿರುವ ದ್ರೋಹದ ಬಗ್ಗೆ ಪುನರಾವಲೋಕನ ಮಾಡಿಕೊಳ್ಳಲು ಸಿದ್ಧವಾಗುತ್ತಿಲ್ಲ. ಇವುಗಳಿಗೆ ಜನದ್ರೋಹಿ ಸರಕಾರಗಳೆನ್ನದೆ ಬೇರೆ ಶಬ್ದಗಳುಂಟೆ? ಇವುಗಳನ್ನು ಬದಲಿಸದ ಹೊರತು ನಮಗೆ ಬೇರೆ ದಾರಿಯಿಲ್ಲ.

ಈ ಪ್ರಕರಣವನ್ನು ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಗಳು ಖಂಡಿಸಿದೆವು. ಆರ್ಥಿಕ ಬಿಕ್ಕಟ್ಟಿನ ಕಾರಣದಿಂದ ಮಕ್ಕಳನ್ನು ಮಾರಿಕೊಳ್ಳಲಾಗುತ್ತಿದೆ. ಅಲ್ಲಿ ಉದ್ಯೋಗಗಳನ್ನು ಸೃಷ್ಟಿಸಬೇಕು. ಖಾಲಿ ಕೈಗಳಿಗೆ ಕೆಲಸ ಕೊಡಬೇಕು ಮತ್ತು ಇಡೀ ಪ್ರಕರಣದ ತನಿಖೆಯಾಗಬೇಕೆಂದು ಕೆ.ಪಿ.ಆರ್.ಎಸ್. ಒತ್ತಾಯಿಸಿದೆ. ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಕಾರಣದಿಂದ ಆರ್ಥಿಕ ಬಿಕ್ಕಟ್ಟು ಹೆಚ್ಚುತ್ತಿದೆ. ಇದರ ಕರಿ ನೆರಳಿಗೆ ಬಡ ಜನತೆಯೇ ಮೊದಲ ಬಲಿಪಶುವಾಗುತ್ತಿದ್ದಾರೆ. ಆದ್ದರಿಂದಲೇ ಮಕ್ಕಳ ಮಾರಾಟವು ನಡೆಯುತ್ತಿದೆ. ಅದರಲ್ಲೂ ಹೆಣ್ಣು ಶಿಶುಗಳದ್ದೇ ಮಾರಾಟ ನಡೆಯಲಿಕ್ಕೆ ಲಿಂಗಬೇಧ ನೀತಿಯೂ ಕಾರಣವಾಗಿದೆ ಎಂದು ಎಐಜೆಎಂಎಸ್ ಹೇಳಿದೆ. ಜೊತೆಗೆ ದಿ. 4.4.2001 ರಂದು ಪ್ರಕರಣದ ಸಂಪೂರ್ಣ ತನಿಖೆಗೆ ಒತ್ತಾಯಿಸಿ ಮತ್ತು ಅಲ್ಲಿಯ ಜನರ ಜೀವನದ ಮಟ್ಟವನ್ನು ಆರ್ಥಿಕವಾಗಿ ಮೇಲೆತ್ತಲು ಸರ್ಕಾರ ಮುಂದಾಗಲು ಆಗ್ರಹಿಸಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನಾ ಧರಣೆ ನಡೆಸಿದೆ. ಚಿಂಚೋಳಿಯಲ್ಲಿಯೂ 7 ರಂದು ಪ್ರತಿಭಟನಾ ಪ್ರದರ್ಶನ ನಡೆಸಲಾಗಿದೆ. ಸಿಪಿಐ(ಎಂ) ಧಾರವಾಡ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆಯವರು ಪ್ರದೇಶಕ್ಕೆ ಭೇಟಿ ನೀಡಿದ್ದಾರೆ.

ರಾಷ್ಟ್ರೀಯ ನಾಟಕ ಶಾಲೆ ಎಂಬುದು ಎಷ್ಟು ರಾಷ್ಟ್ರೀಯ?

ಬೇಕಿದೆ ಜನರ ಅಭಿವ್ಯಕ್ತಿಯನ್ನು ರಕ್ಷಿಸುವ ಚಳುವಳಿ

— ಪ್ರಸನ್ನ



ಭಾರತದ ಸಂವಿಧಾನವು ತನ್ನ ಎಂಟನೆಯ ಪರಿಚ್ಛೇದದಲ್ಲಿ ಸೇರಿಸಿರುವ ಎಲ್ಲ ಭಾಷೆಗಳನ್ನೂ ರಾಷ್ಟ್ರಭಾಷೆಗಳೆಂದು ಮಾನ್ಯ ಮಾಡುತ್ತದೆ. ಕನ್ನಡ ಭಾಷೆ ರಾಜ್ಯ ಭಾಷೆ ಮಾತ್ರವೇ ಆಗಿರದೆ ರಾಷ್ಟ್ರಭಾಷೆಯೂ ಆಗಿದೆ. ಅಂತೆಯೇ ಕನ್ನಡ ರಂಗಭೂಮಿ ಪ್ರಾಂತೀಯ ರಂಗಭೂಮಿ ಮಾತ್ರವೇ ಆಗಿರದೆ ರಾಷ್ಟ್ರೀಯ ರಂಗಭೂಮಿಯೂ ಆಗಿದೆ. ತಮಿಳು, ಮಲಯಾಳಂ, ಅಸ್ಸಾಮಿ, ಪಂಜಾಬಿ, ಗುಜರಾತಿ ಇತ್ಯಾದಿ ಎಲ್ಲ ರಂಗಭೂಮಿಗಳೂ ಈ ದೇಶದ ರಾಷ್ಟ್ರೀಯ ರಂಗಭೂಮಿಗಳೇ ಆಗಿವೆ.

ಆದರೆ ಕೇಂದ್ರ ಸರಕಾರವು ಕಳೆದ ಐವತ್ತು ವರ್ಷಗಳಿಂದಲೂ ಏಕಭಾಷೆ ಹಾಗೂ ಕೇಂದ್ರೀಕೃತ ಸಂಸ್ಕೃತಿಯ ಪ್ರತೀಕವಾದ ಮರೀಚಿಕೆಯೊಂದನ್ನು ರಾಷ್ಟ್ರೀಯ ರಂಗಭೂಮಿಯೆಂದು ಕರೆದು ನಮ್ಮಗಳ ಮೇಲೆ ಹೇರಿದೆ. ಹಾಗೂ ಭಾಷಾ ರಂಗಭೂಮಿಯನ್ನು ಎರಡನೆ ದರ್ಜೆ ಪ್ರಜೆಗಳನ್ನಾಗಿಸಿದೆ. ದೆಹಲಿ ಕೇಂದ್ರಿತವಾದ ಈ ತಪ್ಪು ನೀತಿಯಿಂದಾಗಿ ಸ್ವಾತಂತ್ರ ಸಂಗ್ರಾಮದ ಮುಂಚೂಣಿಯಲ್ಲಿದ್ದ ಜೀವಂತ ಮಾಧ್ಯಮವೊಂದು ಇಂದು ತೊಗಲುಬೊಂಬೆಯಂತಾಗಿದೆ. **ರಾಷ್ಟ್ರೀಯ ರಂಗಭೂಮಿಯೆಂಬುದು ರಾಜಧಾನಿ ರಂಗಭೂಮಿ ಮಾತ್ರವೇ ಆಗಿ, ಆಳುವ ಪ್ರಭುಗಳು ಹಾಗೂ ವಿದೇಶಿ ಪ್ರವಾಸಿಗಳೆದುರು ನರ್ತಿಸುವ ಸಾಧನವಾಗಿ ಪರಿಣಮಿಸಿದೆ. ನಾವು ಈ ಅಸಮತೋಲವನ್ನು ಪ್ರತಿಭಟಿಸುತ್ತೇವೆ ಹಾಗೂ ಜನರ ಅಭಿವ್ಯಕ್ತಿಯನ್ನು ಉಳಿಸುವ ರಾಷ್ಟ್ರೀಯ ಹೋರಾಟವೊಂದಕ್ಕೆ ನಾಂದಿ ಹಾಡುತ್ತಿದ್ದೇವೆ.**

ಕೇಂದ್ರ ಸರಕಾರದ ದ್ವಿಮುಖ ನೀತಿ ಅರ್ಥವಾಗಬೇಕಿದ್ದರೆ ಹಿಂದಿ ರಂಗಭೂಮಿಯನ್ನು ಗಮನಿಸುವುದು ಒಳ್ಳೆಯದು. ಹಿಂದಿಯನ್ನು ರಾಷ್ಟ್ರೀಯ ರಂಗಭೂಮಿಯ ಅಧಿಕೃತ ಭಾಷೆ ಎಂದು ಮಾನ್ಯ ಮಾಡಿರುವುದರಿಂದಾಗಿ ಹಿಂದಿ ಮಾತನಾಡುವ ರಾಜ್ಯಗಳಲ್ಲಿ ರಂಗಭೂಮಿ ಅಭಿವೃದ್ಧಿಹೊಂದಿದೆ ಎಂಬ 'ತಪ್ಪು ಕಲ್ಪನೆ' ಸಾಧ್ಯವಿದೆ. ಆದರೆ ಇತ್ತೀಚಿನ ಒಂದು ಅಧ್ಯಯನದ ಪ್ರಕಾರ ಹಿಂದಿ ಮಾತನಾಡುವ ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಜಮ್ಮು ಇತ್ಯಾದಿ ಪ್ರಾಂತ್ಯಗಳಲ್ಲಿ ರಂಗಭೂಮಿಯ ಮೂಲ ಸೌಲಭ್ಯಗಳು ಸ್ವಾತಂತ್ರ್ಯ ನಂತರದಲ್ಲಿ ಮತ್ತಷ್ಟು ಹಾಳಾಗಿದೆಯೇ ಹೊರತು ಅಭಿವೃದ್ಧಿಯಾಗಿಲ್ಲ. ಇನ್ನು ಹಿಂದಿಯೇತರ ರಾಜ್ಯಗಳ ಪರಿಸ್ಥಿತಿಯಂತೂ ದೇವರಿಗೇ ಪ್ರೀತಿ ಎಂಬಂತಾಗಿದೆ.

ಕೇಂದ್ರ ಸರ್ಕಾರದ ಆಯವ್ಯಯದ ಅರ್ಧಕ್ಕಿಂತಲೂ ಹೆಚ್ಚಿನ ಹಣ (ರಂಗಭೂಮಿಗೆ ಸಂಬಂಧಸಿದ್ದು) ದೆಹಲಿ ನಗರವೊಂದರ ಮೇಲೆಯೇ ಖರ್ಚಾಗುತ್ತಿದೆ. ರಂಗಭೂಮಿಗೆ ಸಂಬಂಧಿಸಿದ ಸಂಸ್ಥೆಗಳೆಲ್ಲವೂ ದೆಹಲಿಯಲ್ಲಿ ಕೇಂದ್ರೀಕೃತವಾಗಿದೆ ಹಾಗೂ ದೆಹಲಿಯ ಜನರಿಗೆ ಮಾತ್ರ ಸೇವೆ ನೀಡುತ್ತಿದೆ. ರಾಷ್ಟ್ರೀಯ ನಾಟಕ ಶಾಲೆ, ರಾಷ್ಟ್ರೀಯ ನಾಟಕ ತಂಡ, ಸಂಗೀತ ನಾಟಕ ಅಕಾಡೆಮಿ, ಮಕ್ಕಳ ರಂಗಭೂಮಿ ಅಭಿವೃದ್ಧಿ ಸಂಸ್ಥೆ (TIE), ಸಾಂಸ್ಕೃತಿಕ ಪರಿಕರಗಳ ಅಭಿವೃದ್ಧಿ ಸಂಸ್ಥೆ (CCRT), ಅಂತರಾಷ್ಟ್ರೀಯ ಸಾಂಸ್ಕೃತಿಕ ಸಂಬಂಧಗಳ ರಾಷ್ಟ್ರೀಯ ಸಂಸ್ಥೆ (ICCR) ಇತ್ಯಾದಿ ಎಲ್ಲವೂ ದೆಹಲಿಗೆ ಸೀಮಿತವಾಗಿ ಉಳಿದಿದೆ.

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಗೆಂದು ಕೇಂದ್ರ ಸರ್ಕಾರ ಮಾಡುವ ಖರ್ಚು ಪ್ರತಿ ವಿದ್ಯಾರ್ಥಿಗೆ ಒಂದು ಕೋಟಿ ರೂಪಾಯಿಗಳಾಗುತ್ತದೆ! ಅದೇ ಕರ್ನಾಟಕದ ಆರು ಕೋಟಿ ಜನರಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಡುತ್ತಿರುವ ಒಟ್ಟು ವೆಚ್ಚ ಕನ್ನಡಿಗನೊಬ್ಬನಿಗೆ ಒಂದು ವರ್ಷಕ್ಕೆ ಇಪ್ಪತ್ತೈದು ಪೈಸೆ ಮಾತ್ರ! ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಅನುದಾನ ಕೇವಲ ಐದು ಲಕ್ಷ ರೂಪಾಯಿಗಳು ಮಾತ್ರ!

ಭಾರತ ದೇಶ ಕಳೆದ ಎರಡು ಮೂರು ದಶಕದಲ್ಲಿ ಬಹು ದೊಡ್ಡ ಸಾಮಾಜಿಕ ಬದಲಾವಣೆಯನ್ನು ಕಂಡಿದೆ. ಈವರೆಗೂ ಧ್ವನಿಯಿರದ ಕೋಟ್ಯಾಂತರ ಭಾರತೀಯರು ಈಗ ಸಮಾಜದ ಮುಂಚೂಣಿಗೆ ಬಂದಿದ್ದಾರೆ. ಅವರ ಅಭಿವ್ಯಕ್ತಿಯನ್ನು ರೂಢಿಸಬೇಕಿದೆ. ಶಿಕ್ಷಣ, ಕೈಗಾರಿಕೆ, ಆಡಳಿತ ಇತ್ಯಾದಿ ರಂಗಗಳಲ್ಲಿ ಅವರ ನಾಯಕತ್ವವನ್ನು ರೂಪಿಸಬೇಕಿದೆ. ಅಭಿವ್ಯಕ್ತಿ ರೂಢಿಸುವಲ್ಲಿ ರಂಗ ತರಬೇತಿ ಅತ್ಯಂತ ಸಮರ್ಪಕವಾದ ಹಾಗೂ ಕಡಿಮೆ ಖರ್ಚಿನ ಮಾಧ್ಯಮವೆಂದು ಪ್ರಪಂಚದಾದ್ಯಂತ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಶಿಕ್ಷಣದಲ್ಲಿ ಮಗುವಿನ ಪುಸ್ತಕದ ಹೊರೆ ಇಳಿಸಲಿಕ್ಕೆ, ಮನೋರೋಗ ಚಿಕಿತ್ಸೆಯಲ್ಲಿ, ಸಮಾಜಿಕ ಚಳುವಳಿಗಳಲ್ಲಿ ರಂಗ ತರಬೇತಿಯೆಂದರೆ 'ನಾಟಕ ತರಬೇತಿ' ಮಾತ್ರವೆಂಬ ಪೂರ್ವಾಗ್ರಹ ಅಧಿಕಾರಿಗಳು ಹಾಗೂ ರಾಜಕಾರಣಿಗಳ ನಡುವೆ ಬೇರೂರಿದೆ.

ಟಿ.ವಿ. ಸಿನಿಮಾ ಇತ್ಯಾದಿ ಮನರಂಜನೆಯ ಕೈಗಾರಿಕೆಗಳು ನಮ್ಮ ಸಾಂಸ್ಕೃತಿಕ ಕಾಡುಗಳಿಗೆ ಲಗ್ಗೆ ಹಾಕುತ್ತಿರುವ ಸಂದರ್ಭದಲ್ಲಿ ಜನರ ಅಭಿವ್ಯಕ್ತಿಯ ಪ್ರಶ್ನೆ ಬೃಹದಾಕಾರವಾಗಿ ಬೆಳೆದುನಿಂತಿದೆ. ರಂಗಭೂಮಿ ಜನರ ಅಭಿವ್ಯಕ್ತಿಯ ಮಾಧ್ಯಮವಾಗಬೇಕಿದ್ದರೆ ಅದು ಜನರ ಭಾಷೆಯಲ್ಲಿ ನುಡಿಯುವುದು ಹಾಗೂ ಜನರಿರುವ ಕಡೆಗಳಲ್ಲಿ ನಡೆಯುವುದು ಅನಿವಾರ್ಯ. ಭಾರತೀಯ ರಂಗಭೂಮಿಯನ್ನು ಜನಪರ ರಂಗಭೂಮಿಯಾಗಿಸಲು ಹೋರಾಡಬೇಕು. ಜನರ ಅಭಿವ್ಯಕ್ತಿಯನ್ನು ರಕ್ಷಿಸುವ ಹೋರಾಟವಾಗಿ ಬೆಳೆಯಬೇಕು.

ಕಥೆ

ಈ ಸಾರಿ

— ಪ್ರಕಾಶ್ ಆರ್. ಕಮ್ಮಾರ್

ಶಿರುವಾಳದ ಕನ್ನಪ್ಪ ಬಡವ ಅಂದ್ರೆ ಬಡವ. ಅವನಿಗಿರೋದೆ ಅರ್ಧ ಎಕರೆ ಹೊಲ ಮಾತ್ರ. ಇದರಿಂದ ಬಂದ ಉತ್ಪನ್ನ ಸಂಸಾರಕ್ಕೆ ಸಾಕಾಗುತ್ತಿರಲಿಲ್ಲ. ಬೇರೆಯವರ ಹೊಲದಲ್ಲಿ ಕೆಲಸ ಮಾಡಿ ಸಂಸಾರ ನಡೆಸಲು ಬಹಳ ಶ್ರಮಿಸುತ್ತಿದ್ದ. ಹೆಂಡತಿಯೂ ಕೂಡ ಅವನ ಜೊತೆಗೂಡುತ್ತಿದ್ದಳು.

ಕನ್ನಪ್ಪ, ಪಕ್ಕದ ಹಳ್ಳಿ ಭೀಮನೇರಿಯ ಹೆಣ್ಣನ್ನು ಮದುವೆಯಾಗಿದ್ದ. ಚೊಚ್ಚಲುಹೆರಿಗೆ, ತೌರು ಮನೆಗೆ ಹೋಗಿದ್ದಾಳೆ ಹೆಂಡತಿ.

ಎರಡು ದಿನ ಕಳೆದ ಮೇಲೆ ಹೆಣ್ಣು ಮಗು ಹುಟ್ಟಿತೆಂದು ವಿಷಯ ತಿಳಿತು. ಬೇಜಾರು ಮಾಡಿಕೊಂಡು ಮನೀಗೆ ಹೋಗದೇ ಹೊಲ್ದಾಗೆ ಕೆಲಸ ಮಾಡ್ತಿದ್ದ. ಮತ್ತೊಮ್ಮೆ ಹೇಳಿ ಕಳಿಸಿದ್ರೂ ಹೆಂಡ್ತಿ ಊರಿಗೆ ಹೋಗಿರಲಿಲ್ಲ. ಅವನವ್ವನೇ ಬಂದು, "ಏ ಕನ್ನ, ಓಗಿ ಬಾರ್ಲಾ, ಬಾಣಂತಿನ,ಕೂಸ್ನ ನೋಡ್ಕಂಡು ಬಾ" ಎಂದು ಗದರಿಸಿದಳು.

ಅವ್ವ ಹೇಳಿದ ಮ್ಯಾಕೆ ಕನ್ನಪ್ಪ ಊರಿಗೆ ಹೋಗಿದ್ದ. ಗೌರ ಸಪ್ಪಗಿದ್ದಳು. ಗಂಡನನ್ನು ಕಂಡು, ನಿಧಾನ ದನಿಯಲ್ಲ,

"ದ್ಯಾವರು ಈಂಗ ಮಾಡಿಬಿಟ್ಟ. ನಮ್ಮ ಆಸೆ ಈಡೇರ್ಸಲಿಲ್ಲ. ಮುಂದಿನ ಸಾರಿ ಗಂಡೇ ಅಡೀತೀನಿ" ಎಂದಳು ದೈನ್ಯತೆಯಿಂದ. ಅವನ ಮನಸ್ಸು ಗಂಡು ಮಗುವಾಗಲಿಲ್ಲ ಎಂದು ಹೆಂಡ್ತಿ ಹತ್ತಿರ ಸರಿಯಾಗಿ ಮಾತನಾಡಲಿಲ್ಲ. ಆ ದಿವ್ಸ ಇದ್ದು, ಮಾರನೇ ದಿನ ತನ್ನೂರಿಗೆ ವಾಪಾಸ್ಸಾದ. ಅವನ ತಾಯಿ ಮಗನನ್ನು ಕಂಡು-

"ಏನ್ಲಾ ಕನ್ನ, ಸೊಸೆ ಎಂಗವಳೆ, ಕೂಸು ಛನಾಗೈತೇನ್ಲಾ" ಎಂದು ಕೇಳಿದಳು

"ವೂ, ಹೆಣ್ಣು ಕೂಸು ಕಣವ್ವಾ" ಎಂದು ಕೂಗಿದ.

ಮುದುಕಿ ಚಡಪಡಿಸುತ್ತಾ "ಕೂಸು ಯಾರಂಗೈತ್ಲಾ" ಎಂದಾಗ ಸುಮ್ಮನಿದ್ದ. ಮತ್ತೆ ಅವನವ್ವ 'ಯಾರಂಗೈತ್ಲಾ' ಎಂದು ಜೋರಾಗಿ ಕೇಳಿದಳು.

"ವಸಿ ನಿನ್ನಂಗೈತೆ" ಎಂದು ಸಿಡಿಮಿಡಿಕೊಂಡಿದ್ದ.

ಹಿಂಗೆ ದಿನಾ ಹೊಲಕ್ಕೆ ಹೋಗ್ತಿದ್ದ ಕನ್ನಪ್ಪ. ಕೆಲಸ ಜೋರಾಗಿದೆ. ಅವನಿಗೆ ಸಾಲಾಗಿ ನಾಲ್ಕು ಹೆಣ್ಣೇ ಆಗಿವೆ. ಗೌರ ಮತ್ತೀಗ ಬಸುರಿ, ದಿನ ತುಂಬಿವೆ. ಮಗಳ ಆರೈಕೆಗೆ, ಬಾಣಂತಿತನಕ್ಕೆ ಅಂತಾ ಅವನ ಅತ್ತೆ ಇಲ್ಲಿಗೆ ಬಂದಿದ್ದಾಳೆ.

ಕನ್ನಪ್ಪ ಅಂದು ಬೆಳಿಗ್ಗೆ, ಹೊತ್ಲೆ ಹೊಲಕ್ಕೆ ಹೋಗಿದ್ದ. ಗೌರಿಗೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಮನೆಯಲ್ಲಿ ಸೂಲುಗಿತ್ತೇರೆಲ್ಲ ಸೇರಿದ್ದರು. ಮಧ್ಯಾಹ್ನ ಊಟಕ್ಕೇ ಬರದೆ, ಕನ್ನಪ್ಪ, ರೆಟ್ಟೆ ಮುರಿದು ಹೊಲದಲ್ಲಿ ಕೆಲಸ ಮಾಡುತ್ತಿದ್ದ. ಮಗಳು ಊಟಕ್ಕೆ ಕರೆದ್ರೆ,

"ಬರಲ್ಲಾ, ವೋಗು" ಎಂದು ಸಿಟ್ಟು ಮಾಡಿದ್ದ. ಮಗಳು ಪೆಚ್ಚುಮೋರೆ ಹಾಕ್ಕೊಂಡು ಮನೆಗೋಗಿದ್ದಳು. ಆಗಲೆ ಅವರವ್ವಂಗೆ ಹೆರಿಗೆ ನೋವು ಹೆಚ್ಚಾಗಿತ್ತು.

ನರಳಾಟ ಜೋರಾಗಿತ್ತು. ಸುಮಾರು ದೂರ ಕೇಳ್ತಿತ್ತು.

ಅವರವ್ವನ ನರಳಾಟ ಕಂಡು ಹೊರಗಡೆ ಇದ್ದ ಹುಡುಗಿಯರು ಗಾಬರಿಯಾಗಿದ್ದರು.

"ಏ ಅಕ್ಕಾ, ಅವ್ವನ ನರಳಾಟ ನೋಡಿದ್ರೆ ಗಂಡು ಮಗಾನೆ ಆಗೋದು ಕಣೇ" ಎಂದೊಬ್ಬಳು ಹೇಳಿದಾಗ, "ಹೌದು ಕಣೇ, ಈ ಸಾರಿ ಅವ್ವನ ನರಳಾಟ ಜೋರಾಗೈತೆ, ಗಂಡು ಮಗಾನೆ ಆಗೋದು" ಎಂದು ಇನ್ನೊಬ್ಬಳು ಧ್ವನಿಗೂಡಿಸಿದಳು.

ಈ ಹುಡುಗಿಯರು, "ಏನೇ ಆದ್ರೂ ನಮ್ಮವ್ವನಿಗೆ ಈ ಸಾರಿಯಾದ್ರೂ ಗಂಡು ಮಗುವಾಗಲೀ" ಎಂದು ಮನದಲ್ಲಿಯೇ ದೇವರನ್ನು ಧ್ಯಾನಿಸುತ್ತಾ, ತಮ್ಮ ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು.

ಅಷ್ಟರಲ್ಲಿಯೇ ಅಜ್ಜಿ ಹೊರಗೆ ಬಂದ್ಳು. ಆ ಹುಡುಗಿಯರು ಗಾಬರಿಯಿಂದ ಅಜ್ಜೀತವ ಓಡಿ ಬಂದರು. "ಏ! ಏ! ಯಾಕಂಗ ಓಡಬರ್ತೀರಿ! ವಸಿ ನಿಲ್ರಿ. ನಿಮ್ಮವ್ವಂಗೆ ಗಂಡು ಮಗು ಉಟ್ಟೈತೆ ಕಣ್ರೇ. ನಿಮ್ಮಪ್ಪಂಗೆ ವೋಗಿ ಏಳ್ರೀ" ಎಂದಳು. ಅಷ್ಟು ಹೇಳಿದ್ದೇ ತಡ, ಆ ಮಕ್ಕಳು ಖುಷಿಯಾಗಿ ಒಂದೇ ಉಸುರಿಗೆ ಹೊಲಕ್ಕೆ ಓಡಿದರು. ಪಾಪ! ಏದುರಿಸಿರು ಬಿಡುತ್ತಾ ಅವರು ಅಪ್ಪನ ಮುಂದೆ ನಿಂತ್ಯಾರೆ.

"ಅಪ್ಪಾ..."

"ಏ ಅಪ್ಪಾ.."

"ಅಪ್ಪಾ..."

"ಏ... ಅಪ್ಪಾ..." ಎಂದು ಕೂಗೇ ಕೂಗಿದರು. ಏನು ಅಂದ್ರೂ, ಕನ್ನಪ್ಪ ಇವರ ಕಡೆ ಮುಖ ತಿರುಗಿಸದೇ ಬದ ಕಡೀತಾನೆ ಇದ್ದ. ಅದಕ್ಕೆ ಆ ಹುಡುಗಿಯರು ಪುನಹ-

"ಅಪ್ಪಾ.." ಎಂದು ಒಟ್ಟಿಗೆ ಜೋರಾಗಿ ಕೂಗಿದರು. ಅದಕ್ಕೆ ಅವನು ಕಣ್ಣು ಕೆಂಪಗೆ ಮಾಡಿ "ಆ! ಏನ್ರೇ ? ಮುಂಡೇರಾ" ಎಂದು ಗದರಿಸಿದ.

ಆ ಮಕ್ಕಳು "ತಮ್ಮ ಉಟ್ಯಾನೆ" ಎಂದು ಹೆದರಿಕೆಯಿಂದ ನಿಧಾನವಾಗಿ ಹೇಳಿದರು. ಕಣ್ಣಗಲಿಸಿ, "ಆ! ಅಂಗ!, ನಿಜವೇನ್ರೇ"ಎಂದ.

"ವೂ ಕಣಪ್ಪ" ಎಂದಾಕ್ಷಣ ಅವ ಹೊಲದ ಕೆಲಸ ಮಾಡೋದನ್ನೇ ನಿಲ್ಲಿಸಿಬಿಟ್ಟ. ಅವನ ತಲೆಗೆ ಮಿಂಚು ಹೊಡೆದಂಗಾಗಿ -

"ಇನ್ನು ನಂಗೇನು ಕೆಲ್ಸ. ಈ ಒಲ್ದಾಗೆ, ಬೇಕಾದ್ರೆ ಅವ ಮಾಡ್ಕಂತಾನೆ" ಎಂದು ಗುದ್ದಲಿ, ಪಿಕಾಸಿ ಎಲ್ಲಾ ಬಿಸಾಕಿ, ಮಕ್ಕಳ ಜೊತೆ ಓಡಿದ, ಮನೆಗೆ

'ಭಾವನ' ಮಾಸ ಪತ್ರಿಕೆಯಿಂದ

ಸಾದರ ಸ್ವಿಕಾರ

ಪರಮಾಣು ಶಸ್ತ್ರಾಸ್ತ್ರಗಳು
ಲೇ: ನಿರಂಜನ ಆರಾಧ್ಯ
ಬೆಲೆ. ರೂ. 22

ಕನ್ನಡ ನಾಡಿನ ಕೂಸುಮರಿ
ಲೇ: ಎನ್. ಶ್ರೀನಿವಾಸ ಉಡುಪ
ಬೆಲೆ ರೂ. 15

ಭಾನುವಾರವೆಂದರೆ
ಲೆ: ಸುಕನ್ಯಾ ಕಳಸ
ಬೆಲೆ ರೂ. 20

ಸೂಪರ್ ಕೆಲ್ಲಾನ್
ಲೇ: ಡಾ|| ಪಂಡಿತ ವಿದ್ಯಾಸಾಗರ
ಬೆಲೆ ರೂ. 45

ಜೂಜಾಟ
ಲೇ: ನೀಳಾದೇವಿ
ಬೆಲೆ ರೂ. 28

ಗ್ರಾಹಕರ ಸಂರಕ್ಷಣಾ ಕಾಯಿದೆ
ಲೇ: ವೈ.ಜಿ.ಮುರುಳಿಧರ
ಬೆಲೆ ರೂ. 18

ಮನೆಯ ಅಂದ ಕೈತೋಟ
ಲೇ: ಡಾ| ಪಿ.ಶಿವರಾಮ ಪೈ
ಬೆಲೆ ರೂ. 40

ಆಲಿಕೆ
ಲೇ: ಡಾ|| ಪುರುಷೋತ್ತಮ
ಬೆಲೆ ರೂ. 20

ಕಂದಾ ಅಕ್ಷರ ಕಲಿ
ಲೇ: ಬಿ.ಕೆ.ತಿರುಮಲಮ್ಮ
ಬೆಲೆ ರೂ. 35

ರಾಮನ ಸಾಮರ್ಥ್ಯ
ಲೇ: ನವಗಿರಿ ನಂದ
ಬೆಲೆ ರೂ. 25

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್
ಎಂಬೆಸಿ ಸೆಂಟರ್, ಬೆಂಗಳೂರು

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : S.Y.GURUSHANTH